ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ಅವರು ಇಂದು (ಶನಿವಾರ, ಸೆಪ್ಟೆಂಬರ್ 19) ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ.

20 ಸೆಪ್ಟೆಂಬರ್, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -189 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ರೋಗಿ ಭಾರತೀಯ, ಬಿಲ್ ಲಾಭ ವಿದೇಶಕ್ಕೆ » 2



ಸಹಕಾರಿ ಕ್ಷೇತ್ರದಿಂದ ದೇಶದ ಆರ್ಥಿಕತೆ ಸದೃಢ » 3



ಭಾರತ ಸೇರಿ ಹಲವು ರಾಷ್ಟ್ರಗಳಿಗೆ ಶೇ.100 ಸುಂಕ » 4

# ಹೊಸದಾಗಿ ಜಮೀನು ಒತ್ತುವರಿ ಮಾಡಬೇಡಿ

## ಮಲೆನಾಡಿನ ಜನರಿಗೆ ಸಿ.ಎಂ. ಸಲಹೆ | ಚಿಕ್ಕಮಗಳೂರು, ಶಿವಮೊಗ್ಗಾದಲ್ಲೂ ಸಂಪುಟ ಸಭೆ

• ಪ್ರಜೋದಯ ವರದಿ

**ಚಿಕ್ಕಮಗಳೂರು:** ರೈತರು ಹೊಸದಾಗಿ ಅರಣ್ಯ ಜಾಗವನ್ನು ಒತ್ತುವರಿ ಮಾಡಬಾರದು, ಇರುವ ಜಮೀನನ್ನು ಭದ್ರವಾಗಿ ಇಟ್ಟುಕೊಳ್ಳಬೇಕೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಲಹೆ ನೀಡಿದರು.

ಬಾಳೆಹೊನ್ನೂರಿನಲ್ಲಿ ಶನಿವಾರ ಕಸ್ತೂರಿ ರಂಗನ್ ವರದಿ ಕುರಿತು ರೈತರು, ಸಾರ್ವಜನಿಕರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೊಸದಾಗಿ ಒತ್ತುವರಿ ಮಾಡಿದರೆ ಅದಕ್ಕೆ ಅವಕಾಶ ನೀಡುವುದಿಲ್ಲ. ಈಗ ನಿಮಗೆ ಇರುವ ನಿಮ್ಮ ಜಮೀನನ್ನು ಭದ್ರವಾಗಿ ಇಟ್ಟುಕೊಳ್ಳಿ. ಯಾರಿಗೂ ತೊಂದರೆ, ನೋಟೀಸ್ ಕೊಡಬೇಡಿ ಎಂದು ಅರಣ್ಯ ಇಲಾಖೆಗೆ ಹೇಳಿದ್ದೇನೆಂದರು.

ಲೀಜ್ ವಿಚಾರದಲ್ಲಿ ಎಲ್ಲರಿಗೂ 25 ವರ್ಷ ಅವಕಾಶ ನೀಡಬೇಕೆಂದು ತೀರ್ಮಾನಿಸಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲು ಚಿಂತನೆ ನಡೆದಿದೆ. ಪರಿಸರ ಸೂಕ್ಷ್ಮ ವಲಯ ಕೈಬಿಡುವಂತೆ ರೈತರು ಸೂಚಿಸಿದ್ದಾರೆ. ಕೇಂದ್ರಕ್ಕೆ ಯಾವ ರೀತಿ ವರದಿ ಕೊಡಬಹುದೆಂದು ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳುತ್ತೇವೆಂದು ಮಾಹಿತಿ ನೀಡಿದರು.



ಮಳೆಗಾಗಿ ನಾನು ಎಲ್ಲಾ ಕಡೆ ಪ್ರಾರ್ಥನೆ ಮಾಡಿದ್ದೇನೆ. ಋಷ್ಯಶೃಂಗೇಶ್ವರ ದೇವಾಲಯಕ್ಕೆ ನಾನು ಬರಬೇಕು. ಸರ್ಕಾರದ ಪರವಾಗಿ ಪೂಜೆ ಮಾಡಿಸಲು ಹೇಳಿದ್ದೆ, ಆಸೆಯಂತೆ ಪೂಜೆ ನಡೆದಿದೆ. ನಿಮ್ಮ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳಲು ಇಲ್ಲಿಗೆ ಬಂದಿದ್ದೇನೆ. ಮುಂದೆ ಶಿವಮೊಗ್ಗಾ, ಚಿಕ್ಕಮಗಳೂರಿನಲ್ಲೂ ಸಚಿವ ಸಂಪುಟ ಸಭೆ ಮಾಡುತ್ತೇನೆಂದರು.

ನನಗೂ ಈ ಜಾಗಕ್ಕೂ ಭಾವಾನಾತ್ಮಕ ಸಂಬಂಧವಿದೆ. ಮಂಗಳೂರಿನಲ್ಲಿ ಕರಾವಳಿ ಬಗ್ಗೆ ಮಾತ್ರ ಚಿಂತೆ ಮಾಡಿಲ್ಲ. ಮಲೆನಾಡು-ಕರಾವಳಿಗೆ ವಿಶೇಷ ಪ್ಯಾಕೇಜ್ ಮಾಡಿದ್ದೇವೆ. 320 ಕಿ.ಮೀ. ವಿಶೇಷ ಪಾಲಿಸಿ ತಂದಿದ್ದೇನೆ. ವಲಸೆ ಹೋಗುವುದು ತಪ್ಪಬೇಕು, ಇಲ್ಲಿಯೇ ಕೆಲಸ ಸಿಗಬೇಕು. ಅದಕ್ಕೆ ಹೊಸ ರೂಪುರೇಷೆ ಮಾಡಿದ್ದೇವೆ. ಈ ಸಭೆ ಮಾಡಬೇಕಾದರೆ, ನಿಮ್ಮ ಶಾಸಕರು, ಜಿಲ್ಲಾ ಮಂತ್ರಿ, ಎಲ್ಲರ ಸಮಸ್ಯೆ ಕೇಳಿದ್ದೇನೆ. ಅಧಿವೇಶನದಲ್ಲಿ ಕಿರುಚಿ ಕಾಲ ಕಳೆಯುತ್ತಿದ್ದರು. ಅದಕ್ಕೆ ನಾನೇ ಪ್ರತ್ಯೇಕವಾಗಿ ಕರೆಸಿ ಮಾತನಾಡಿದೆ. ಸೆ.27ರ ಒಳಗೆ ವರದಿ ನೀಡುವಂತೆ ಅಧಿಕಾರಿಗಳಿಗೆ ಹೇಳಿದ್ದೇನೆಂದರು.

### ಹಾಲಿನ ದರ ಏರಿಕೆ ಚರ್ಚೆ

ಹಾಲಿನ ಖರೀದಿ ದರ ಏರಿಕೆ ಮಾಡಬೇಕು ಎಂದು ರೈತರಿಂದ ಬೇಡಿಕೆ ಹೆಚ್ಚಾಗಿದ್ದು, ಈ ಸಂಬಂಧ ಶೀಘ್ರವೇ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ತಮಿಳುನಾಡಿನಲ್ಲಿ ಲೀಟರ್ ಹಾಲಿಗೆ 9ರಿಂದ 10 ರೂ. ಹೆಚ್ಚಳ ಮಾಡಲಾಗಿದೆ. ಅದೇ ರೀತಿ ಕರ್ನಾಟಕದಲ್ಲೂ ಉತ್ಪಾದಕರಿಗೆ ಲೀಟರ್ ಹಾಲಿಗೆ 8ರಿಂದ 9 ರೂ. ಹೆಚ್ಚಳ ಮಾಡಬೇಕೆಂದು ರೈತರು ಗಲಾಟೆ ಮಾಡುತ್ತಿದ್ದಾರೆ. ಆದ್ದರಿಂದ ಶೀಘ್ರವೇ ಹಾಲಿನ ಒಕ್ಕೂಟಗಳ ಸಭೆ ನಡೆಸಲಾಗುವುದೆಂದು ಹೇಳಿದರು.

ಇಂಡಿ, ಬೂಸಾ ಬೆಲೆ ಜಾಸ್ತಿಯಾಗಿದ್ದು, ಮೇವು ಸಿಗದಂತಾಗಿದೆ. ಹಾಲು ಉತ್ಪಾದಕ ರೈತರು ನಷ್ಟ ಅನುಭವಿಸುತ್ತಿದ್ದಾರೆ. ಹಾಲು ಉತ್ಪಾದಕ ಸಹಕಾರ ಸಂಘಗಳು ಕೂಡ ನಷ್ಟದಲ್ಲಿವೆ. ಪಕ್ಕದ ರಾಜ್ಯಗಳಲ್ಲಿ ಹಾಲಿನ ದರ ಜಾಸ್ತಿ ಇರುವುದರಿಂದ ಅಲ್ಲಿಗೆ ಹೆಚ್ಚಿನ ಪ್ರಮಾಣದಲ್ಲಿ ಹಾಲು ಹೋಗುತ್ತಿದೆ. ಅದರಿಂದ ನಂದಿನಿ ಹಾಲು ಉತ್ಪಾದಕ ಸೊಸೈಟಿಗಳು ನಷ್ಟ ಅನುಭವಿಸುವಂತಾಗಿದೆ. ಆದ್ದರಿಂದ ಇದನ್ನು ತಡೆಯಲು ಏನು ಮಾಡಬೇಕು ಎಂಬುದರ ಕುರಿತು ಚರ್ಚಿಸಲಾಗುವುದು ಎಂದು ತಿಳಿಸಿದರು.

### ಬದುಕಿನ ರಾಜಕಾರಣ ಮಾಡುತ್ತಿರುವೆ

ನಿಮ್ಮ ಬದುಕನ್ನ ಬದಲಿಸಬೇಕು, ಬದಲಾವಣೆ ತರಬೇಕು ಎನ್ನುವುದು ನನ್ನ ಸಂಕಲ್ಪ. ಭಾವನೆ ಮೇಲೆ ರಾಜಕಾರಣ ಮಾಡುತ್ತಿಲ್ಲ, ಬದುಕಿನ ರಾಜಕಾರಣ ಮಾಡುತ್ತಿದ್ದೇನೆ. ನಾನು ಹೃದಯ ಶ್ರೀಮಂತಿಕೆ ಇಟ್ಟುಕೊಂಡಿರುವ ವ್ಯಕ್ತಿ, ಜನರ ಭಾವನೆ ತಿಳಿದು ವಿಧಾನ ಸಭೆಯಲ್ಲಿ ಉತ್ತರಿಸಲು ಬಂದಿದ್ದೇನೆ.

ರಾಜ್ಯದಲ್ಲಿ ಮಳೆ ಇಲ್ಲ, ಬರವಿದೆ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಕೂಡ ನಮಗೆ ಸೂಚನೆ ನೀಡಿದ್ದರು. ರೈತರ ಸಮಸ್ಯೆ, ಬರದ ಬಗ್ಗೆ 3 ದಿನ ಅಧಿವೇಶನದಲ್ಲಿ ಚರ್ಚೆ ನಡೆಯಲಿದೆ. ನೀವು ನನ್ನ ಭೇಟಿ ಮಾಡಲು ಕಷ್ಟ ಆಗಬಹುದು. ಅದೇ ಕಾರಣಕ್ಕೆ ಪ್ರಜಾಸೇವೆ ಇಲಾಖೆ ತಂದಿದ್ದೇನೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

# ಏತ ನೀರಾವರಿಗೆ ಪ್ರಾಯೋಗಿಕ ವಿದ್ಯುತ್: ಎಚ್ಚರ ವಹಿಸಲು ಸೂಚನೆ

• ಪ್ರಜೋದಯ ವರದಿ

**ಹಾಸನ:** ಬಹುನಿರೀಕ್ಷಿತ ಮಾವಿನಕೆರೆ ಏತ ನೀರಾವರಿ 2ನೇ ಹಂತದ ಕಾಮಗಾರಿ ಪೂರ್ಣಗೊಂಡಿದ್ದು ಪ್ರಾಯೋಗಿಕವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. ವ್ಯಾಪ್ತಿಯ ಸಾರ್ವಜನಿಕರು ಎಚ್ಚರದಿಂದ ಇರಲು ಸೂಚಿಸಿದೆ.

ಕಾವೇರಿ ನೀರಾವರಿ ನಿಗಮದಿಂದ ಹೇಮಾವತಿ ಬಲದಂಡೆ ನಾಲಾ ಉಪವಿಭಾಗ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಸಹಯೋಗದಲ್ಲಿ ಸ್ವಯಂ ನಿರ್ವಹಣೆ ಅಡಿ ಹಂಗರಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಿಂದ ಯೋಜನೆಯ 2ನೇ ಹಂತದ ಪಂಪ್ ಹೌಸ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯು ಮುಕ್ತಾಯಗೊಂಡಿದೆ. ವಿದ್ಯುತ್ ಮಾರ್ಗದಲ್ಲಿ ಸೆ.19ರ ನಂತರ ದಿನಗಳಲ್ಲಿ 66 ಕೆ.ವಿ. ವಿದ್ಯುತ್ ಹರಿಸಲಾಗುವುದು. ಆದ್ದರಿಂದ ಸಾರ್ವಜನಿಕರು ಈ ಮಾರ್ಗದ ವಿದ್ಯುತ್ ಗೋಪುರ ಹತ್ತುವುದಾಗಲಿ, ಅವುಗಳಿಗೆ ದನ-ಕರುಗಳ ಕಟ್ಟುವುದಾಗಲಿ, ಹಸಿರು ಬಳ್ಳಿ ಅಥವಾ ಲೋಹದ ತಂತಿಗಳನ್ನು ಎಸೆಯುವುದಾಗಲಿ ಮಾಡಬಾರದು. ಅದರಿಂದ ಸಾರ್ವಜನಿಕರ ಆಸ್ತಿ-ಪಾಸ್ತಿ ಮತ್ತು ಪ್ರಾಣಕ್ಕೆ ಹಾನಿಯಾಗುವ ಸಂಭವವಿರುತ್ತದೆ. ಮೇಲೆ ತಿಳಿಸಿರುವ ಯಾವುದೇ ತರಹದ ದುಷ್ಕೃತ್ಯಗಳಿಗೆ ಒಳಗೊಂಡ ಅಪಘಾತ ಅಥವಾ ಹಾನಿ ಸಂಭವಿಸಿದರೆ ಅವರೇ ಜವಾಬ್ದಾರರಾಗಿರುತ್ತಾರೆ. ವಿದ್ಯುತ್ ಮಾರ್ಗದ 18 ಮೀ. ಕಾರಿಡಾರ್ ಅಡಿಯಲ್ಲಿ ಕಟ್ಟಡ ಕಟ್ಟುವುದಾಗಲಿ ಅಥವಾ ಮರಗಳನ್ನು ಬೆಳೆಸು ವುದಾಗಲಿ ಮಾಡಬಾರದು. ಸಾರ್ವಜನಿಕರ ಬೇಜವಾಬ್ದಾರಿಯಿಂದ ಆಗುವ ಅನಾ ಹುತಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಜವಾಬ್ದಾರಿಯಲ್ಲವೆಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಕಾರ್ಯನಿರ್ವಾಹಕ ಇಂಜಿನೀಯರ್ ತಿಳಿಸಿದ್ದಾರೆ.

ಅದೇ ರೀತಿ ಮರ್ಕುಲಿ ಗ್ರಾಮದ ಏತ ನೀರಾವರಿ ಯೋಜನೆಯ 2ನೇ ಹಂತದ ಪಂಪ್ ಹೌಸ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯು ಮುಕ್ತಾಯಗೊಂಡಿದ್ದು ಸೆ.19ರ ನಂತರದ ದಿನಗಳಲ್ಲಿ 66 ಕೆ.ವಿ. ವಿದ್ಯುತ್ ಹರಿಸಲಾಗುವುದು. ಸಾರ್ವಜನಿಕರು ಮುಂಜಾಗ್ರತೆ ವಹಿಸುವಂತೆ ತಿಳಿಸಿದ್ದಾರೆ.

# ನಾಲೆಯ ಕೊನೆಯ ಭಾಗಕ್ಕೂ ನೀರು ತಲುಪಿಸಿ: ರೇವಣ್ಣ

## ನೀರಿನ ಸ್ಥಿತಿ ಪರಿಶೀಲಿಸಿ, ರೈತರ ಸಮಸ್ಯೆ ಆಲಿಸಲು ಒತ್ತಾಯ

• ಪ್ರಜೋದಯ ವರದಿ

**ಹೊಳೆನರಸೀಪುರ:** ಹೇಮಾವತಿ ಬಲದಂಡೆ ನಾಲೆಯ ಕೊನೆಯ ಭಾಗದ ರೈತರಿಗೂ ಸಮರ್ಪಕವಾಗಿ ನೀರು ತಲುಪಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಒತ್ತಾಯಿಸಿದರು.

ತಾಲ್ಲೂಕಿನ ಅರೇಹಳ್ಳಿ ಸಮೀಪದ ಶ್ರವಣೂರು, ನಗರ್ತಿ, ಅಣ್ಣೇಚಾಕೇನಹಳ್ಳಿ, ಹಿರಿಯ ತಳಾಳು, ಚಿಕ್ಕ ಕಾಡನೂರು ಹಾಗು ದೊಡ್ಡ ಕಾಡನೂರು ಭಾಗಗಳಿಗೆ ಭೇಟಿ ನೀಡಿ, ನಾಲೆಯಲ್ಲಿ ಹರಿಯುತ್ತಿರುವ ನೀರಿನ ಸ್ಥಿತಿಯನ್ನು ಪರಿಶೀಲಿಸಿ ರೈತರ ಸಮಸ್ಯೆಗಳನ್ನು ಆಲಿಸಿದರು. ನಾಲೆಯ ಕೊನೆಯ ಭಾಗದ ಜಮೀನುಗಳಿಗೆ ನೀರು ತಲುಪದೆ ರೈತರು ಸಮಸ್ಯೆ ಎದುರಿಸುತ್ತಿರುವ ಬಗ್ಗೆ ರೈತರು ಗಮನಕ್ಕೆ ತಂದರು. ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಜೊತೆಗೆ ರೈತರ ಜಮೀನುಗಳಿಗೆ ಅಗತ್ಯ ಪ್ರಮಾಣದ ನೀರು ತಲುಪುವಂತೆ ಕ್ರಮ ಕೈಗೊಳ್ಳಲಾಗುವುದೆಂದು ರೇವಣ್ಣ ಅವರು ಭರವಸೆ ನೀಡಿದರು.

ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದ ಸರ್ಕಾರದ ಅವಧಿಯಲ್ಲಿ ಸುಮಾರು 450 ಕೋಟಿ ರೂ. ವೆಚ್ಚದಲ್ಲಿ 90 ಕಿ.ಮೀ ಉದ್ದದ ಹೇಮಾವತಿ ಬಲದಂಡೆ ನಾಲೆಯ ಆಧುನೀಕರಣ ಕಾಮಗಾರಿ ಕೈಗೊಳ್ಳಲಾಗಿತ್ತು. ಈ ನಾಲೆಯ ವ್ಯಾಪ್ತಿಯಲ್ಲಿ ಸುಮಾರು 20 ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶವಿದ್ದು, ನೀರಿನ ಕೊರತೆಯಿಂದ ಹಲವು ಪ್ರದೇಶಗಳು ಬರಪೀಡಿತ ಸ್ಥಿತಿಯಲ್ಲಿವೆ. ಆಧುನೀಕರಣಗೊಳಿಸಿರುವ ನಾಲೆಗಳ ಸ್ಥಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು. ನಾಲೆಯ ಕೊನೆಯ ಭಾಗದವರೆಗೂ ನೀರು ಸಮರ್ಪಕವಾಗಿ ಹರಿಯುವಂತೆ ಇರುವ ತಾಂತ್ರಿಕ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸಬೇಕು. ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ನೀರು ಹರಿಸುವ ವ್ಯವಸ್ಥೆ ಮಾಡಬೇಕೆಂದು ಆಗ್ರಹಿಸಿದರು.

ನಾಲೆಯ ನೀರು ರೈತರ ಜಮೀನುಗಳಿಗೆ ಸಮರ್ಪಕವಾಗಿ ತಲುಪಿದಾಗ ಮಾತ್ರ ಆಧುನೀಕರಣ ಕಾಮಗಾರಿಯ ಉದ್ದೇಶ ಈಡೇರಿದಂತಾಗುತ್ತದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ತುರ್ತು ಕ್ರಮ ಕೈಗೊಂಡು ರೈತರಿಗೆ ಅನುಕೂಲ ಕಲ್ಪಿಸಬೇಕೆಂದು ಹೇಳಿದರು.



### ಅನುದಾನ ನೀಡದೆ ತಾರತಮ್ಯ

ಈಗಿನ ಕಾಂಗ್ರೆಸ್ ಸರ್ಕಾರ ಈ ಭಾಗದ ನಾಲೆಗಳ ನಿರ್ವಹಣೆ ಹಾಗು ಸ್ವಚ್ಛತೆಗೆ ಅಗತ್ಯ ಅನುದಾನ ನೀಡದೆ ತಾರತಮ್ಯ ಮಾಡುತ್ತಿದೆ ಎಂದು ಆರೋಪಿಸಿದ ಅವರು, ನಾಲೆಗಳಲ್ಲಿ ಹೂಳು ಹಾಗು ಕಸ ತೆರವುಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಮಾಡಬೇಕು. ಈ ಕುರಿತು ಸರ್ಕಾರ ಕೂಡಲೇ ಅಗತ್ಯ ಅನುದಾನ ಬಿಡುಗಡೆ ಮಾಡಬೇಕೆಂದು ಹೆಚ್.ಡಿ.ರೇವಣ್ಣ ಅವರು ಆಗ್ರಹಿಸಿದರು.

# ಅಧಿಕಾರಿಗಳ ನಿರ್ಲಕ್ಷ್ಯದಿಂದ ಬಡವರ ಬದುಕು ಹೈರಾಣ

## ಸರ್ವೆ ಇಲಾಖೆ ಕಾರ್ಯ ವಿಳಂಬಕ್ಕೆ ಆಕ್ರೋಶ | ಅರ್ಜಿ ವಿಲೇಗೆ ಗಡುವು ನೀಡಿದ ಸಚಿವ ಕೆ.ಎಂ.ಶಿ.

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಅಧಿಕಾರಿಗಳ ನಡುವೆ ಸಮನ್ವಯತೆ ಹಾಗು ಪಾರದರ್ಶಕತೆ ಕೊರತೆ ಮತ್ತು ನಿರ್ಲಕ್ಷ್ಯ ಭಾವನೆಯಿಂದ ಬಡವರಿಗೆ ಸಾಕಷ್ಟು ಅನ್ಯಾಯವಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಕಂದಾಯ ಇಲಾಖೆ ಆವರಣದಲ್ಲಿ ಶನಿವಾರ ನಡೆದ ಪ್ರಜಾ ಸೇವೆ ಆಂದೋಲನ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಬೇರೆ ತಾಲ್ಲೂಕಿನಲ್ಲೂ ಪ್ರಜಾ ಸೇವೆ ಆಂದೋಲನ ಸಭೆ ನಡೆಸಿದ್ದೇನೆ. ಆದರೆ, ಸಕಲೇಶಪುರ ತಾಲ್ಲೂಕಿನ ಕಂದಾಯ, ಸರ್ವೆ ಇಲಾಖೆ ಅಧಿಕಾರಿಗಳ ವಿರುದ್ಧ ಕೇಳಿ ಬರುತ್ತಿರುವ ಭ್ರಷ್ಟಾಚಾರದ ಆರೋಪ ಬೇರೆ ಕಡೆ ಕೇಳಿಬಂದಿಲ್ಲ. ಅಧಿಕಾರಿಗಳು ತಮ್ಮ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು. ವಿನಾಕಾರಣ ಸಾರ್ವಜನಿಕರನ್ನು ಅಲೆಸುವುದು ತಪ್ಪು. ಕಾನೂನಿನೊಂದಿಗೆ ಮಾನವೀಯತೆಯನ್ನು ಬಳಸಿಕೊಂಡು ಕೆಲಸ ಮಾಡಿ. ದುಡ್ಡು ಪಡೆದು ಬಡವರಿಗೆ ಅನ್ಯಾಯ ಮಾಡಿದರೆ ನಿಮ್ಮ ಕುಟುಂಬಕ್ಕೆ ಒಳ್ಳೆಯದಾಗುವುದಿಲ್ಲ. ಹತ್ತಾರು ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಜನರಿಗೆ 94ಸಿ ಅಡಿ ಹಕ್ಕುಪತ್ರ ನೀಡಲು ಡೀಮ್ಡ್ ನೆಪ ಹೇಳುವ ಮೂಲಕ ತೊಂದರೆ ನೀಡುತ್ತಿರುವುದು ತಪ್ಪು. ಡೀಮ್ಡ್ ರದ್ದುಪಡಿಸಲು ಸರ್ಕಾರ ತುರ್ತು ತೀರ್ಮಾನ ಕೈಗೊಳ್ಳಲಿದೆ. ನಂತರ 94ಸಿ ಅರ್ಜಿಗಳು ವೇಗವಾಗಿ ವಿಲೇವಾರಿಯಾಗಲಿವೆ ಎಂದರು.

ಪ್ರಜಾ ಸೇವೆ ಆಂದೋಲನವು ಹಿಂದೆ ನಡೆಯುತ್ತಿದ್ದ ಜನಸಂಪರ್ಕ ಸಭೆಯಂತಲ್ಲ. ಅದಕ್ಕಾಗಿ ಪ್ರತ್ಯೇಕ ಇಲಾಖೆಯೇ ಇದ್ದು, ಪ್ರತಿ ಅರ್ಜಿಯ ಸಮಸ್ಯೆ ಬಗೆಹರಿಯುವವರೆಗೂ ಗಮನಿಸಲಾಗುವುದು. ಆಂದೋಲನದ ವೇಳೆ ಅಧಿಕಾರಿಗಳು ನೀಡಿದ ಹೇಳಿಕೆಗೆ ಬದ್ಧರಾಗದಿದ್ದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ಆಂದೋಲನದಲ್ಲಿ 400ಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದು, ಮಧ್ಯಾಹ್ನ ಕಳೆದರೂ 30 ಅರ್ಜಿಗಳು ವಿಲೇವಾರಿಯಾಗದ ಹಿನ್ನಲೆಯಲ್ಲಿ ಕಂದಾಯ, ಸರ್ವೆ ಕಚೇರಿಯ ಅರ್ಜಿಗಳನ್ನು ವಿಂಗಡಿಸಿ ಒಂದೇ ಬಗೆಯ ಅರ್ಜಿಗಳನ್ನು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಭೆ ನಡೆಸಿ ಒಂದು ತಿಂಗಳೊಳಗಾಗಿ ಸಮಸ್ಯೆ ಬಗೆಹರಿಸಲಾಗುವುದು. ತದನಂತರ ನಾನು ಮತ್ತೊಮ್ಮೆ ತಾಲ್ಲೂಕಿಗೆ ಆಗಮಿಸಿ ಪರಿಶೀಲನೆ ನಡೆಸಲಿದ್ದೇನೆಂದರು.





### ಬರಪೀಡಿತ ಪಟ್ಟಿಗೆ ಸೇರಿಸಲು ಒತ್ತಾಯ: ಶಿವಲಿಂಗೇಗೌಡ

ಬರದ ನಾಡಿನವರು ಮಳೆ ವೀಕ್ಷಣೆಗೆ ಸಕಲೇಶಪುರಕ್ಕೆ ಬರುತ್ತಿದ್ದರು. ಆದರೆ ಈ ಬಾರಿ ಸಕಲೇಶಪುರದಲ್ಲೇ ಮಳೆ ಕೊರತೆ ಉಂಟಾಗಿದೆ. ಅದರಿಂದ ಬೆಳೆ ನಷ್ಟವೂ ಆಗಿದೆ. ಈ ತಾಲ್ಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲಾಗುವುದೆಂದು ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ತಾಲ್ಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸಬೇಕೆಂಬ ಶಾಸಕ ಸಿಮೆಂಟ್ ಮಂಜು ಅವರ ಮನವಿಗೆ ಸ್ಪಂದಿಸಿದ ಅವರು, ಶೀಘ್ರದಲ್ಲೇ ಬರ ಪರಿಹಾರ ಒದಗಿಸಬೇಕೆಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು. ಪಕ್ಷಾತೀತವಾಗಿ ಎಲ್ಲರೂ ಒಗ್ಗೂಡುವ ಮೂಲಕ ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು. ತಾಲ್ಲೂಕಿನ ರೈತರ ಹಿತಕಾಪಾಡಬೇಕೆಂದರು.

### ಆತ್ಮಸಾಕ್ಷಿಗಾದರೂ ಬೆಲೆ ಕೊಡಿ

ಕಂದಾಯ ಇಲಾಖೆಯಲ್ಲಿ ಯಾವುದೇ ಕೆಲಸವಾಗುವುದಿಲ್ಲ. ಕಳೆದ 10 ವರ್ಷಗಳಿಂದ ಕಚೇರಿ ಮೆಟ್ಟಿಲು ಹತ್ತಿ ನನಗೆ ಮಂಡಿ ನೋವು ಬಂದಿದೆ. ಆದರೂ ಕೆಲಸವಾಗಿಲ್ಲ ಎಂದು ನಡಹಳ್ಳಿ ಗ್ರಾಮದ ವ್ಯಕ್ತಿಯೊಬ್ಬರು ದೂರಿದರು. ತಹಶೀಲ್ದಾರ್ ಉಡಾಫೆಯಿಂದ ವರ್ತಿಸುತ್ತಾರೆ. ಕಚೇರಿಗೆ ಹೋದರೆ ಕುರ್ಚಿಯನ್ನೂ ಕೊಡುವುದಿಲ್ಲ ಎಂದು ಆದಿದ್ರಾವಿಡ ಸಂಘದ ಅಧ್ಯಕ್ಷ ಶಂಕರ್ ಅವರು ದೂರಿದರು.

94ಸಿ ಸೇರಿ ಯಾವುದೇ ಕೆಲಸಕ್ಕೂ ಹೋದರೂ ತಹಶೀಲ್ದಾರ್ ಕೆಲಸ ಮಾಡುವುದಿಲ್ಲವೆಂಬ ವ್ಯಾಪಕ ದೂರು ಬಂದಹಿನ್ನಲೆಯಲ್ಲಿ ಸಿಟ್ಟಾದ ಸಚಿವರು, ತಹಶೀಲ್ದಾರ್ ಸುಪ್ರೀತಾ ಅವರನ್ನು ಉದ್ದೇಶಿಸಿ, ಏನು ಕೆಲಸ ಮಾಡುತ್ತೀರಿ ತಹಶೀಲ್ದಾರ್‌ರವರೇ? ಆತ್ಮಸಾಕ್ಷಿಗಾದರೂ ಹೆದರಿ

» ನಾಲ್ಕನೇ ಪುಟದಲ್ಲಿ

# ಅಪಘಾತದಲ್ಲಿ ತಂದೆ ಸಾವು-ಮಗಳಿಗೆ ಗಾಯ

• ಪ್ರಜೋದಯ ವರದಿ

**ಹಾಸನ:** ಹೊಂಡಾ ಡಿಯೊ ಸ್ಕೂಟಿಗೆ ಬೈಕ್ ಡಿಕ್ಕಿಯಾದ ಪರಿಣಾಮ ಸ್ಕೂಟಿ ಸವಾರ ಸ್ಥಳದಲ್ಲೇ ಮೃತಪಟ್ಟು ಮಹಿಳೆ ಗಂಭೀರ ಗಾಯಗೊಂಡಿರುವ ಘಟನೆ ತಾಲ್ಲೂಕಿನ ನೀರಳ್ಳ ಸಮೀಪ ನಡೆದಿದೆ.

ಕೆ.ಆರ್.ಪುರಂ ಮಸೀದಿ ನಿವಾಸಿ ಹುಸೇನ್ ಮೃತರು. ಅವರ ಪುತ್ರಿ ಅಸ್ಮಿಯಾ ಬಾನು ಎಂಬುವವರಿಗೆ ಏಟಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಪ್ಪ-ಮಗಳು ಜಾವಗಲ್ ದರ್ಗಾಕ್ಕೆ ಹೋಗುತ್ತಿದ್ದಾಗ ಹಳೇಬೀಡು ಕಡೆಯಿಂದ ವೇಗವಾಗಿ ಬಂದ ಬೈಕ್ ಸವಾರ ಡಿಕ್ಕಿ ಮಾಡಿದ್ದಾರೆ. ಸ್ಕೂಟಿ ಸಮೇತ ರಸ್ತೆ ಮೇಲೆ ಬಿದ್ದಿದ್ದರಿಂದ ಗಂಭೀರ ಗಾಯಗಳಾಗಿ ಹುಸೇನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶಿಕ್ಷಕರು ದೇಶದ ಭವಿಷ್ಯ ರೂಪಿಸುವ ಶಿಲ್ಪಿಗಳು

## ಶಿಕ್ಷಕರ ದಿನಾಚರಣೆಯಲ್ಲಿ ಸಂಸದ ಶ್ರೇಯಸ್ ಪಟೇಲ್ ಅಭಿಮತ

• ಪ್ರಜೋದಯ ವರದಿ

**ಹಾಸನ:** ವಿದ್ಯಾರ್ಥಿಗಳಲ್ಲಿ ಜ್ಞಾನ, ಸಂಸ್ಕಾರ, ಮಾನವೀಯತೆ ಹಾಗು ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವ ಮೂಲಕ ದೇಶದ ಭವಿಷ್ಯವನ್ನು ರೂಪಿಸುವ ಶಿಕ್ಷಕರು ಸಮಾಜದ ಶಿಲ್ಪಿಗಳಾಗಿದ್ದಾರೆಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಶನಿವಾರ ಜಿಲ್ಲಾ ಅನುದಾನ ರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ವತಿಯಿಂದ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಅನೇಕ ಸವಾಲುಗಳ ನಡುವೆಯೂ ಶಿಕ್ಷಣದ ಜ್ಯೋತಿಯನ್ನು ಬೆಳಗಿಸುತ್ತಿರುವ ಶಿಕ್ಷಕರ ಸೇವೆ ಶ್ಲಾಘನೀಯ. ಶಿಕ್ಷಕರ ದಿನಾಚರಣೆಯ ಅಂಗವಾಗಿ ಶಿಕ್ಷಕ ಬಂಧುಗಳನ್ನು ಗೌರವಿಸಿ, ಅವರ ಸೇವೆಗೆ ಕೃತಜ್ಞತೆ ಸಲ್ಲಿಸುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.



ಶಿಕ್ಷಣವೆಂದರೆ ಕೇವಲ ಪುಸ್ತಕದ ಜ್ಞಾನ ನೀಡುವುದಲ್ಲ, ವಿದ್ಯಾರ್ಥಿಯ ವ್ಯಕ್ತಿತ್ವ ರೂಪಿಸುವ ಮಹತ್ತರ ಕಾರ್ಯ. ವೈದ್ಯರು, ಇಂಜಿನೀಯರ್‌ಗಳು, ವಿಜ್ಞಾನಿಗಳು, ರೈತರು, ಅಧಿಕಾರಿಗಳು, ಉದ್ಯಮಿಗಳು, ಜನಪ್ರತಿನಿಧಿಗಳೂ ಸೇರಿ ಸಮಾಜದ ಪ್ರತಿಯೊಬ್ಬರ ಬದುಕಿನಲ್ಲಿಯೂ ಶಿಕ್ಷಕರ ಮಾರ್ಗದರ್ಶನ ಇರುತ್ತದೆ. ಅನುದಾನ ರಹಿತ ಖಾಸಗಿ ಶಾಲೆಗಳ ಶಿಕ್ಷಕರು, ಅನೇಕ ಸವಾಲುಗಳ ನಡುವೆಯೂ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ

» ನಾಲ್ಕನೇ ಪುಟದಲ್ಲಿ

# ಸಹಾಯಧನದ ಚೆಕ್ ವಿತರಣೆ

• ಪ್ರಜೋದಯ ವರದಿ



**ಹಾಸನ:** ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ಹಾಗು ಪಶು ಪಾಲನಾ ಇಲಾಖೆ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯಡಿ 10+1 ಕುರಿ/ಮೇಕೆ ಘಟಕ ವಿತರಿಸುವ ಕಾರ್ಯಕ್ರಮದಲ್ಲಿ ಸ್ಥಳೀಯ ಶಾಸಕ ಹೆಚ್.ಪಿ. ಸ್ವರೂಪ್ ಪ್ರಕಾಶ್ ಅರ್ಹ ಫಲಾನುಭವಿಗಳಿಗೆ ಸಹಾಯಧನದ ಚೆಕ್ ವಿತರಿಸಿದರು.

ನಿಗಮದ ಸಹಾಯಕ ನಿರ್ದೇಶಕ ಡಾ.ಪವನ್ ಕುಮಾರ್, ಇಲಾಖೆಯ ಸಹಾಯಕ ನಿರ್ದೇಶಕ ಡಾ.ತಾರಾನಾಥ್, ಮುಖ್ಯ ಪಶುವೈದ್ಯಾಧಿಕಾರಿ ಡಾ||ಬಿ.ಪಿ.ಮಧು ಇದ್ದರು.

ಈ ವೇಳೆ ನಗರದ ಡೇರಿ ವೃತ್ತದಲ್ಲಿ ಕೈಗೊಂಡಿರುವ ಬೀದಿ ದೀಪ ಅಳವಡಿಕೆ ಕಾಮಗಾರಿಯನ್ನು ಶಾಸಕ ಹೆಚ್.ಪಿ.ಸ್ವರೂಪ್ ಅವರು ಪರಿಶೀಲಿಸಿದರು.

# ಕನ್ನಡದ ಅಸ್ಮಿತೆ ಕಾಪಾಡುವ ಸಂಕಲ್ಪದೊಂದಿಗೆ ಸ್ಪರ್ಧೆ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿ ಗಡಿಭಾಗದಲ್ಲಿ ಕನ್ನಡದ ಅಸ್ಮಿತೆ ಕಾಪಾಡುವ ಕೆಲಸ ಮಾಡಿರುವ ನಾನು, ಕನ್ನಡದ ಸೇವೆ ಮಾಡುವ ಅವಕಾಶಕ್ಕಾಗಿ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡುತ್ತಿದ್ದೇನೆಂದು ನಿವೃತ್ತ ಐಎಎಸ್ ಅಧಿಕಾರಿ ಡಾ.ಸಿ. ಸೋಮಶೇಖರ್ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಹಿತ್ಯ ಸೇವೆ ಮಾಡಲು ಹಿನ್ನಲೆ ಬೇಕಿಲ್ಲ, ವಿವೇಕ ಸಾಕು. ಹಾಗೆಯೇ ಇಂಥಹವರೇ ಅಧ್ಯಕ್ಷರಾಗಬೇಕು, ಆಗಬಾರದೆಂಬ ಮಾನದಂಡವೇನೂ ಇಲ್ಲ. ಸಾಹಿತ್ಯ ಸಂಘಟಕರೂ ಅಧ್ಯಕ್ಷರಾಗಬಹುದು. ಯಾರೋ ಒಬ್ಬರು ತಪ್ಪು ಮಾಡಿದರೆ, ಎಲ್ಲರೂ ಹಾಗೆ ಎಂದುಕೊಳ್ಳ ಬಾರದು. ಈ ರೀತಿಯ ತಪ್ಪು ಕಲ್ಪನೆ ಬೇಡ. ಶುದ್ಧ, ನಿರ್ಮಲವಾಗಿ ಕನ್ನಡವನ್ನು ಕಟ್ಟಿ ಬೆಳೆಸಬೇಕೆಂಬುದು ನನ್ನ ಮಹದಾಸೆ ಎಂದರು.





ಕರ್ನಾಟಕದಲ್ಲಿ 4 ಲಕ್ಷ ಮಂದಿ ಪರಿಷತ್ತಿನ ಸದಸ್ಯರಿದ್ದಾರೆ. ಅವರೆಲ್ಲರನ್ನು ನೇರವಾಗಿ ಭೇಟಿ ಮಾಡುವುದು ಕಷ್ಟ. ಹಾಗಾಗಿ ಮಾಧ್ಯಮಗಳ ಮೂಲಕ ತಮ್ಮನ್ನು ಬೆಂಬಲಿಸುವಂತೆ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ಮನವಿ ಮಾಡುತ್ತೇನೆ. ಸದಸ್ಯರೆಲ್ಲರು ಕಸಾಪವನ್ನು ಪ್ರಗತಿ ಪಥದತ್ತ ಕೊಂಡೊಯ್ಯಲು ಪಾಲುದಾರರಾಗಬೇಕು. ಸಾಹಿತ್ಯದಲ್ಲಾಗಲೀ, ಚುನಾವಣೆಯಲ್ಲಾಗಲೀ ಜಾತಿ ಮತ್ತು ರಾಜಕೀಯ ಯಾವುದೇ ಕಾರಣಕ್ಕೂ ಬರಬಾರದೆಂದು ಹೇಳಿದರು.

ಜನರು ಹಾಗು ಸಾಹಿತ್ಯದ ಪರ ಸಂವೇದನೆ ಇಟ್ಟುಕೊಂಡು ಕೆಲಸ ಮಾಡಬೇಕು. ಅತಿಮುಖ್ಯ ವಾಗಿ ಪರಿಷತ್ತಿಗೆ ಗತಕಾಲದ ವೈಭವ ತಂದುಕೊಡುವುದು ನನ್ನ ಪ್ರಮುಖ ಹೆಬ್ಬಯಕೆ. ಗತ ಕಾಲದ ಅಸ್ಮಿತೆ ಮರುಸ್ಥಾಪನೆಯಾಗಬೇಕು. ಆ ನಿಟ್ಟಿನಲ್ಲಿ ದಕ್ಷ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡುವೆ. ಪರಿಷತ್ತಿನಲ್ಲಿ ಏನೇ ತಪ್ಪು, ಲೋಪಗಳಾಗಿದ್ದರೂ ಅದನ್ನು ಶುದ್ಧಗೊಳಿಸುವ ಪ್ರಾಮಾಣಿಕ ಕೆಲಸ ಮಾಡುವೆ, ಹಾಗಾಗಿ ಪರಿಷತ್ತಿನ ಎಲ್ಲಾ ಮತದಾರರು ತಮ್ಮನ್ನು ಬೆಂಬಲಿ ಸುವ ಮೂಲಕ ಕನ್ನಡ ಸೇವೆಗೆ ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಬಾಳ್ಳು ಜಗನ್ನಾಥ್, ಮರ್ಕುಲಿ ಗೋಪಾಲೇಗೌಡ, ಕಟ್ಟಾಯಶಿವಕುಮಾರ್, ದಿನೇಶ್, ಮುಳ್ಳಕೆರೆ ಪ್ರಕಾಶ್, ಸಾಹಿತಿ ಸುಮಾ,ಪತ್ರಕರ್ತವೆಂಕಟೇಶ್ ಇದ್ದರು.

## ಇಂದು ಡಿ.ಕೆ.ಶಿವಕುಮಾರ್ ಭೇಟಿ | ಕಸ್ತೂರಿ ರಂಗನ್ ವರದಿ ಕುರಿತು ರೈತರೊಂದಿಗೆ ಚರ್ಚೆ

# ಮಲೆನಾಡಿನ ಸಮಸ್ಯೆಗೆ ಕಿವಿಯಾಗುವರೇ ಮುಖ್ಯಮಂತ್ರಿ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಧಿಕಾರ ವಹಿಸಿಕೊಂಡ ಬಳಿಕ ಇದೇ ಮೊದಲ ಬಾರಿಗೆ ಜಿಲ್ಲೆಗೆ ಭೇಟಿ ನೀಡುತ್ತಿದ್ದಾರೆ. ಸಕಲೇಶಪುರ ತಾಲ್ಲೂಕಿಗೆ ಆಗಮಿಸುವ ಅವರು ಮಲೆನಾಡು ಭಾಗದ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸುವ ನಿರೀಕ್ಷೆ ಮೂಡಿದೆ.

ಕಸ್ತೂರಿ ರಂಗನ್ ವರದಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ಜನರ ಆತಂಕ, ಕಾಫಿ ಬೆಳೆಗಾರರ ಸಮಸ್ಯೆ, ಕಾಡಾನೆ-ಮಾನವ ಸಂಘರ್ಷ, ಎತ್ತಿನ ಹೊಳೆ ಯೋಜನೆಯ ಕಾಮಗಾರಿ ಸೇರಿ ಜಿಲ್ಲೆಯ ಹಲವು ಪ್ರಮುಖ ವಿಚಾರಗಳು ಮುಖ್ಯಮಂತ್ರಿಯವರ ಮುಂದಿಡಲು ಸ್ಥಳೀಯ ಜನಪ್ರತಿನಿಧಿಗಳು ಸಿದ್ಧರಾಗಿದ್ದಾರೆ.

ಭಾನುವಾರ ಬೆಳಿಗ್ಗೆ ಸಕಲೇಶಪುರಕ್ಕೆ ಆಗಮಿಸಲಿರುವ ಮುಖ್ಯಮಂತ್ರಿ ಪಟ್ಟಣದ ಎಪಿಎಂಸಿ ಆವರಣದಲ್ಲಿ ಕಸ್ತೂರಿ ರಂಗನ್ ವರದಿಗೆ ಸಂಬಂಧಿಸಿದಂತೆ ಸಮಾಲೋಚನಾ ಸಭೆ ನಡೆಸಲಿದ್ದಾರೆ. ಪಶ್ಚಿಮಘಟ್ಟದ ಪರಿಸರ ಸಂರಕ್ಷಣೆಯ ಉದ್ದೇಶದಿಂದ ಪ್ರಸ್ತಾಪಿಸಲಾಗಿರುವ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೆ ಸಕಲೇಶಪುರ ತಾಲ್ಲೂಕಿನ ಹಲವು ಗ್ರಾಮಗಳು ಒಳಪಡುತ್ತಿದ್ದು, ವರದಿ ಜಾರಿಯಾದರೆ ಕೃಷಿ, ಕಾಫಿ ಬೆಳೆಗೆ, ಕಟ್ಟಡ ನಿರ್ಮಾಣ ಸೇರಿ ಸ್ಥಳೀಯರ ದೈನಂದಿನ ಚಟುವಟಿಕೆಗಳ ಮೇಲೆ ಪರಿಣಾಮ ಬೀರುವ ಆತಂಕ ಜನರಲ್ಲಿದೆ.

ಸಕಲೇಶಪುರತಾಲ್ಲೂಕಿನಪಶ್ಚಿಮಘಟ್ಟಕ್ಕೆ ಹೊಂದಿಕೊಂಡಿರುವ 30ಕ್ಕೂ ಹೆಚ್ಚು ಗ್ರಾಮಗಳ ಜನರು ಹಲವು ವರ್ಷಗಳಿಂದ ಈ ವಿಚಾರದಲ್ಲಿ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ.

» ನಾಲ್ಕನೇ ಪುಟದಲ್ಲಿ



### ಅಭಿವೃದ್ಧಿ ಕಾರ್ಯಗಳ ಬಗ್ಗೆಯೂ ಪ್ರಸ್ತಾಪ

ಜಿಲ್ಲೆಯ ನೀರಾವರಿ ಯೋಜನೆಗಳು, ಕಾಲುವೆಗಳ ದುರಸ್ತಿ ಹಾಗು ವಿಸ್ತರಣೆ, ರಸ್ತೆ ಅಭಿವೃದ್ಧಿ, ಅಪೂರ್ಣಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳು ಸೇರಿ ಹಲವು ಬೇಡಿಕೆ ಗಳು ಮುಖ್ಯಮಂತ್ರಿ ಮುಂದಿಡಲು ಸಿದ್ಧವಾಗಿವೆ. ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್, ಶಾಸಕರು ಭಾಗಿಯಾಗಲಿದ್ದಾರೆ.

### ಕಾಡಾನೆ ಸಮಸ್ಯೆ ನಿವಾರಣೆ ಆದ್ಯತೆ ಆಗಲಿ

ಮಲೆನಾಡಿನ ಜನರ ದೈನಂದಿನ ಬದುಕಿಗೆ ದೊಡ್ಡ ಸವಾಲಾಗಿರುವ ಕಾಡಾನೆ-ಮಾನವ ಸಂಘರ್ಷವೂ ಮುಖ್ಯಮಂತ್ರಿ ಮುಂದೆ ಪ್ರಮುಖವಾಗಿ ಪ್ರಸ್ತಾಪವಾಗಲಿದೆ. ಸಕಲೇಶಪುರ, ಆಲೂರು ಹಾಗು ಬೇಲೂರು ತಾಲ್ಲೂಕುಗಳ ಹಲವು ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ನಿರಂತರವಾಗಿದ್ದು, ಬೆಳೆ ಹಾನಿ, ಆಸ್ತಿ ನಷ್ಟ ಹಾಗು ಜೀವಭಯದ ನಡುವೆಯೇ ರೈತರು ಬದು ಕುವಂತಾಗಿದೆ. ಈ ಹಿನ್ನಲೆ ಶಾಶ್ವತ ಪರಿಹಾರಕ್ಕೆ ಅಗತ್ಯವಿರುವ ಅನುದಾನ ಹಾಗು ಯೋಜನೆಗಳ ಬಗ್ಗೆ ಮುಖ್ಯಮಂತ್ರಿಯವರ ಗಮನ ಸೆಳೆಯಲು ಸ್ಥಳೀಯ ಶಾಸಕರು ಮುಂದಾಗಿದ್ದಾರೆ.

> ಕೆಕೆಆರ್, ಕಾರ್ಲೈಲ್, ಟಿಪಿಜಿ, ಟೆಮಾಸೆಕ್, ಬ್ಲ್ಯಾಕ್ ಸ್ಟೋನ್, ವಾರ್‌ಬರ್ಗ್ ಪಿಂಕಸ್, ಒಂಟಾರಿಯೊ ಟೀಚರ್ಸ್ ಪೆನ್ಷನ್ ಪ್ಲಾನ್ ಮುಂತಾದ ಜಾಗತಿಕ ಹೂಡಿಕೆದಾರರು ಭಾರತೀಯ ಆರೋಗ್ಯ ಸೇವಾ ಕ್ಷೇತ್ರದಲ್ಲಿ ವಿವಿಧ ಹಂತಗಳಲ್ಲಿ ಹೂಡಿಕೆ ಮಾಡಿದ್ದಾರೆ. ಕೆನಡಾದ ಒಂಟಾರಿಯೊ ಟೀಚರ್ಸ್ ಪೆನ್ಷನ್ ಪ್ಲಾನ್ 2022ರಲ್ಲಿ ಮಹಾರಾಷ್ಟ್ರದ ಸಹ್ಯಾದ್ರಿ ಆಸ್ಪತ್ರೆಗಳಲ್ಲಿ ಬೃಹತ್ ಹೂಡಿಕೆ ಮಾಡಿ ಷೇರುಗಳನ್ನು ಖರೀದಿಸಿತು. ಸಿಂಗಾಪುರದ ಟೆಮಾಸೆಕ್ ಕೂಡ ಮಣಿಪಾಲ್ ಆಸ್ಪತ್ರೆಗಳಲ್ಲಿ ದೊಡ್ಡ ಹೂಡಿಕೆ ಮಾಡಿದೆ.

# ರೋಗಿ ಭಾರತೀಯ, ಬಿಲ್ ಲಾಭ ವಿದೇಶಕ್ಕೆ



ಅಮೃತಕಾಲ ಆರೋಗ್ಯ ಕ್ಷೇತ್ರದಲ್ಲಿ ಒಂದು ಮೂಲಭೂತ ತತ್ವ ಇರಬೇಕು. ರೋಗಿ ಮೊದಲು, ಲಾಭ ನಂತರ ಎಂದು ಇರಬೇಕು. ಭಾರತಕ್ಕೆ ಆರೋಗ್ಯ ಕ್ಷೇತ್ರದಲ್ಲಿ ಹೂಡಿಕೆಯನ್ನು ವಿರೋಧಿಸುವ ನೀತಿಯಲ್ಲ, ಹೂಡಿಕೆಗೆ ಮಾನವೀಯ ಮತ್ತು ಸಾರ್ವಜನಿಕ ಹಿತದ ಮಿತಿ ವಿಧಿಸುವ ನೀತಿ ಬೇಕಾಗಿದೆ. ಸರ್ಕಾರ ನಿರ್ಧರಿಸಲಿ, ತಡವಾಗುವ ಮುನ್ನ.

ಭಾರತಕ್ಕೆ ವಿದೇಶಿ ಹೂಡಿಕೆ ಬೇಕು. ಇದರಲ್ಲಿ ಎರಡು ಮಾತಿಲ್ಲ. ಕೈಗಾರಿಕೆಗಳು ಬೆಳೆಯಬೇಕು, ಹೊಸ ತಂತ್ರಜ್ಞಾನ ಬರಬೇಕು, ಉದ್ಯೋಗ ಸೃಷ್ಟಿಯಾಗಬೇಕು, ಉತ್ಪಾದನೆ ಹೆಚ್ಚಬೇಕು. ಅದಕ್ಕಾಗಿ ವಿದೇಶಿ ಬಂಡವಾಳ ಬಂದರೆ ಅದನ್ನು ಸ್ವಾಗತಿಸುವುದರಲ್ಲಿ ತಪ್ಪೇನಿಲ್ಲ. ಇದೇ ರೀತಿ ಆಸ್ಪತ್ರೆಗಳಲ್ಲಿ ಕೂಡ ವಿದೇಶಿ ಬಂಡವಾಳ ಸಾಗರದಂತೆ ಹರಿದು ಬಂದಿದೆ. ಖಾಸಗಿ ಆಸ್ಪತ್ರೆಗಳು ಕೂಡ ಈಗ ಬೃಹತ್ ಉದ್ಯಮ.

ಕಾರು, ದುಬಾರಿ ಮೊಬೈಲ್ ದೂರವಾಣಿ, ಮನೆ ಖರೀದಿಯನ್ನು ಹಣವಿಲ್ಲದಿದ್ದಲ್ಲಿ ಮುಂದೂಡಬಹುದು. ಆದರೆ ಹೃದಯಾಘಾತವಾದಾಗ, ಅಪಘಾತವಾದಾಗ, ಮಾರಣಾಂತಿಕ ಕಾಯಿಲೆ ಬಂದಾಗ ಆಸ್ಪತ್ರೆಗೆ ಹೋಗುವುದನ್ನು ಮುಂದೂಡಲು ಸಾಧ್ಯವಿಲ್ಲ. ಆ ಸಮಯದಲ್ಲಿ ಈ ಚಿಕಿತ್ಸೆ ದುಬಾರಿಯಾಗಿದೆ, ಬೇರೆ ಆಸ್ಪತ್ರೆಗೆ ಹೋಗೋಣ ಎಂದು ಸುಲಭವಾಗಿ ನಿರ್ಧರಿಸುವ ಸ್ಥಿತಿಯಲ್ಲಿ ಮನುಷ್ಯ ಇರುವುದಿಲ್ಲ. ಆರೋಗ್ಯ ಹಾಗೆ ಆಯ್ಕೆ ಮಾಡಬಹುದಾದ ಮಾರುಕಟ್ಟೆಯ ಸಾಮಾನ್ಯ ವಸ್ತುವಲ್ಲ, ಅದು ಮನುಷ್ಯನ ಬದುಕಿನ ಪ್ರಶ್ನೆ. ಭಾರತದಲ್ಲಿ ಖಾಸಗಿ ಆಸ್ಪತ್ರೆಗಳ ವಲಯ ಬಹಳ ವೇಗವಾಗಿ ಬೆಳೆಯುತ್ತಿದೆ. ಅದಕ್ಕೆ ದೇಶೀಯ ಹೂಡಿಕೆ ಮಾತ್ರವಲ್ಲ, ವಿದೇಶಿ ಖಾಸಗಿ ಬಂಡವಾಳ ಸಂಸ್ಥೆಗಳು, ಪಿಂಚಣಿ ನಿಧಿಗಳು ಮತ್ತು ಇತರ ಸಾಂಸ್ಥಿಕ ಹೂಡಿಕೆದಾರರು ಕೂಡ ಹಣ ಹೂಡುತ್ತಿದ್ದಾರೆ.

ಕೆಕೆಆರ್, ಕಾರ್ಲೈಲ್, ಟಿಪಿಜಿ, ಟೆಮಾಸೆಕ್, ಬ್ಲ್ಯಾಕ್ ಸ್ಟೋನ್, ವಾರ್‌ಬರ್ಗ್ ಪಿಂಕಸ್, ಒಂಟಾರಿಯೊ ಟೀಚರ್ಸ್ ಪೆನ್ಷನ್ ಪ್ಲಾನ್ ಮುಂತಾದ ಜಾಗತಿಕ ಹೂಡಿಕೆದಾರರು ಭಾರತೀಯ ಆರೋಗ್ಯ ಸೇವಾ ಕ್ಷೇತ್ರದಲ್ಲಿ ವಿವಿಧ ಹಂತಗಳಲ್ಲಿ ಹೂಡಿಕೆ ಮಾಡಿದ್ದಾರೆ. ಕೆನಡಾದ ಒಂಟಾರಿಯೊ ಟೀಚರ್ಸ್ ಪೆನ್ಷನ್ ಪ್ಲಾನ್ 2022ರಲ್ಲಿ ಮಹಾರಾಷ್ಟ್ರದ ಸಹ್ಯಾದ್ರಿ ಆಸ್ಪತ್ರೆಗಳಲ್ಲಿ ಬೃಹತ್ ಹೂಡಿಕೆ ಮಾಡಿ ಷೇರುಗಳನ್ನು ಖರೀದಿಸಿತು. ಸಿಂಗಾಪುರದ ಟೆಮಾಸೆಕ್ ಕೂಡ ಮಣಿಪಾಲ್ ಆಸ್ಪತ್ರೆಗಳಲ್ಲಿ ದೊಡ್ಡ ಹೂಡಿಕೆ ಮಾಡಿದೆ.

ಅಗ್ರವಾಲ್ ಕಣ್ಣಿನ ಆಸ್ಪತ್ರೆ ಬೆಳೆದಿದ್ದೇ ವಿದೇಶಿ ಬಂಡವಾಳದಿಂದ. ಕೆಲವೊಮ್ಮೆ ಹೂಡಿಕೆದಾರ ಮೊದಲಿಗೆ ಅಲ್ಪಸಂಖ್ಯಾತ ಪಾಲನ್ನು ತೆಗೆದುಕೊಳ್ಳುತ್ತಾನೆ. ಕಂಪನಿಯ ವ್ಯವಹಾರ ಮಾದರಿ, ನಿರ್ವಹಣೆ ಮತ್ತು ಬೆಳವಣಿಗೆಯ ಸಾಧ್ಯತೆಯನ್ನು ಅರ್ಥಮಾಡಿಕೊಂಡ ನಂತರ ತನ್ನ ಪಾಲನ್ನು ಹೆಚ್ಚಿಸುತ್ತಾನೆ. ನಂತರ ಕಂಪನಿಯ ಮೌಲ್ಯಮಾಪನ ಹೆಚ್ಚಾದಾಗ ತನ್ನ ಪಾಲಿನ ಒಂದು ಭಾಗ ಅಥವಾ ಸಂಪೂರ್ಣ ಪಾಲನ್ನು ಮತ್ತೊಬ್ಬ ಹೂಡಿಕೆದಾರನಿಗೆ ಮಾರುತ್ತಾನೆ. ಮುಕ್ತ ಮಾರುಕಟ್ಟೆಯ ಮಾರಾಟವಾಗಬಹುದು. ಅಥವಾ ಕಂಪನಿ ಷೇರು ಮಾರುಕಟ್ಟೆಗೆ ಆರಂಭಿಕ ಸಾರ್ವಜನಿಕ ಷೇರು ಮಾರಾಟದ ಮೂಲಕ ಬಂದಾಗ ಹೂಡಿಕೆದಾರ ತನ್ನ ಷೇರುಗಳನ್ನು ಮಾರಾಟ ಮಾಡಿ ಹೂಡಿಕೆಯಿಂದ ಹೊರಬರಬಹುದು.

ಟೆಮಾಸೆಕ್- ಮಣಿಪಾಲ್ ಉದಾಹರಣೆ ಇದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಸಿಂಗಾಪುರದ ಟೆಮಾಸೆಕ್‌ನ ಅಂಗಸಂಸ್ಥೆ ಶಿಯರ್ಸ್ ಹೆಲ್ತ್‌ಕೇರ್ 2017ರಲ್ಲಿ ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್‌ನಲ್ಲಿ 18% ಮಾಲೀಕತ್ವದ ಪಾಲು ತೆಗೆದುಕೊಂಡಿತ್ತು. ನಂತರ 2023ರಲ್ಲಿ ಟೆಮಾಸೆಕ್ 41% ಪಾಲು ಪಡೆಯಲು ಒಪ್ಪಂದ ಮಾಡಿಕೊಂಡಿತು; ಇದರಿಂದ ಒಟ್ಟು ಷೇರು ಪಾಲುದಾರಿಕೆ 59%ಕ್ಕೆ ಏರಿತು.

ಕಳೆದ 5 ವರ್ಷಗಳಲ್ಲಿ ಭಾರತದಲ್ಲಿ ಆರೋಗ್ಯ ಸೇವಾ ಕ್ಷೇತ್ರಕ್ಕೆ ಸಾವಿರಾರು ಕೋಟಿ ಹಣ ಹರಿದು ಬಂದಿದೆ. ಇದೇ ಅವಧಿಯಲ್ಲಿ ಆರೋಗ್ಯ ಸೇವಾ ಕ್ಷೇತ್ರದಲ್ಲಿ ಸಾವಿರಾರು ಕೋಟಿ ಹಣ ಹೂಡಿಕೆದಾರರು ಲಾಭದೊಂದಿಗೆ ಹೊರ ನಡೆದಿದ್ದಾರೆ. ಹೂಡಿಕೆ ಬರುತ್ತಿದೆ. ದೊಡ್ಡ ಪ್ರಮಾಣದಲ್ಲಿ ಬರುತ್ತಿದೆ ಮತ್ತು ಆ ಹೂಡಿಕೆಯಿಂದ ಹೊರಬರುವ ಹಣವೂ ದೊಡ್ಡ ಪ್ರಮಾಣದಲ್ಲಿದೆ. ಯಾವುದೇ ಹೂಡಿಕೆದಾರ ಧರ್ಮಾರ್ಥಕ್ಕಾಗಿ ಬಂಡವಾಳ ಹೂಡುವುದಿಲ್ಲ. ಅವನು ಆರ್ಥಿಕ ಪ್ರತಿಫಲ ನಿರೀಕ್ಷಿಸುತ್ತಾನೆ. ಅವನಿಗೆ ಆಸ್ಪತ್ರೆ ಎಂದರೆ ಕೇವಲ ರೋಗಿಗಳನ್ನು ಗುಣಪಡಿಸುವ ಸಂಸ್ಥೆಯಲ್ಲ. ಅದು ವ್ಯಾಪಾರ ವೇದಿಕೆ. ಅದರ ಆದಾಯ, ಲಾಭ, ಮೌಲ್ಯಮಾಪನ, ವ್ಯಾಪಾರದ ವಿಸ್ತರಣೆಯ ಸಾಧ್ಯತೆ ಮತ್ತು ಭವಿಷ್ಯದ ನಿರ್ಗಮನದ ಮೌಲ್ಯ ಇವೆಲ್ಲವೂ ಹೂಡಿಕೆಯ ನಿರ್ಧಾರದಲ್ಲಿ ಮುಖ್ಯವಾಗುತ್ತವೆ.

ಹೂಡಿಕೆದಾರ ತನ್ನ ಹೂಡಿಕೆಗೆ ಪ್ರತಿಫಲ ಬಯಸುವುದು ಸಹಜವಾದ ಆರ್ಥಿಕ ವರ್ತನೆ. ಅದು ಅವರ ಸಹಜವಾದ ಆರ್ಥಿಕ ಉದ್ದೇಶ. ಆ ಹೂಡಿಕೆಯ ಪ್ರತಿಫಲ ಯಾರ ಆರೋಗ್ಯದ ಮೇಲೆ ನಿರ್ಮಾಣವಾಗುತ್ತಿದೆ? ಆಸ್ಪತ್ರೆ ಮತ್ತು ಸಾಮಾನ್ಯ ವ್ಯವಹಾರದ ನಡುವಿನ ವ್ಯತ್ಯಾಸ ಇಲ್ಲಿಯೇ ಪ್ರಾರಂಭವಾಗುತ್ತದೆ. ಒಂದು ಗ್ರಾಹಕ ಕಂಪನಿ ತನ್ನ ಉತ್ಪನ್ನದ ಬೆಲೆಯನ್ನು ಹೆಚ್ಚಿಸಿದರೆ ಗ್ರಾಹಕ ಆ ಉತ್ಪನ್ನವನ್ನು ಖರೀದಿಸದೆ ಇರಬಹುದು. ಆದರೆ ತೀವ್ರ ನಿಗಾ ಘಟಕಕ್ಕೆ ದಾಖಲಾಗಿರುವ ರೋಗಿಗೆ ಪರ್ಯಾಯದ ಅವಕಾಶ ಬಹಳ ಸೀಮಿತವಾಗಿರುತ್ತದೆ.

ಒಬ್ಬ ಭಾರತೀಯ ಉದ್ಯೋಗಿ ತನ್ನ ಸಂಬಳದಿಂದ ಆರೋಗ್ಯ ವಿಮೆಗೆ ಹಣ ಕೊಡುತ್ತಾನೆ, ಅವನ ಕಂಪನಿಯೂ ವಿಮೆಗೆ ಹಣ ಕೊಡುತ್ತದೆ. ವಿಮಾ ಕಂಪನಿ ಆಸ್ಪತ್ರೆಯ ಚಿಕಿತ್ಸಾ ವೆಚ್ಚವನ್ನು ಪಾವತಿಸುತ್ತದೆ. ಆಸ್ಪತ್ರೆ ತನ್ನ ಸೇವೆಗಳಿಗೆ ಹಣ ಪಡೆಯುತ್ತದೆ. ಇವೆಲ್ಲವೂ ಸೇರಿ ಒಂದು ದೊಡ್ಡ ಆರೋಗ್ಯ ಸೇವಾ ಆರ್ಥಿಕತೆಯನ್ನು ನಿರ್ಮಿಸುತ್ತವೆ. ಈ ವ್ಯವಸ್ಥೆಯಲ್ಲಿ ಆಸ್ಪತ್ರೆಯ ಮಾಲೀಕರು ಮತ್ತು ಹೂಡಿಕೆದಾರರು ಲಾಭ ಗಳಿಸುವುದು ಸಹಜ. ಭಾರತೀಯರ ಆರೋಗ್ಯದ ಮೇಲೆ ನಿರ್ಮಾಣವಾಗುತ್ತಿರುವ ಈ ದೊಡ್ಡ ಆರ್ಥಿಕ ವ್ಯವಸ್ಥೆಯ ಅಂತಿಮ ಲಾಭ ಯಾರಿಗೆ ಸಿಗುತ್ತಿದೆ? ಭಾರತೀಯ ಸಮಾಜಕ್ಕೆ ಎಷ್ಟು? ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಲು ಎಷ್ಟು? ಹೂಡಿಕೆದಾರರಿಗೆ ಎಷ್ಟು? ಇದು ಸಾರ್ವಜನಿಕ ಹಿತಾಸಕ್ತಿಯ ಪ್ರಶ್ನೆ.

ಇಂದು ನಗರ ಪ್ರದೇಶದ ಮಧ್ಯಮ ವರ್ಗದ ಬಹಳಷ್ಟು ಜನರಿಗೆ ಆರೋಗ್ಯ ವಿಮೆ ಇದೆ. ಹಾಗಾಗಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವುದು ಸುಲಭವಾಗಿದೆ ಎಂದು ನಾವು ಭಾವಿಸುತ್ತೇವೆ. ಆದರೆ ವಾಸ್ತವ ಅಷ್ಟು ಸರಳವಲ್ಲ. ವಿಮೆ ಇದ್ದರೂ ಕಂತಿನ ಹಂತವಿದೆ, ಪಾಲಿಸಿ ಮಿತಿ ಇದೆ. ಎಲ್ಲಾ ವೆಚ್ಚಗಳು ಒಂದೇ ರೀತಿಯಲ್ಲಿ ಒಳಗೊಳ್ಳುವುದಿಲ್ಲ. ಕೆಲವೊಮ್ಮೆ ಮಿತಿ ಮುಗಿಯುತ್ತದೆ, ಹೆಚ್ಚುವರಿ ವೆಚ್ಚವನ್ನು ಕುಟುಂಬವೇ ಭರಿಸಬೇಕಾಗುತ್ತದೆ.



ಒಂದು ದೊಡ್ಡ ಶಸ್ತ್ರಚಿಕಿತ್ಸೆ ಅಥವಾ ದೀರ್ಘಕಾಲದ ಚಿಕಿತ್ಸೆಯ ನಂತರ ಕುಟುಂಬದ ಉಳಿತಾಯವೇ ಖಾಲಿಯಾಗಬಹುದು. ಹೀಗಾಗಿ ವಿಮೆ ಇದೆ ಎಂದರೆ ಚಿಕಿತ್ಸೆ ಅಗ್ಗವಾಗಿದೆ ಎಂದಲ್ಲ. ವಿಮೆ ಅನೇಕ ಕುಟುಂಬಗಳಿಗೆ ರಕ್ಷಣೆ ನೀಡುತ್ತದೆ. ಆದರೆ ಅದೇ ಸಮಯದಲ್ಲಿ, ಆರೋಗ್ಯ ಸೇವೆಯ ಒಟ್ಟಾರೆ ವೆಚ್ಚ ಹೆಚ್ಚಾಗುತ್ತಿದ್ದರೆ ಅದರ ಹೊರೆ ಅಂತಿಮವಾಗಿ ಯಾರ ಮೇಲಾದರೂ ಬೀಳುತ್ತದೆ, ಅದು ರೋಗಿಯಾಗಿರಬಹುದು, ವಿಮಾ ಕಂಪನಿಯಾಗಿರಬಹುದು.

ಒಬ್ಬ ಹೂಡಿಕೆದಾರನಿಗೆ ಆಸ್ಪತ್ರೆ ಒಂದು ಹೂಡಿಕೆ, ಅಲ್ಲಿ ಆದಾಯವಿದೆ, ಲಾಭವಿದೆ, ಮೌಲ್ಯ ಮಾಪನವಿದೆ. ಬೆಳವಣಿಗೆ ಇದೆ. ಒಂದು ದಿನ ಹೂಡಿಕೆಯಿಂದ ಹೊರಬರುವ ಅವಕಾಶವೂ ಇರಬಹುದು. ಆಸ್ಪತ್ರೆಗೆ ಬಂದಿರುವ ರೋಗಿಗೆ ಇವುಗಳಲ್ಲಿ ಯಾವುದೂ ಮುಖ್ಯವಲ್ಲ. ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಬಂದ ತಂದೆಗೆ ಆಸ್ಪತ್ರೆಯ ಮೌಲ್ಯಮಾಪನ ಮುಖ್ಯವಲ್ಲ. ಹೃದಯ ಚಿಕಿತ್ಸೆಗಾಗಿ ಬಂದ ವೃದ್ಧನಿಗೆ ಖಾಸಗಿ ಬಂಡವಾಳ ನಿಧಿಯ ಪ್ರತಿಫಲ ಮುಖ್ಯವಲ್ಲ. ಅಪಘಾತಕ್ಕೊಳಗಾದ ವ್ಯಕ್ತಿಯ ಕುಟುಂಬಕ್ಕೆ ಆಸ್ಪತ್ರೆಯ ಲಾಭದ ಅಂಚಿನ ಬಗ್ಗೆ ಚಿಂತೆಯಿಲ್ಲ, ಅವರಿಗೆ ಬೇಕಿರುವುದು ಚಿಕಿತ್ಸೆ. ಅದಕ್ಕಾಗಿಯೇ ಆರೋಗ್ಯ ಕ್ಷೇತ್ರದಲ್ಲಿ ಒಂದು ಮೂಲಭೂತ ತತ್ವ ಇರಬೇಕು.

ರೋಗಿ ಮೊದಲು, ಲಾಭ ನಂತರ ಎಂದು ಇರಬೇಕು. ವಿದೇಶಿ ಬಂಡವಾಳದಿಂದ ಉತ್ತಮ ಆಸ್ಪತ್ರೆಗಳು ನಿರ್ಮಾಣವಾಗಬಹುದು, ಹೊಸ ತಂತ್ರಜ್ಞಾನ, ವೈದ್ಯಕೀಯ ಉಪಕರಣಗಳು ಬರಬಹುದು, ನಿರ್ವಹಣಾ ಗುಣಮಟ್ಟ ಸುಧಾರಿಸಬಹುದು. ಅತ್ಯುತ್ತಮ ವಿಶ್ವದರ್ಜೆಯ ವೈದ್ಯಕೀಯ ಸೇವೆಗಳು ಹೆಚ್ಚು ಜನರಿಗೆ ಸಿಗಬಹುದು. ಅದೇ ಸಮಯದಲ್ಲಿ, ಆರೋಗ್ಯ ಕ್ಷೇತ್ರವನ್ನು ಯಾವುದೋ ಸಾಮಾನ್ಯ ಉದ್ಯಮದಂತೆ ಮಾತ್ರ ನಿಯಂತ್ರಿಸುವುದು ಸರಿಯೇ? ಆಸ್ಪತ್ರೆಗಳು ಮತ್ತು ನಿರ್ಣಾಯಕ ಆರೋಗ್ಯ ಸೇವಾ ಸಂಸ್ಥೆಗಳಿಗೆ ಪ್ರತ್ಯೇಕ ವಿದೇಶಿ ಬಂಡವಾಳ ನಿಯಮಗಳು ಇರಬೇಕೇ ಎಂಬುದನ್ನು ಭಾರತ ಗಂಭೀರವಾಗಿ ಪರಿಶೀಲಿಸಬೇಕು. ಇದು ಸಂಪೂರ್ಣ ನಿಷೇಧದ ಪ್ರಶ್ನೆಯಾಗಬೇಕಿಲ್ಲ, ಮಿತಿ, ನಿಯಂತ್ರಣ ಮತ್ತು ಪಾರದರ್ಶಕತೆಯ ಪ್ರಶ್ನೆ. ಸರ್ಕಾರಿ ಆಸ್ಪತ್ರೆ ಎಂದರೆ ಗುಣಮಟ್ಟ ಕಡಿಮೆ ಎಂಬ ಭಾವನೆ ನಮ್ಮ ಸಮಾಜದಲ್ಲಿ ಬೇರೂರಿದೆ. ಹಣವಿರುವವರು ಖಾಸಗಿ ಆಸ್ಪತ್ರೆಗೆ ಹೋಗುತ್ತಾರೆ, ಮಧ್ಯಮ ವರ್ಗವೂ ಖಾಸಗಿ ಆಸ್ಪತ್ರೆಗೆ ಹೋಗುತ್ತದೆ. ಸರ್ಕಾರಿ ಆಸ್ಪತ್ರೆಗಳನ್ನು ಹೆಚ್ಚಾಗಿ ಬಡವರ ಆಯ್ಕೆಯೆಂದು ನೋಡಲಾಗುತ್ತದೆ. ಈ ಮನೋಭಾವ ಬದಲಾಗಬೇಕು. ಅದರರ್ಥ ಸರ್ಕಾರಿ ಆಸ್ಪತ್ರೆಗಳಲ್ಲಿರುವ ಸಮಸ್ಯೆಗಳನ್ನು ನಿರಾಕರಿಸುವುದಲ್ಲ, ಉತ್ತಮ ವೈದ್ಯರು, ಆಧುನಿಕ ಉಪಕರಣಗಳು, ಸ್ವಚ್ಛತೆ, ಕಡಿಮೆ ಕಾಯುವಿಕೆ, ಉತ್ತಮ ನಿರ್ವಹಣೆ ಮತ್ತು ಗೌರವಯುತ ಸೇವೆ ಇವು ಸರ್ಕಾರಿ ಆಸ್ಪತ್ರೆಗಳಲ್ಲೂ ದೊರೆಯಬೇಕು. ಒಳ್ಳೆಯ ಸರ್ಕಾರಿ ಆಸ್ಪತ್ರೆ ಬಡವರಿಗಷ್ಟೇ ಅಲ್ಲ; ಅದು ಮಧ್ಯಮ ವರ್ಗದ ಕುಟುಂಬವನ್ನೂ ಒಂದು ದೊಡ್ಡ ವೈದ್ಯಕೀಯ ಸಾಲದಿಂದ ರಕ್ಷಿಸಬಲ್ಲದು. ನಾವು ವಿದೇಶಿ ಹೂಡಿಕೆಯನ್ನು ದ್ವೇಷಿಸುವ ಅಗತ್ಯವಿಲ್ಲ. ಆದರೆ ಆಸ್ಪತ್ರೆ ಕ್ಷೇತ್ರಕ್ಕೆ ಸಾಮಾನ್ಯ ಕೈಗಾರಿಕಾ ವಿದೇಶಿ ನೇರ ಹೂಡಿಕೆ ನೀತಿಯನ್ನೇ ಅನ್ವಯಿಸುವುದು ದೊಡ್ಡ ತಪ್ಪು.

ಒಂದು ಕಂಪನಿಯ ಷೇರು ಬೆಲೆ, ಒಂದು ಕಾರಿನ ಬೆಲೆ, ಒಂದು ಮನೆಯ ಬೆಲೆಯನ್ನು ಮಾರುಕಟ್ಟೆ ನಿರ್ಧರಿಸಬಹುದು. ಆದರೆ ಒಬ್ಬ ಮನುಷ್ಯನ ಜೀವದ ಬೆಲೆಯನ್ನು ಮಾರುಕಟ್ಟೆ ನಿರ್ಧರಿಸಬಾರದು. ಆಸ್ಪತ್ರೆಯ ಬಾಗಿಲಿಗೆ ಬರುವ ವ್ಯಕ್ತಿ ಮೊದಲು ರೋಗಿ; ಗ್ರಾಹಕ ನಂತರ. ಅವನ ಜೀವವು ಒಂದು ಹೂಡಿಕೆಯ ಪ್ರತಿಫಲವಲ್ಲ, ಅವನ ಚಿಕಿತ್ಸೆ ಒಂದು ವ್ಯಾಪಾರ ಅವಕಾಶ ಮಾತ್ರವಲ್ಲ. ಅವನ ಕುಟುಂಬದ ಕಣ್ಣೀರನ್ನು ಲೆಕ್ಕಪತ್ರದಲ್ಲಿ ಅಳೆಯಲು ಸಾಧ್ಯವಿಲ್ಲ. ಆದರೆ ಆ ಪ್ರತಿಫಲ ಪಡೆಯುವ ಪ್ರಕ್ರಿಯೆಯಲ್ಲಿ ಭಾರತೀಯ ಕುಟುಂಬಗಳು ವೈದ್ಯಕೀಯ ಸಾಲದಲ್ಲಿ ಮುಳುಗಬಾರದು. ಆದ್ದರಿಂದ ಭಾರತಕ್ಕೆ ಆರೋಗ್ಯ ಕ್ಷೇತ್ರದಲ್ಲಿ ಹೂಡಿಕೆಯನ್ನು ವಿರೋಧಿಸುವ ನೀತಿಯಲ್ಲ, ಹೂಡಿಕೆಗೆ ಮಾನವೀಯ ಮತ್ತು ಸಾರ್ವಜನಿಕ ಹಿತದ ಮಿತಿ ವಿಧಿಸುವ ನೀತಿ ಬೇಕಾಗಿದೆ.

ಚಿಕಿತ್ಸೆಯ ಬೆಲೆಯ ಮೇಲೂ ನಿಯಂತ್ರಣ ಮತ್ತು ಪಾರದರ್ಶಕತೆ ಇರಲಿ. ಆರೋಗ್ಯ ವ್ಯವಸ್ಥೆಯನ್ನು ಯಾರಿಗಾಗಿ ಕಟ್ಟುತ್ತಿದ್ದೇವೆ ಎಂಬ ಪ್ರಶ್ನೆಯಿದೆ. ಹೂಡಿಕೆದಾರರಿಗಾಗಿಯೋ, ಆಸ್ಪತ್ರೆಗಳಿಗಾಗಿಯೋ ಅಥವಾ ಭಾರತೀಯರಿಗಾಗಿಯೋ? ಸರ್ಕಾರ ನಿರ್ಧರಿಸಲಿ, ತಡವಾಗುವ ಮುನ್ನ.

**- ಲೀನಾ ಜೋಶಿ**



---

> ಉತ್ತರ ಕನ್ನಡದ ಶಿರಾಲಿಯಲ್ಲಿ ಆನಂದಿ ನಾಗರ ಕಟ್ಟೆ, ಸದಾನಂದ ನಾಗರಕಟ್ಟೆ ಎಂಬ ಸಂಪ್ರದಾಯ ಬದ್ಧ, ಮಧ್ಯಮವರ್ಗದ ಕುಟುಂಬದಲ್ಲಿ ಸೆಪ್ಟೆಂಬರ್ 4, 1948ರಲ್ಲಿ ಹುಟ್ಟಿದ ಅನಂತ ನಾಗರಕಟ್ಟೆ, ಮುಂದೆ ಮುಂಬಯಿಯಲ್ಲಿ ನಾಟಕ ಹಾಗೂ ಸಿನಿಮಾಗಳಲ್ಲಿ ನಟಿಸತೊಡಗಿದಾಗ ತಮ್ಮ ಹೆಸರನ್ನು ಅನಂತನಾಗ್ ಎಂದು ಬದಲಿಸಿಕೊಂಡರು.

# ಅಭಿನಯದ ಅನಂತ ಸಾಧಕ

ಅವರು ಸುಮ್ಮನೇ ಕ್ಯಾಮೆರಾ ಮುಂದೆ ಬಂದು ನಿಂತರೆ ಸಾಕು, ನೋಡುಗರಲ್ಲಿ ಭಾವನೆಗಳು ತಾವಾಗಿ ಹೊಮ್ಮುತ್ತವೆ. ಭಾರತೀಯ ಚಿತ್ರರಂಗದಲ್ಲಿ ಸಹಜ ಅಭಿನಯ ಎಂದ ತಕ್ಷಣ ನೆನಪಿಗೆ ಬರುವ ಪ್ರಮುಖ ಹೆಸರು ಅನಂತನಾಗ್. ಇಂಥ ಸಹಜ ಅಭಿನಯದ ಕಲಾವಿದನನ್ನು ಹೊಂದಿದ್ದು ಕನ್ನಡ ಚಿತ್ರರಂಗದ ಭಾಗ್ಯ. ಉತ್ತರ ಕನ್ನಡದ ಶಿರಾಲಿಯಲ್ಲಿ ಆನಂದಿ ನಾಗರ ಕಟ್ಟೆ, ಸದಾನಂದ ನಾಗರಕಟ್ಟೆ ಎಂಬ ಸಂಪ್ರದಾಯ ಬದ್ಧ, ಮಧ್ಯಮವರ್ಗದ ಕುಟುಂಬದಲ್ಲಿ ಸೆಪ್ಟೆಂಬರ್ 4, 1948 ರಲ್ಲಿ ಹುಟ್ಟಿದ ಅನಂತ ನಾಗರಕಟ್ಟೆ, ಮುಂದೆ ಮುಂಬಯಿಯಲ್ಲಿ ನಾಟಕ ಹಾಗೂ ಸಿನಿಮಾಗಳಲ್ಲಿ ನಟಿಸತೊಡಗಿದಾಗ ತಮ್ಮ ಹೆಸರನ್ನು ಅನಂತನಾಗ್ ಎಂದು ಬದಲಿಸಿಕೊಂಡರು.



**ಅನಂತನಾಗ್- ಲಕ್ಷ್ಮಿ**

ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ಅದ್ಭುತ ಜೋಡಿ. ಇಬ್ಬರು ಸಹಜಾಭಿನಯ ಚತುರರ ಸಂಗಮ ಕನ್ನಡ ಚಿತ್ರರಂಗಕ್ಕೆ ಅತ್ಯಮೋಘ ಚಿತ್ರಗಳನ್ನು ನೀಡಿವೆ. ಇವರಿಬ್ಬರ ಜೊತೆಗೆ ದೊರೈ-ಭಗವಾನ್, ಚಿ.ಉದಯ ಶಂಕರ್, ರಾಜನ್-ನಾಗೇಂದ್ರ, ಎಸ್ಪಿಬಿ, ಎಸ್. ಜಾನಕಿ ಇವರ ಸಮ್ಮಿಲನ ಕನ್ನಡ ಚಿತ್ರರಂಗದ ಸವಿ ಸಿಹಿ ಚಿತ್ರಗಳ ಮಧುರಾನುಭವ ನೀಡಿರುವುದು ನಮ್ಮ ಕಣ್ಣು ಮುಂದಿನ ಸತ್ಯ.

ಬೆಂಕಿಯ ಬಲೆ, ಬಿಡುಗಡೆಯ ಬೇಡಿ, ಚಂದನದ ಗೊಂಬೆ, ಇಬ್ಬನಿ ಕರಗಿತು, ಮುದುಡಿದ ತಾವರೆ ಅರಳಿತು, ಸೇಡಿನ ಹಕ್ಕಿ (ಎಲ್ಲವೂ ಕಾದಂಬರಿಯಾಧಾರಿತ ಚಿತ್ರಗಳೇ), ನಾ ನಿನ್ನ ಬಿಡಲಾರೆ ಚಿತ್ರದಲ್ಲಿ ದೆವ್ವ ಹಿಡಿದಾಗ ಅನಂತ್ ಅಭಿನಯ ಅದ್ಭುತ. ಇವುಗಳ ಗೆಲುವು ಯಾರೂ ಮರೆಯುವಂತಿಲ್ಲ. ದೊರೈ ಭಗವಾನ್, ಚಿ. ಉದಯಶಂಕರ್, ರಾಜನ್ ನಾಗೇಂದ್ರ, ಎಸ್ಪಿ, ಎಸ್. ಜಾನಕಿ, ಅನಂತ ನಾಗ್- ಕಲ್ಪನಾ ಅವರ ಬಯಲುದಾರಿ ಇವತ್ತಿಗೂ ಆಪಾತಮಧುರ.

ಬೆಂಕಿಯ ಬಲೆಯ ನರಸಿಂಹ ಮೂರ್ತಿ ಪಾತ್ರ ತರಾಸು ಅವರ ಕಾದಂಬರಿಯಲ್ಲಿ ಬಹಳ ಚಿಕ್ಕದು. ಆದರೆ ಚಿತ್ರದಲ್ಲಿ ಬಹಳ ಹಿಗ್ಗಿಸಲಾಗಿದೆ. ಅನಂತನಾಗ್ 100ಕ್ಕೆ 100ರಷ್ಟು ನ್ಯಾಯ ಒದಗಿಸಿದ್ದಾರೆನ್ನುವುದೂ ಅಷ್ಟೇ ನಿಜ. ಅನಂತನಾಗ್- ಲಕ್ಷ್ಮಿ ಅಭಿನಯದ ದೊರೈ ಭಗವಾನ್, ರಾಜನ್ ನಾಗೇಂದ್ರ, ಎಸ್ಪಿ- ಎಸ್.ಜಾನಕಿ ಅವರ ಕಾಂಬಿನೇಷನ್ ಹಾಡುಗಳನ್ನು ಈಗಲೂ ಮೆಲುಕು ಹಾಕುತ್ತಲೇ ಇರುತ್ತೇವೆ.

ಒಲಿದ ಜೀವ, ಬಿಸಿಲಾದರೇನು, ನಿನ್ನ ನಗುವು ಹೂವಂತೆ, ನನಗಾಗಿ ಬಂದ, ಒಲವಿನ ಸರಿಗಮ ರಾಗ, ನಯನದ ತುಂಬ, ಈ ಹಾಡುಗಳು ಜಯ ಗೋಪಾಲ್ ಅವರದ್ದು. ಆಕಾಶದಿಂದ ಧರೆಗಿಳಿದ ರಂಭೆ, ಮನೆಯನು ಬೆಳಗಿದೆ ಇಂದು, ನಾನು ನೀನು ಒಂದಾದ ಮೇಲೆ, ಚೆಲುವೆ ಓ ಚೆಲುವೆ, ಮನಸು ಹೇಳಿದೆ ಹೇಳಿದೆ, ಅನಂತನಾಗ್- ಲಕ್ಷ್ಮಿ ಜೋಡಿಯ ಇನ್ನೂ ಕೆಲವು ಗೀತೆಗಳು. ಅನಂತನಾಗ್ ಸುಹಾಸಿನಿ ಅವರ ಜೊತೆಗೆ ಅಭಿನಯಿಸಿದ ಹೊಸನೀರು, ಬಾಡದ ಹೂವುನಲ್ಲಿ ಪದ್ಮಪ್ರಿಯ ಜೊತೆಗಿನ ಅಭಿನಯ, ಕುದುರೆಮುಖ, ಪ್ರೇಮಾಯಣ, ಮಾತು ತಪ್ಪದ ಮಗ (ಆರತಿ) ಚಿತ್ರಗಳೂ ಚೆನ್ನಾಗಿವೆ. ಅರುಣರಾಗದ ವೈದ್ಯನ (ನಾಯಕಿ ಗೀತಾ)ಪಾತ್ರ ಮನಸ್ಸಿಗೆ ಹಾಗೇ ಸನಿಹವಾಗಿ ಬಿಡುತ್ತದೆ. ಗಂಭೀರ- ಹಾಸ್ಯ ಎರಡೂ ಪಾತ್ರಗಳನ್ನು ಅಷ್ಟೇ ಸರಾಗವಾಗಿ ಅಭಿನಯಿಸಬಲ್ಲ ಕಲಾವಿದರು ಅನಂತನಾಗ್.

ಮುದುಡಿದ ತಾವರೆ ಅರಳಿತು ಚಿತ್ರದಲ್ಲಿ ಹಠದಿಂದ ಕೊರಗುವ ನಾಯಕನಾಗಿ, ನಾಯಕಿಯನ್ನು ಗೋಳಾಡಿಸುವ ನಾಯಕನಾಗಿ ಇಬ್ಬನಿ ಕರಗಿತು ಚಿತ್ರದಲ್ಲಿ, ಹೀಗೆಲ್ಲ ಬಹಳ ವೈವಿಧ್ಯಮಯ ಆಯಾಮಗಳಲ್ಲಿ ಕಾಣಿಸಿಕೊಳ್ಳುವ ಅನಂತನಾಗ್ ನಾರದ ವಿಜಯದಲ್ಲಿ ಪೌರಾಣಿಕ ಪಾತ್ರವನ್ನೂ ಸಲೀಸಾದ ಹಾಸ್ಯದಲ್ಲಿ ಎರಕ ಹೊಯ್ದ ಜೀವಂತಿಕೆ, ಹಾಸ್ಯರತ್ನ ರಾಮಕೃಷ್ಣದ ವಿಕಟಕವಿ, ಗೌರಿ ಗಣೇಶದ ಮಿ.ಲಂಬೋದರ, ಗಣೇಶನ ಮದುವೆಯ ವೈ.ಜಿ ರಾವ್, ಇವೆಲ್ಲ ಅನಂತನಾಗ್ ಹೊರತು ಪಡಿಸಿ ಬೇರೆ ಯಾರೂ ಮಾಡಲು ಸಾಧ್ಯವೇ ಆಗದ ಪಾತ್ರಗಳು.

ಉಂಡೂ ಹೋದ ಕೊಂಡೂ ಹೋದ ಚಿತ್ರದ ಕಮಂಗಿಪುರದ ಜನಕ್ಕೆ ಮೋಸ ಮಾಡುವ ಕೌ ಇನ್‌ಸ್ಪೆಕ್ಟರ್, ಹೆಂಡ್ತಿಗ್ಹೇಳ್ಬೇಡಿ ಅನಂತನಾಗ್ ಅವರ ಅನನ್ಯ ಅಭಿನಯದ ಎರಕ. ಧೈರ್ಯಲಕ್ಷ್ಮಿ, ಗಾಯತ್ರಿ ಮದುವೆ, ನನ್ನ ದೇವರು, ಸುಖ ಸಂಸಾರಕ್ಕೆ 12 ಸೂತ್ರಗಳು... ಇಲ್ಲಿನ ಹಾಸ್ಯದ ಪಾತಳಿಗಳು ಬೇರೆ. ಆದರೆ ಅದನ್ನು ಹೂವೆತ್ತಿದಷ್ಟು ಅನಾಯಾಸವಾಗಿ ಅಭಿನಯಿಸಿದ ಅನಂತನಾಗ್ ಅವರು ಗೋಲ್‌ಮಾಲ್ ರಾಧಾಕೃಷ್ಣ, ರೋಲ್ ಕಾಲ್ ರಾಮಕೃಷ್ಣ, ಗಣೇಶ- ಸುಬ್ರಹ್ಮಣ್ಯ ಚಿತ್ರಗಳ ಪಾತ್ರಗಳ ಹೂರಣ ಹಾಸ್ಯವೇ ಆದರೂ ಅದರ ಮಜಲುಗಳು ಭಿನ್ನ. ಅದರಲ್ಲೂ ಸೈ ಎನ್ನಿಸಿದ ಅನಂತ ನಾಗ್ ನಾ ನಿನ್ನ ಬಿಡಲಾರೆ ಚಿತ್ರದಲ್ಲಿ ಅಭಿನಯಿಸಿದ ಗಾಂಭೀರ್ಯ, ಹಂಸಗೀತೆ ಚಿತ್ರದ ತಾದಾತ್ಮ್ಯತೆ ಅಚ್ಚರಿ ಮೂಡಿಸುತ್ತದೆ. ಈ ಬಗೆಯ ವೈವಿಧ್ಯ, ಟ್ರಾನ್ಸ್‌ಫಾರ್ಮೇಶನ್ ಇವತ್ತಿನ ಕಲಾವಿದರಿಗೆ ಮಾದರಿ ಮತ್ತು ಆದರ್ಶಪ್ರಾಯ.

ಯಂಡಮೂರಿ ವೀರೇಂದ್ರನಾಥ್ ಅವರ ಬೆಳದಿಂಗಳ ಬಾಲೆಯ ರೇವಂತ್ ಆಗಿ ಅನಂತನಾಗ್ ಅವರ ಅಭಿನಯ, ಮಾತಿಗಿಂತ ಮುಖಭಾವ, ಮೌನದ ಭಾವಾಭಿವ್ಯಕ್ತಿ ಪ್ರಕಟವಾಗಬೇಕಾದ ಪಾತ್ರ. ಅನಂತನಾಗ್ ಅವರ ಚಿರಸ್ಮರಣೀಯ ಅಭಿನಯ ಈ ಚಿತ್ರದ ಜೀವಂತಿಕೆ. ಭಾರ್ಗವ ಅವರ ಬಳಿ ಮಾತನಾಡುವಾಗ ಮತ್ತೆ ಹಾಡಿತು ಕೋಗಿಲೆ ಚಿತ್ರದಲ್ಲಿ ವಿಷ್ಣುವರ್ಧನ್ ಅವರ ಪಾತ್ರ, ನನ್ನ ಪಾತ್ರ ಎರಡರಲ್ಲಿ ಯಾವುದರ ತೂಕವೂ ಕಡಿಮೆಯಾಗಬಾರದು ಎಂದಷ್ಟೇ ಕೇಳಿದ ಅನಂತನಾಗ್, ವಿಷ್ಣುವರ್ಧನ್ ಅಭಿನಯ ಮರೆಯಲಾಗುವುದೇ ಪ್ರಸಾದ್ ಎಂದ ಭಾರ್ಗವ ಅವರ ಮಾತುಗಳನ್ನು ಇಲ್ಲವೆನ್ನಲಾಗುವುದೇ? ವಿಷ್ಣುವರ್ಧನ್ ಅನಂತನಾಗ್ ಜೋಡಿಯ ನಿಷ್ಕರ್ಷ, ಜೀವನದಿ ಚಿತ್ರಗಳೂ ಚೆನ್ನಾಗಿವೆ.

ವಯೋಮಾನಕ್ಕೆ ತಕ್ಕ ಪಾತ್ರಗಳನ್ನು ಆಯ್ಕೆ ಮಾಡಿಕೊಂಡ ಅನಂತನಾಗ್ ಅವರು ಅದರಲ್ಲೂ ಲೀಲಾಜಾಲವಾಗಿ ಅಭಿನಯಿಸಿ ಹೃದಯ ತಟ್ಟಿದ ಕಲಾವಿದರು. ಮುಂಗಾರು ಮಳೆ ಹಾಗೆ ಎಲ್ಲರಿಗೆ ಇಷ್ಟವಾದ ಪಾತ್ರವಾದರೆ, ಗೋಧಿಬಣ್ಣ ಸಾಧಾರಣ ಮೈಕಟ್ಟು ಚಿತ್ರದ ಅನಂತನಾಗ್ ಅವರ ಅಭಿನಯವಂತೂ ಕಣ್ಣುಗಳನ್ನು ಆರ್ದ್ರವಾಗಿಸುತ್ತದೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿತ್ರ ಅನಂತನಾಗ್ ಅವರ ಮಾಗಿದ ಕಲಾವಿದತನದ ಹೆಗ್ಗುರುತು.

ಹಾಲಿವುಡ್, ಗಾಳಿಪಟ, ಪ್ರೀತಿ ಪ್ರೇಮ ಪ್ರಣಯ ಹೀಗೆ ಹಿರಿವಯಸ್ಸಿನಲ್ಲೂ ಇಷ್ಟವಾಗುವ ಅನಂತ ನಾಗ್ ಅವರ ಪಾತ್ರಗಳು.

**ಶಂಕರ್-ಅನಂತ್**

ತೆರೆಯ ಹಿಂದಿನ ತಾಂತ್ರಿಕ ಕೆಲಸಗಳ ಸೃಜನಶೀಲನಾಗುವ ಬಯಕೆ ಹೊಂದಿದ್ದ ಶಂಕರನಾಗ್‌ರನ್ನು ಅನಂತನಾಗ್ ಗಿರೀಶ್ ಕಾರ್ನಾಡ್ ಅವರ ಬಳಿ ಒತ್ತಾಯ ಮಾಡಿ ಕಳಿಸಿದ್ದರಿಂದಲೇ ಒಂದಾನೊಂದು ಕಾಲದಲ್ಲಿ ಚಿತ್ರದ ಗಂಡುಗಲಿ ಆಗಿ ಶಂಕರನಾಗ್ ಮಿನುಗಿದರು.

ಮಾಲ್ಗುಡಿ ಡೇಸ್‌ನ ಚಿತ್ರೀಕರಣಕ್ಕಾಗಿ ಆಗುಂಬೆಯನ್ನು ತಮ್ಮನಿಗೆ ಸೂಚಿಸಿದವರೂ ಸಹ ಅನಂತ ನಾಗ್ ಅವರೇ. ಅನಂತನಾಗ್- ಶಂಕರನಾಗ್ ಅನೇಕ ಚಿತ್ರಗಳಲ್ಲೂ ಜೊತೆಯಾಗಿದ್ದಾರೆ. ಮಿಂಚಿನ ಓಟದಲ್ಲಿ ಅನಂತನಾಗ್ ಶಂಕರನಾಗ್ ಅಭಿನಯಿಸಿರುವುದಷ್ಟೇ ಅಲ್ಲದೆ, ಬೆಳ್ಳಿಮೋಡ ಹತ್ತುತ್ತಾ ಹಾಡನ್ನೂ ಹಾಡಿದ್ದಾರೆ.

ಆಕ್ಸಿಡೆಂಟ್, ರಾಮರಾಜ್ಯದಲ್ಲಿ ರಾಕ್ಷಸರು, ನೋಡಿ ಸ್ವಾಮಿ ನಾವಿರೋದೆ ಹೀಗೆ, ಮಕ್ಕಳಿರಲವ್ವ ಮನೆತುಂಬ, ಜನ್ಮಜನ್ಮದ ಅನುಬಂಧ, ಇದು ಸಾಧ್ಯ, ಜೀವಕ್ಕೆ ಜೀವ ಹೀಗೆ ಅನೇಕ ಚಿತ್ರಗಳಲ್ಲಿ ಈ ಸೋದರರ ಅಭಿನಯವಿದೆ. ಶಂಕರನಿಗೆ ನಾನು ಅಣ್ಣನಾಗಿರಲಿಲ್ಲ, ಅವನ ಪಾಲಿಗೆ ನಾನು ತಂದೆಯಾಗಿದ್ದೆ, ಅವನು ನನ್ನ ಮಗನಂತೆ ಇದ್ದ, 35ಕ್ಕೇ ಅವನನ್ನು ಕರೆದೊಯ್ದ ಆ ದೇವರನ್ನು ನಾನು ಕ್ಷಮಿಸೋದಿಲ್ಲ ಎಂಬ ಅನಂತನಾಗ್ ಅವರ ಸೋದರ ವಾತ್ಸಲ್ಯದ ನೋವೇ ಪಿ.ಲಂಕೇಶರಿಂದ ಪ್ರೇರಿತಗೊಂಡು ನನ್ನ ತಮ್ಮ ಶಂಕರ ಎಂಬ ಕೃತಿ, ಅನಂತನಾಗ್ ಅವರೊಳಗಿದ್ದ ಲೇಖಕನನ್ನೂ ಪರಿಚಯಿಸುತ್ತದೆ.

> ಚಿತ್ರೀಕರಣ ಮಾಡುವಾಗ ಇವರ ಅಭಿನಯ ಇದೇನಪ್ಪ ತಣ್ಣಗಿನ ಮೆಲುಸ್ತರದಲ್ಲಿ ಸಾಗುತ್ತಿದೆಯಲ್ಲ ಅನ್ನಿಸೋದು, ಆದರೆ ತೆರೆಯ ಮೇಲೆ ನೋಡಿದಾಗ ಅನಂತನಾಗ್ ಅವರ ಅಭಿನಯ ಉತ್ಕೃಷ್ಟವಾಗಿರುತ್ತಿತ್ತು. ಅನಂತ್ ಆ ತರಹದ ಒಬ್ಬ ಅದ್ಭುತ ಕಲಾವಿದ. ನಮ್ಮ ಅವರ ಸಂಯೋಜನೆಯಲ್ಲಿ ಅನೇಕ ಚಿತ್ರಗಳು ಯಶಸ್ವಿಯಾಗಲು ಅನಂತ್ ಅಭಿನಯ ಒಂದು ಮುಖ್ಯ ಕಾರಣ. ಅದಲ್ಲದೆ, ಸುಂದರ ಸುರದ್ರೂಪಿ ನಟ ಕೂಡ ಹಾಸ್ಯವನ್ನು ಬಹಳ ಚೆನ್ನಾಗಿ ಪ್ರೇಕ್ಷಕರಿಗೆ ತಲುಪಿಸಬಲ್ಲ ಎನ್ನುವುದನ್ನು ಪ್ರೂವ್ ಮಾಡಿದವರು ಅನಂತನಾಗ್.
>
> **- ಭಗವಾನ್,** ನಿರ್ದೇಶಕ

78 ವರ್ಷದ ಹಿರಿಯ ಕಲಾವಿದರಾದ ಅನಂತ ನಾಗ್ ಎಂಬ ಹೃದಯಕ್ಕೆ ಆಪ್ತವಾಗುವ ಕಲಾವಿದರು ಸದಾ ನಳನಳಿಸಲಿ. ಕನ್ನಡಿಗರ ಹೃನ್ಮನ ತಣಿಸುತ್ತಿರಲಿ. ಗೌರವ ಡಾಕ್ಟರೇಟ್, ಪದ್ಮಭೂಷಣ, ಇದೀಗ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಎಲ್ಲಕ್ಕೂ ಅರ್ಹರಾದ ಸಹಜಾಭಿನಯ ಕಲಾವಿದ ಅನಂತನಾಗ್ ಅವರ ಹಿರಿಮೆ ಗರಿಮೆಗಳು ಮತ್ತಷ್ಟು ವಿಸ್ತರಿಸಲಿ.

**ಪ್ರತಿಭೆಗೆ ದೊರೆತ ಫಲ**

78 ವರ್ಷದ ಅನಂತ್‌ನಾಗ್ ಅವರು 300ಕ್ಕೂ ಹೆಚ್ಚು ಸಿನಿಮಾಗಳಿಗೆ ಬಣ್ಣ ಹಚ್ಚಿದ್ದಾರೆ. ಐದು ದಶಕಗಳ ಅಭಿನಯ. 1973ರಲ್ಲಿ ಸಂಕಲ್ಪ ಸಿನಿಮಾ ಮೂಲಕ ನಟನೆ ಶುರು ಮಾಡಿದರು. ರಾಜ್ ಕುಮಾರ್, ವಿಷ್ಣುವರ್ಧನ್, ರವಿಚಂದ್ರನ್ ಅಂತಹ ದೊಡ್ಡ ನಟರಿಂದ ಹೊಸ ಪೀಳಿಗೆಯ ಪುನೀತ್, ಗಣೇಶ್, ಯಶ್, ರಿಷಬ್ ಶೆಟ್ಟಿ, ರಕ್ಷಿತ್ ಶೆಟ್ಟಿ ಸೇರಿದಂತೆ ಅನೇಕ ನಟರ ಜೊತೆ ನಟಿಸಿದ್ದಾರೆ.

**ರಂಗಭೂಮಿಯ ಪ್ರತಿಭೆ**

ವಯಸ್ಸು 16 ಆಗುವ ಮುನ್ನವೇ ಮುಂಬೈಗೆ ಕಳಿಸಲ್ಪಟ್ಟ ಅನಂತ್ ಅಲ್ಲಿ ಶಿಕ್ಷಣ ಮುಂದುವರೆಸಿದರು. ಅನಂತ್ ಅವರಿಗೆ ಸೈನ್ಯ ಸೇರಬೇಕು, ವಿಶೇಷವಾಗಿ ವಾಯುಸೇನೆಗೆ ಸೇರುವ ಬಯಕೆ ಇತ್ತು. ಆದರೆ ಅವರ ಕೃಶದೇಹದ ಕಾರಣ ಆ ಕನಸು ನನಸಾಗಲಿಲ್ಲ. ಆದರೆ ಸ್ಪುರದ್ರೂಪಿಯಾಗಿದ್ದ ಅವರನ್ನು ರಂಗಭೂಮಿ ಸೆಳೆಯಿತು. ಮಹಾರಾಷ್ಟ್ರದಾದ್ಯಂತ ವಿಶೇಷವಾಗಿ ಮುಂಬೈನಲ್ಲಿ ಆಧುನಿಕ ರಂಗಭೂಮಿಯ ಚಳವಳಿ ನಡೆಯುತ್ತಿದ್ದ ಸಮಯವದು.



**ಅನಂತನಾಗ್ ಅವರು ಸಹಜಾಭಿನಯದ ಕಲಾವಿದರೆನ್ನುವುದು ನಿರ್ವಿವಾದದ ಸತ್ಯ. ಆದರೆ ಜನತೆಗೆ ಅನಂತ್ ಅವರು ಬಹಳ ಇಷ್ಟವಾಗಲು ಪ್ರಮುಖವಾದ ಕಾರಣಗಳಿವೆ.**

- ಭಾಷಾಸ್ಪಷ್ಟತೆ, ಉಚ್ಚಾರಣಾ ಸೊಗಸು- ಅನಂತನಾಗ್ ಅವರ ಯಾವುದೇ ಚಿತ್ರಗಳನ್ನು ನೋಡಿದರೂ ಸಹ ಅವರು ಯಾವ ಮಾತುಗಳನ್ನೂ ನುಂಗುವುದಿಲ್ಲ, ಅವರು ಆಡುವ ಅಕ್ಷರಕ್ಷರವೂ ಕಿವಿಗೆ, ಮನಸ್ಸಿಗೆ ಸುಸ್ಪಷ್ಟವಾಗಿ ತಟ್ಟುತ್ತವೆ.
- ಕುಣಿತ- ಫೈಟಿಂಗ್‌ಗಳ ನೆರವಿಲ್ಲದೆ ಅಭಿಮಾನಿಗಳಿಗೆ ಹತ್ತಿರವಾದ ಕಲಾವಿದ ಕನ್ನಡದಲ್ಲಿ ಅನಂತನಾಗ್ ಮಾತ್ರ. ತನ್ನದೇ ಓರಗೆಯ ಕಲಾವಿದರು ಫೈಟಿಂಗ್, (ಶಂಕರನಾಗ್ ಅವರೇ ಹಲ್ಲು ಕಚ್ಚಿ ಹೇಳುವ ಸಂಭಾಷಣೆ, ಪೊಲೀಸ್ ಪಾತ್ರಗಳಿಗೆ ಹೆಸರಾದವರು) ಕುಣಿತಗಳಿಗೆ ಭೇಷ್ ಎನ್ನಿಸಿ ಕೊಂಡರೂ ಅನಂತನಾಗ್ ಯಾವ ಬಿರುದುಗಳಿಗೂ ತಲೆ ಕೆಡಿಸಿಕೊಂಡವರಲ್ಲ.
- ಫೈಟ್, ಕುಣಿತಗಳಿದ್ದರೇನೆ ಯಶಸ್ಸು ಎಂದು ನಂಬಿ ಕುಳಿತವರೂ ಅಲ್ಲ.
- ಅತಿಯಾದ ಅಭಿನಯ ಇಲ್ಲದ ಕಲಾವಿದ. ದುರ್ಬೀನು ಹಾಕಿ ಹುಡುಕಿದರೂ ಸಹ ಅನಂತನಾಗ್ ಅವರಲ್ಲಿ ಅತಿರೇಕದ ಅಭಿನಯ ಕಾಣಲು ಸಾಧ್ಯವೇ ಇಲ್ಲ. ಅವರು ವಿಭಿನ್ನ ಕಾಲಘಟ್ಟಗಳಲ್ಲಿ ಅಭಿನಯಿಸಿದ ಯಾವುದೇ ಚಿತ್ರಗಳನ್ನು ನೋಡಿದರೂ ಇದು ಸತ್ಯಸ್ಯಸತ್ಯ.

ಅನಂತನಾಗ್ ಅವರು ಅಮೋಲ್ ಪಾಲೇಕರ್ ಸೇರಿದಂತೆ ಹಲವು ದಿಗ್ಗಜರ ನಾಟಕಗಳಲ್ಲಿ ನಟಿಸಿದರು. ಹಿಂದಿ, ಕನ್ನಡ, ಕೊಂಕಣಿ, ಮರಾಠಿ ಹೀಗೆ ಭಾಷೆಯ ಹಂಗಿಲ್ಲದೆ ಸಿಕ್ಕ ಅವಕಾಶಗಳನ್ನೆಲ್ಲ ಬಾಚಿಕೊಂಡರು. 1973 ರಲ್ಲಿ ಮೊದಲ ಸಿನಿಮಾ ಅಂಕುರ್‌ನಲ್ಲಿ ನಟಿಸುವಷ್ಟರ ನಟನೆಯ ಎಲ್ಲ ಪಟ್ಟುಗಳು ಅವರಿಗೆ ಕರಗತ ಆಗಿಬಿಟ್ಟಿದ್ದವು.

70ಕ್ಕೂ ಹೆಚ್ಚು ನಾಟಕಗಳಲ್ಲಿ ಅವರು ನಟಿಸಿದ್ದರು. ಚಿತ್ರರಂಗಕ್ಕೆ ಕಾಲಿರಿಸಿದ ಆರಂಭದಲ್ಲಿ ಹೊಸ ಅಲೆಯ ನಾಯಕ ಎನಿಸಿಕೊಂಡಿದ್ದ ಅನಂತ್ ನಾಗ್ ಶ್ಯಾಮ್ ಬೆನಗಲ, ಅಮೋಲ್ ಪಾಲೇಕರ್, ಶಬಾನಾ ಆಜ್ಮಿ ಇನ್ನೂ ಹಲವರೊಟ್ಟಿಗೆ ಕೆಲಸ ಮಾಡಿದರು. 1974ರಿಂದ 78ರ ವರೆಗೆ ಕನ್ನಡದ ಜೊತೆ-ಜೊತೆಗೆ ಹಿಂದಿ ಮತ್ತು ತೆಲುಗು ಸಿನಿಮಾಗಳಲ್ಲಿಯೂ ಕೆಲಸ ಮಾಡಿದರು. ಅವರ ಮೊದಲ ಹಿಂದಿ ಸಿನಿಮಾ ಅಂಕುರ್‌ಗೆ ಮೂರು ರಾಷ್ಟ್ರಪ್ರಶಸ್ತಿಗಳು ದೊರೆತವು.

**- ಡಾ.ಡಿ.ಎಸ್.ಶ್ರೀನಿವಾಸ** ಪ್ರಸಾದ್

---



# ಭಾವನೆಗಳ ಹೊಯ್ದಾಟ

ಒಬ್ಬ ಯುವಕ ಬಹಳ ದೂರದ ಊರಿಗೆ ನಡೆದುಕೊಂಡು ಹೋಗುತ್ತಿದ್ದನು. ಬೇಸಗೆಯ ದಿನಗಳು. ಮಟ ಮಟ ಮಧ್ಯಾಹ್ನದ ಸಮಯ. ದೇಹದಿಂದ ಬೆವರಿಳಿಯುತ್ತಿತ್ತು. ನಿಗದಿತ ಸಮಯಕ್ಕೇ ಊರು ಸೇರಬೇಕು. ವಿಶ್ರಾಂತಿಗೆಂದು ಮರದಡಿ ಕುಳಿತುಕೊಳ್ಳುವಂತಿಲ್ಲ, ನಡೆದ ಆಯಾಸ ಜೊತೆಗೆ ಬಾಯಾರಿಕೆ , ಸಹಿಸಲು ಕಷ್ಟ ಪಡುತ್ತಿದ್ದನು. ಅಷ್ಟರಲ್ಲಿ ದೂರದಲ್ಲೊಂದು ಮನೆ ಕಾಣಿಸಿತು. ಆ ಮನೆಯತ್ತ ನಡೆದನು.

ಮನೆಯ ಅಂಗಳ ತಲುಪಿದೊಡನೆ ಮನೆಯವರನ್ನು ಕರೆದನು. ಆಗ ಕಾಲಿಂಗ್ ಬೆಲ್, ವಿದ್ಯುತ್ ಯಾವುದೂ ಇಲ್ಲದ ಕಾಲ. ಮನೆಯೊಡತಿ ಮನೆಯ ಹೊಸ್ತಿಲ ಬಳಿ ಬಂದಳು. ಏನಾಗಬೇಕಿತ್ತು? ಯಾರು ಬೇಕಿತ್ತು. ನೀವು ಯಾರು ಮುಂತಾಗಿ ಮಾತನಾಡಿಸಿದಳು. ತಾನು ದೂರದೂರಿಗೆ ನಡೆದು ಬರುತ್ತಿದ್ದೇನೆ. ಬಿಸಿಲಿನ ತಾಪ ಸಹಿಸಲಾಗುತ್ತಿಲ್ಲ. ಬಹಳ ಬಾಯಾರಿಕೆಯಾಗಿದೆ. ನೀರು ಬೇಕಿತ್ತು ಎಂದು ಹೇಳಿದನು ಮನೆಯ ಒಡತಿ, ನೀರು ತರುತ್ತೇನೆ. ಎಂದು ಹೇಳಿ ಒಳ ನಡೆದಳು.

ದಾರಿಹೋಕ ಅಂಗಳದಲ್ಲೇ ಬಾಗಿಲ ಪಕ್ಕ ನೆರಳಿನಲ್ಲಿ ನಿಂತುಕೊಂಡು ನೀರಿಗಾಗಿ ಕಾಯುತ್ತಾ ಇದ್ದನು. ಒಳ ನಡೆದ ಹೆಂಗಸು ನೀರಿನೊಂದಿಗೆ ಹೊರಗೆ ಬರುವುದು ಕಾಣಿಸಲಿಲ್ಲ. ಪಥಿಕ ಯೋಚಿಸ ತೊಡಗಿದ. ಛೇ!, ಒಳಗೆ ಹೋಗಿ ಬಹಳ ಸಮಯವಾಯಿತು. ನೀರು ಕೊಡುವುದರಲ್ಲೂ ಜಿಪುಣೆ ಈ ಮನೆಯೊಡತಿ ಎಂದು ಹೊರಡಲನುವಾದನು. ಅಷ್ಟರಲ್ಲಿ ಮನೆಯಾಕೆ ಹೊರ ಬಂದು. ತಡವಾಯಿತೇ? ಬರೇ ನೀರು ಕೊಡ ಬಾರದು. ಬಹಳ ದೂರದಿಂದ ಬಂದಿದ್ದೀರಿ. ಬಹಳ ತ್ರಾಸ ಹೊಂದಿರುವಿರಿ. ಅದಕ್ಕಾಗಿ ನಾನು ನಿಂಬೆ ಪಾನೀಯ ಮಾಡಿ ತರುವಾಗ ತಡವಾಯಿತು. ಕ್ಷಮಿಸಿ. ಎಂದಳು.

ಈಗ ಆ ಯುವಕನ ಭಾವನೆ ಬದಲಾಯಿತು. ಬಹಳ ಉತ್ತಮ ಹೆಂಗಸು. ಪಾಪ! ಆತಿಥ್ಯವೆಂದರೆ ಹೀಗಿರಬೇಕು. ಅಪರಿಚಿತ ನಾನು. ಆದರೂ ನಿಂಬೆ ಜ್ಯೂಸ್ ಮಾಡಿ ತಂದಿದ್ದಾರೆ. ಸಂತಸದಿಂದ ಕುಡಿಯಲಾರಂಭಿಸಿದನು. ಬಾಯಿಯೊಳಗೆ ಮೊದಲ ಹನಿ ಬೀಳುತ್ತಿದ್ದಂತೆ ಅವನ ಮುಖದ ಭಾವ ಬದಲಿತು ಪಾನೀಯವನ್ನು ಬಾಯಿಗಿಡಲು ಆರಂಭಿಸಿದಾಗ ಇದ್ದ ಆ ಸಂತಸದ ಭಾವ ಈಗ ಮಾಯವಾಗಿದೆ. ಮನಸ್ಸಿನಲ್ಲಿಯೇ ಯೋಚಿಸಿದನು. ಈ ದರಿದ್ರ ಹೆಂಗಸು, ನಿಂಬೆ ಜ್ಯೂಸ್ ಮಾಡಿದ್ದಾಳೆ. ನಾನು ಕೇಳಿದ್ದು ಬರೇ ನೀರು. ಹೇಗೂ ಜ್ಯೂಸ್ ಮಾಡಿದ್ದಾಳೆ, ಅದಕ್ಕೆ ಸ್ವಲ್ಪ ಸಕ್ಕರೆಯೋ ಉಪ್ಪೋ ಸೇರಿಸಿ ಸರಿಕಟ್ಟಾಗಿ ಮಾಡ ಬಾರದಿತ್ತೇ? ಎಂದು ಹಲ್ಲು ಗಿಂಜುತ್ತಾ ಕುಡಿಯಲು ಆರಂಭಿಸಿದನು. ಅಷ್ಟರಲ್ಲಿ ಮನೆಯೊಡತಿ ಬಹಳ ಪ್ರೀತಿಯಿಂದ, ಅಣ್ಣ, ಸಕ್ಕರೆ ತಂದಿದ್ದೇನೆ. ಈಗ ಕೆಲವರಿಗೆ ಸಕ್ರೆ ಕಾಯಿಲೆಯಿರುತ್ತೆ. ಜ್ಯೂಸಿಗೆ ಬೇಕಿದ್ದರೆ ಮಾತ್ರ ಹಾಕೋಣ ಎಂದು ಈ ಪಾತ್ರೆಯಲ್ಲಿ ಸಕ್ಕರೆ ಹಾಕಿ ತಂದಿರುವೆ. ಚಮಚವಿದೆ. ಬೇಕಾದರೆ ಸಕ್ಕರೆ ಹಾಕಿ ಕುಡಿಯಿರಿ. ಎಂದಳು. ಈಗ ಮತ್ತೆ ಯುವಕನ ಭಾವ ಬದಲಾಯಿತು. ಛೇ! ಅತಿಥಿಗಳ ಬಗ್ಗೆ ಏನು ಕಾಳಜಿ ಹೊಂದಿದ್ದಾಳೆ. ನಿಜವಾಗಿಯೂ ಮಹಾ ತಾಯಿ ಈಕೆ ಎಂದು ಭಾವಿಸಿದನು. ಸಕ್ಕರೆ ಪಡೆದು ಜ್ಯೂಸಿಗೆ ಹಾಕಿದನು. ಹೊಟ್ಟೆ ತುಂಬಾ ಜ್ಯೂಸ್ ಕುಡಿದು ಬಾಯಾರಿಕೆ ಇಂಗಿಸಿ ಧನ್ಯವಾದ ಸಲ್ಲಿಸಿ ಊರಿನತ್ತ ಹೊರಟನು. ಅಲ್ಲಿ ಅವನು ಮಾಡಬೇಕಿದ್ದ ಕೆಲಸಗಳನ್ನು ಮಾಡಿಸಿ ಮನೆಗೆ ಮರಳಿದನು, ನಾನಾ ಕಾರಣಗಳಿಗಾಗಿ ನಾವು ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಕಾಣುವುದಿರುತ್ತದೆ. ಅದು ಕಚೇರಿಯ ಕೆಲಸಕ್ಕೆ ಸಂಬಂಧಿತವಿರಬಹುದು. ಸೇವಾ ವಿಭಾಗಕ್ಕೆ ಸಂಬಂಧಿಸಿದ್ದಿರಬಹುದು ಯಾ ವ್ಯವಹಾರ ವಿಭಾಗವೇ ಆಗಿರಬಹುದು. ನಾವು ಅವರನ್ನು ನೋಡಿದೊಡನೆ ಒಂದು ಭಾವನೆಗೊಳಗಾಗುತ್ತೇವೆ. ಆ ಭಾವನೆ ಧನಾತ್ಮಕವೂ ಆಗಿರಬಹುದು, ಋಣಾತ್ಮಕವೂ ಆಗಿರಬಹುದು. ಆದರೆ ಅದೇ ಭಾವನೆ ನಮ್ಮಲ್ಲಿ ದೀರ್ಘಕಾಲ ಉಳಿಯುವುದಿಲ್ಲ. ಮೊದಲು ತಾಳಿದ ಭಾವನೆ ಬದಲಾಗಿ ಅದರ ವಿರುದ್ಧವಾದುದೇ ಆದ ಭಾವನೆಯಾಗಿ ಬದಲಾಗಲೂ ಬಹುದು. ಈ ಭಾವನೆ ಬದಲಾವಣೆಗೆ ಪ್ರೇರಕ ಅಥವಾ ಚಾಲಕ ಶಕ್ತಿ ನಮ್ಮ ವಿವೇಕ. ನಮ್ಮ ವಿವೇಕದ ಬಲ ಅಥವಾ ಗುಣಾಂಶಗಳು ಭಾವನೆಯ ಮೇಲೆ ಪ್ರಭಾವಿತವಾಗುತ್ತವೆ. ಭಾವ ಬದಲಾಗುತ್ತಾ ಇರುತ್ತದೆಯೇ ಹೊರತು ಆ ವ್ಯಕ್ತಿ ಬದಲಾಗಿದ್ದಾನೆ ಎಂದು ಹೇಳುವಂತಿಲ್ಲ. ಅವನ ಅಥವಾ ಅವಳ ಗುಣ ಸ್ವಭಾಗಳು ಕ್ಷಣಕ್ಷಣಕ್ಕೆ ಬದಲಾಗದು. ಬದಲಾವಣೆಯಾಗುವುದಿದ್ದರೂ ಅದು ದೀರ್ಘ ಕಾಲೀನ ಪ್ರಕ್ರಿಯೆ. ವ್ಯಾಪಾರಿಯಾಗಿ ಶ್ರೀಮಂತಿಕೆಯ ಶಿಖರವೇರುತ್ತಲಿದ್ದ ಶ್ರೀನಿವಾಸ ನಾಯಕ ದಾಸನಾಗಿ ಬದಲಾಗಿದ್ದಾನೆ. ಅಂತಹ ಉದಾಹರಣೆಗಳು ಸಾಕಷ್ಟಿವೆ, ಬದಲಾಗದ ರಾವಣ, ಕಂಸ ಇಂತಹವರೂ ನಮಗೆ ಸಿಗುತ್ತಾರೆ. ಭಾವನೆಗಳ ಬದಲಾವಣೆಗೂ ವ್ಯಕ್ತಿತ್ವಕ್ಕೂ ಭಿನ್ನತೆಯಿದೆ. ಭಾವನೆಗಳು ತಕ್ಷಣಕ್ಕೆ ಬದಲಾದರೆ ವ್ಯಕ್ತಿತ್ವವು ನಿಧಾನವಾಗಿ ಬದಲಾಗುತ್ತದೆ ಅಥವಾ ಬದಲಾಗದಿರಲೂ ಬಹುದು. ನಮ್ಮ ಭಾವನೆಯ ಅಳತೆಗೋಲಿನಿಂದ ಯಾವುದೇ ವ್ಯಕ್ತಿಯನ್ನು ಅವನ ವ್ಯಕ್ತಿತ್ವವನ್ನು ಅಳೆಯುವಂತಿಲ್ಲ. ಯಾಕೆಂದರೆ ನಮ್ಮ ಭಾವನೆ ಅಥವಾ ಯೋಚನೆಗಳು ನಿಖರವೂ ಅಲ್ಲ ಅಲ್ಲ ಶಾಶ್ವತವೂ ಅಲ್ಲ. ಆದುದರಿಂದ ವ್ಯಕ್ತಿಯನ್ನು ಅಳೆಯುವ ನಮ್ಮ ಮಾನದಂಡ ಸಮರ್ಪಕವಾಗಬೇಕು.

ಬಟ್ಟೆ ಬರೆ ನೋಡಿ ಶ್ರೀಮಂತನೋ ಬಡವನೋ ಎಂದು ಹೇಳಲಾಗದು. ದೊಡ್ಡ ಮನೆಯಿರಬಹುದು. ಸಾಲವು ಅದರ ಇಮ್ಮಡಿಯಿದ್ದರೆ! ಜೇಬಿನಲ್ಲಿ ಪೆನ್ನಿದೆಯೆಂದ ಮಾತ್ರಕ್ಕೆ ಆತ ವಿದ್ಯಾವಂತನಾಗಿರಬೇಕೆಂದಿಲ್ಲ. ತಲೆಗೆ ರುಮಾಲು ಸುತ್ತಿ ಕಚ್ಚೆ ಹಾಕಿ ತೋಟದಲ್ಲಿ ಕೆಲಸಮಾಡುತ್ತಿದ್ದಾನೆಂಬ ಮಾತ್ರಕ್ಕೆ ಆತ ಓದು ಬರಹ ಬಾರದ ಅನಾಗರಿಕನಾಗಿರಬೇಕಾಗಿಲ್ಲ. ನಾವು ನೋಡುವ ಮತ್ತು ಪಡುವ ದೃಷ್ಟಿಕೋನ ಹಾಗೂ ಭಾವನೆಗಳು ನಿಖರವಾಗಬೇಕು. ಸರಿಯಾಗಿ ಶ್ರದ್ಧಿಸದೆ ತೆಗೆದುಕೊಳ್ಳುವ ನಿರ್ಧಾರಗಳು ಅಥವಾ ಅವಸರದ ನಿರ್ಧಾರಗಳು ಮಿಥ್ಯವಾಗುವ ಸಾಧ್ಯತೆಯೇ ಹೆಚ್ಚು. ಭಾವನೆಗಳ ಹೊಯ್ದಾಟ ಅವಸರದ ನಿರ್ಧಾರದ ಕಾರಣವೇ ಹೊರತು ಬೇರೇನೂ ಅಲ್ಲ.

**- ರಮೇಶ ಎಂ. ಬಾಯಾರು,** ಬಂಟ್ವಾಳ

# ಸಹಕಾರಿ ಕ್ಷೇತ್ರದಿಂದ ದೇಶದ ಆರ್ಥಿಕತೆ ಸದೃಢ

## ಸಹಕಾರಿ ರಂಗ ಅಭಿವೃದ್ಧಿಯಾದರೆ ದೇಶದ ರೈತರ ಅಭಿವೃದ್ಧಿ: ಶಾಸಕ ಸಿ.ಎನ್.ಬಾಲಕೃಷ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸಹಕಾರಿ ವ್ಯವಸ್ಥೆಯಿಂದ ದೇಶದ ಅರ್ಥಿಕತೆ ಸದೃಢವಾಗಿದ್ದು, ದೇಶದ ಬಲವಾದ ಅರ್ಥಿಕತೆಯಿಂದಾಗಿ ರೈತರಿಗೆ ಹೆಚ್ಚಿನ ಸಹಕಾರ ಲಭಿಸಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳದಿಂದ ಚನ್ನರಾಯಪಟ್ಟಣ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಮಾರಾಟ ಮಹಾಮಂಡಳದ ಚನ್ನರಾಯಪಟ್ಟಣ ಶಾಖೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರಿ ರಂಗ ಅಭಿವೃದ್ಧಿಯಾದರೇ ದೇಶದ ರೈತರ ಅಭಿವೃದ್ಧಿ ಎಂಬುದಾಗಿ ಹೇಳಿದ ಗಾಂಧೀಜಿಯವರ ಮಾತಿನಂತೆ ದೇಶದಲ್ಲಿ ಸಹಕಾರಿ ರಂಗ ಸದೃಢವಾಗಿ ಬೆಳೆದಿದೆ. ರಾಜ್ಯದಲ್ಲಿ ಮಾರಾಟ ಮಹಾಮಂಡಳವೂ ಅತ್ಯಂತ ವಿಶ್ವಾಸಾರ್ಹ ಸಂಸ್ಥೆಯಾಗಿದ್ದು, ಕೃಷಿ ಉತ್ಪನ್ನಗಳು ಬೆಲೆ ಕುಸಿತವಾದಲ್ಲಿ ಸರ್ಕಾರದ ನಿರ್ದೇಶನದಂತೆ ಬೆಂಬಲ ಬೆಲೆಯಡಿ ಖರೀದಿ ಮಾಡುವ ಮೂಲಕ ರೈತರ ನೆರವಿಗೆ ನಿಂತಿದೆ.



ಚನ್ನರಾಯಪಟ್ಟಣ ಶಾಖೆಯಲ್ಲಿ ಕಳೆದ ಸಾಲಿನಲ್ಲಿ 15 ಕೋಟಿ ರೂ.ಗಳ ರಸಗೊಬ್ಬರ ಮಾರಾಟ ಮಾಡಿದೆ ಎಂದರು.

ಫೆಡರೇಶನ್‌ನ ಎಂ.ಡಿ.ಯವರ ಕೋರಿಕೆಯಂತೆ ಮುಂದಿನ ಹಂಗಾಮಿನಿಂದ ತಾಲ್ಲೂಕಿನ ಎಲ್ಲ 40 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಫೆಡರೇಶನ್ ಆಡಿಯಲ್ಲಿ ರಸಗೊಬ್ಬರ ಮಾರಾಟಕ್ಕೆ ಮುಂದಾಗಬೇಕು. ಈಗಿನಿಂದಲೇ ಲೈಸನ್ಸ್ ಸೇರಿದಂತೆ ಅವಶ್ಯವಿರುವ ಸಿದ್ದತೆ ಮಾಡಿಕೊಳ್ಳಬೇಕು. ಹಣದ ಕೊರತೆ ಇದ್ದಲ್ಲಿ ಜಿಲ್ಲಾ ಸಹಕಾರ ಬ್ಯಾಂಕಿನಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲದ ವ್ಯವಸ್ಥೆ ಮಾಡಲಾಗುವುದು. ಇದರಿಂದ ವಾರ್ಷಿಕ 25 ಕೋಟಿಗೂ ಹೆಚ್ಚಿನ ರಸಗೊಬ್ಬರ ವ್ಯಾಪಾರಕ್ಕೆ ಮುಂದಾಗಬಹುದೆಂದರು.

ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಸುರೇಶ್‌ಗೌಡ ಪಾಟೀಲ್ ಮಾತನಾಡಿ, ಮಧ್ಯ ಪ್ರಾಚ್ಯದಲ್ಲಿನ ಯುದ್ಧದ ನಡುವೆಯೂ ಪ್ರಧಾನ ಮಂತ್ರಿಯವರು ಕೈಗೊಂಡ ನಿಲುವಿನಿಂದ ದೇಶದ ರೈತರಿಗೆ ಸಮರ್ಪಕ ರಸಗೊಬ್ಬರವನ್ನು ಮಾರಾಟ ಮಾಡಲಾಗಿದೆ. ಕಳೆದ ಮೂರು ತಿಂಗಳಗಳಲ್ಲಿ ಮಾರಾಟ ಮಹಾಮಂಡಳವೂ 200 ಕೋಟಿ ರಸಗೊಬ್ಬರವನ್ನು ಕೇಂದ್ರ ಸರ್ಕಾರದ ಸಹಾಯಧನದಡಿ ಮಾರಾಟ ಮಾಡಿದೆ. ಇತ್ತೀಚಿನ ದಿನಗಳಲ್ಲಿ ಗ್ರಾಹಕರುಗಳ ಯೋಚನೆ, ತಾಂತ್ರೀಕತೆ ಬದಲಾದಂತೆ ಮಹಾಮಂಡಳವೂ ಬದಲಾಗಬೇಕಿದೆ. ಕ್ಷಣಾರ್ಧದಲ್ಲಿ ಒಂದು ಬಟನ್ ಒತ್ತುವ ಮೂಲಕ ಗ್ರಾಹಕನ ಮನೆಬಾಗಿಲಿಗೆ ಬೇಕಿದೆಲ್ಲವೂ ಬರುವ ದಿನಗಳಲ್ಲಿ ಸಹಕಾರ ಸಂಘಗಳು ಕಾರ್ಪೊರೇಟ್ ಕಂಪನಿಗಳೊಂದಿಗೆ ಸ್ಪರ್ಧೆ ಮಾಡಬೇಕಿದೆ. ಪ್ರತಿ ಷೇರುದಾರರ ಬಲದಿಂದ ಎಲ್ಲರ ಸಹಭಾಗಿತ್ವದಿಂದ ಕೆಲಸ ಮಾಡಿದ್ದಲ್ಲಿ ಸಹಕಾರಿ ಕ್ಷೇತ್ರ ಬಲಗೊಳ್ಳಲು ಸಾಧ್ಯವೆಂದ ಅವರು, ರಾಜ್ಯದ ಎಲ್ಲ ಸಹಕಾರ ಸಂಘಗಳ ಮೂಲಕವೇ ರಸಗೊಬ್ಬರ ಮಾರಾಟಕ್ಕೆ ಮುಂದಾಗಬೇಕು. ಜಿಲ್ಲೆಯಲ್ಲಿರುವ 150ಕ್ಕೂ ಹೆಚ್ಚು ಫ್ಯಾಕ್ಸ್ ಗಳಿದ್ದು ಒಂದೊಂದರಲ್ಲಿಯೂ 1 ಕೋಟಿ ರೂ. ವಹಿವಾಟು ನಡೆಸಿದರೆ ನೂರಾರು ಕೋಟಿ ವಹಿವಾಟು ಆಗಲಿದೆ ಎಂದರು.

ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ ಮಾತನಾಡಿ, ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳವೂ ರಸಗೊಬ್ಬರ ಮಾರಾಟ, ಕೃಷಿ ಉತ್ಪನ್ನಗಳ ಖರೀದಿ ಸೇರಿ ಇತರೆ ವಹಿವಾಟುಗಳಿಂದ 1720 ಕೋಟಿ ವಹಿವಾಟಿನೊಂದಿಗೆ 17 ಕೋಟಿ ಲಾಭಗಳಿಸಿದೆ. ಇಲ್ಲಿನ ರೈತರಿಗೆ ಮತ್ತು ಮಹಾಮಂಡಳದ ಕಾರ್ಯಚಟುವಟಿಕೆಗಳ ಅನುಕೂಲಕ್ಕಾಗಿ 15 ಲಕ್ಷ ವೆಚ್ಚದಲ್ಲಿ ನೂತನ ಶಾಖಾ ಕಛೇರಿ ನಿರ್ಮಾಣ ಮಾಡಲಾಗಿದೆ. ಸಹಕಾರಿ ರಂಗದ ರೈತರ ಹಿತ ಕಾಯುವ ಸಲುವಾಗಿ ತಾವು ಫೆಡರೇಶನ್ ನಿರ್ದೇಶಕರಾದ ಮೇಲೆ ತಾಲ್ಲೂಕಿನ 23 ಫ್ಯಾಕ್ಸ್‌ಗಳಿಗೆ 50 ಲಕ್ಷ ರೂ. ಟಿಎಪಿಸಿಎಂಎಸ್‌ಗೆ 44 ಲಕ್ಷ ರೂ.ಗಳನ್ನು ಕಟ್ಟಡ ಸಹಾಯಧನ ಮತ್ತು ಮೂಲಭೂತ ಸೌಲಭ್ಯಗಳ ಕಲ್ಪನೆಗೆ ಅನುದಾನ ನೀಡಲಾಗಿದೆ ಎಂದರು.

ಟಿಎಪಿಸಿಎಂಎಸ್‌ನ ಅಧ್ಯಕ್ಷ ಹೆಚ್.ಆರ್.ವೆಂಕಟೇಶ್‌ಮೂರ್ತಿ, ಉಪಾಧ್ಯಕ್ಷೆ ತಾರಮಣಿ ಆನಂದ್, ನಿರ್ದೇಶಕರಾದ ಅನಿಲ್‌ಕುಮಾರ್, ಕುಂಬಾರಹಳ್ಳಿ ರಮೇಶ್, ತೋಟಿ ನಾಗರಾಜು, ನಂಜುಂಡೇ ಗೌಡ, ನೆಟ್ಟೆಕೆರೆ ನಾಗರಾಜು, ಸಿ.ಜೆ.ಜಗದೀಶ್, ಉಮೇಶ್, ರವಿ ಕುಮಾರ್, ಹಿರಿಯ ಸಹಕಾರಿಗಳಾದ ಬಿ.ಎಚ್.ಶಿವಣ್ಣ, ವಿ.ಎನ್.ರಾಜಣ್ಣ, ಎಪಿಎಂಸಿ ಕಾರ್ಯದರ್ಶಿ ಸೋಮಶೇಖರ್ ಇದ್ದರು.

## ಪೊಲೀಸ್ ಸೇವಾ ಅನುಭವ: ಸಂವಾದ

ಹಾಸನ: ವಿದ್ಯಾರ್ಥಿಗಳಲ್ಲಿ ಕಾನೂನು ಅರಿವು, ಶಿಸ್ತು, ಆತ್ಮವಿಶ್ವಾಸ ಹಾಗೂ ಜೀವನದ ಮೌಲ್ಯಗಳನ್ನು ಬೆಳೆಸುವ ಉದ್ದೇಶದಿಂದ ಕಾರ್ಯ ಕ್ಷಮತೆ ಮತ್ತು ಪೊಲೀಸ್ ಸೇವಾ ಅವಧಿ ಅನುಭವಗಳನ್ನು ಎಂಬ ವಿಶೇಷ ಕಾರ್ಯಕ್ರಮವನ್ನು ಸೆ.22 ರಂದು ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ ಇವರ ಸಂಯೋಜನೆಯಲ್ಲಿ ಟೈಗರ್ ಅಶೋಕ್ ಎಂದೇ ಹೆಸರುವಾಸಿಯಾಗಿರುವ ಹಾಸನ ಜಿಲ್ಲೆಯವರೂ ಹಾಗೂ ನಿವೃತ್ತ ಸಹಾಯಕ ಪೊಲೀಸ್ ಆಯುಕ್ತರಿಂದ ತಮ್ಮ ಸೇವೆ ಅವಧಿಯಲ್ಲಿನ ನೈಜ ಅನುಭವಗಳು, ಕಾನೂನು ಅರಿವು, ಕರ್ತವ್ಯನಿಷ್ಠೆ, ಶಿಸ್ತು ಹಾಗೂ ಜೀವನದಲ್ಲಿ ಯಶಸ್ಸು ಸಾಧಿಸುವ ಕುರಿತು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕವಾಗಿ ಮಾತನಾಡಲಿದ್ದಾರೆ.

ಪೊಲೀಸ್ ವೃತ್ತಿಯಲ್ಲಿ ರೌಡಿಗಳ ನಿಯಂತ್ರಣ, ವೀರಪ್ಪನ್ ಸೆರೆಹಿಡಿಯುವ ಕಾರ್ಯಚರಣೆ ಹಾಗೂ ಅಪರಾಧಿಗಳನ್ನು ಸುಶಿಕ್ಷಿತರನ್ನಾಗಿ ಮಾಡಿದ ಪರಿವರ್ತನೆ ಪ್ರಯತ್ನಗಳ ಯಶಸ್ಸಿನ ಬಗ್ಗೆ ಸಂವಾದ ನಡೆಸಿ ಕೊಡಲಿದ್ದಾರೆ.

## ಜಪಾನ್‌ನಲ್ಲಿ ಏಷ್ಯನ್ ಗೇಮ್ಸ್ ಆರಂಭ



• ಪ್ರಜೋದಯ ವರದಿ

**ನಗೋಯಾ:** ಮಿನಿ ಒಲಿಂಪಿಕ್ ಎಂದೇ ಕರೆಯಲ್ಪಡುವ ಏಷ್ಯನ್ ಕ್ರೀಡಾಕೂಟದ 20ನೇ ಆವೃತ್ತಿಯು ಇಂದಿನಿಂದ ಜಪಾನ್‌ನ ಐಚಿ-ನಗೋಯಾದಲ್ಲಿ ಆರಂಭವಾಗಲಿದೆ.

ಉದ್ಘಾಟನಾ ಸಮಾರಂಭದಲ್ಲಿ ಭಾರತದ ಧ್ವಜಧಾರಿಯಾಗಿ ಆಯ್ಕೆಯಾಗಿದ್ದ ಖ್ಯಾತ ಶಾಟ್‌ಪುಟ್ ಪಟು ತಜಿಂದರ್‌ಪಾಲ್ ಸಿಂಗ್ ತೂರ್ ಅವರನ್ನು ಕೊನೆ ಕ್ಷಣದಲ್ಲಿ ಬದಲಾಯಿಸಲಾಗಿದೆ. ಇದೀಗ ಒಲಿಂಪಿಯನ್ ಶೂಟರ್ ಮನು ಭಾಕರ್ ಅವರೊಂದಿಗೆ ಅನುಭವಿ ಕಬಡ್ಡಿ ಆಟಗಾರ ಪವನ್ ಶೆರಾವತ್ ಧ್ವಜಧಾರಿಯಾಗಿ ಕ್ರೀಡಾಪಟುಗಳ ತಂಡವನ್ನು ಮುನ್ನಡೆಸಲಿದ್ದಾರೆ.

ಭಾರತದ 503 ಅಥ್ಲೀಟ್‌ಗಳು 36 ಸ್ಪರ್ಧೆಗಳಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸಲಿದ್ದಾರೆ. 265 ನೆರವು ಸಿಬ್ಬಂದಿ ಮತ್ತು ಪದಾಧಿಕಾರಿಗಳೂ ಕ್ರೀಡಾಪಟುಗಳೊಂದಿಗೆ ಇರಲಿದ್ದಾರೆ. 2028ರ ಒಲಿಂಪಿಕ್ಸ್‌ಗೆ ಪ್ರವೇಶ ಪಡೆಯಲು ಅರ್ಹತೆ ಗಿಟ್ಟಿಸಿಕೊಳ್ಳುವ ಅವಕಾಶವೂ ಇಲ್ಲಿದೆ. 2023ರಲ್ಲಿ ಚೀನಾದಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ತಂಡವು 106 ಪದಕಗಳನ್ನು ಜಯಿಸಿತ್ತು.

1952ರಲ್ಲಿ ನಡೆದ ಚೊಚ್ಚಲ ಏಷ್ಯನ್ ಗೇಮ್ಸ್‌ನಲ್ಲಿ ಕೇವಲ ಆರು ಕ್ರೀಡೆಗಳು ಇದ್ದವು. ಅಥ್ಲೆಟಿಕ್ಸ್, ಈಜು, ಬಾಸ್ಕೆಟ್‌ಬಾಲ್, ಸೈಕ್ಲಿಂಗ್, ಫುಟ್‌ಬಾಲ್ ಹಾಗೂ ವೇಟ್‌ಲಿಫ್ಟಿಂಗ್ ಸ್ಪರ್ಧೆಗಳನ್ನು ನಡೆಸಲಾಗಿತ್ತು. ಒಟ್ಟು 57 ಪದಕ ಸ್ಪರ್ಧೆಗಳನ್ನು ನಡೆದಿದ್ದು, 489 ಕ್ರೀಡಾಪಟುಗಳು ಪಾಲ್ಗೊಂಡಿದ್ದರು.

ಈ ಬಾರಿ ಏಷ್ಯನ್ ಗೇಮ್ಸ್‌ನಲ್ಲಿ 43 ಕ್ರೀಡೆಗಳಿವೆ. ಒಟ್ಟು 71 ವಿಭಾಗಗಳಲ್ಲಿ 469 ಪದಕ ಸ್ಪರ್ಧೆಗಳು ನಡೆಯಲಿವೆ. 10 ಸಾವಿರಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಲಿದ್ದಾರೆ.

## ಸೆ.22 ರಂದು ವಿದ್ಯುತ್ ವ್ಯತ್ಯಯ

ಹಾಸನ: ಹೊಳೆನರಸೀಪುರ ನೋಡಲ್ ಕೇಂದ್ರ ವ್ಯಾಪ್ತಿಯ 66/11 ಕೆ.ವಿ.ವಿ.ವಿ ಕೇಂದ್ರ, ಹಂಗರಹಳ್ಳಿಯಲ್ಲಿ ಎರಡನೇ ತ್ರೈಮಾಸಿಕ ನಿರ್ವಹಣಾ ಕಾರ್ಯವನ್ನು ನಿರ್ವಹಿಸಬೇಕಾಗಿರುವುದರಿಂದ ಸೆ.22 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಹಂಗರಹಳ್ಳಿ ಶಾಖಾ ವ್ಯಾಪ್ತಿಯ ಗ್ರಾಮಗಳಾದ ಹಂಗರಹಳ್ಳಿ, ಹರಳಹಳ್ಳಿ, ಪಡುವಲಹಿಪ್ಪೆ, ಹಳೇಕೋಟೆ, ಹರದನಹಳ್ಳಿ, ಕ್ಯಾತನಹಳ್ಳಿ, ಕಾಮಸಮುದ್ರ, ಮಾವಿನಕೆರೆ, ಹನುಮನಹಳ್ಳಿ, ನ್ಯಾಮನಹಳ್ಳಿ, ಕಿನ್ನರಹಳ್ಳಿ ಹಾಗೂ ಗೊರೂರು ಶಾಖಾ ವ್ಯಾಪ್ತಿಯ ಗ್ರಾಮಗಳಾದ ಮಲ್ಲಿದೇವರಪುರ, ಸೀಗೂರು, ಅಂಕಪುರ, ಮಲ್ಲಿನಾಯಕನಹಳ್ಳಿ, ಕಬ್ಬತ್ತಿ, ಚನ್ನಾಂಗಿಹಳ್ಳಿ, ದೊಡ್ಡಬೀಕನಹಳ್ಳಿ, ಬಾಚಿಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ

ಮೊಸಳೆಹೊಸಹಳ್ಳಿ, ಹುಳುವಾರೆ, ಮುತ್ತಿಗೆಹಿರೇಹಳ್ಳಿ, ಬಸ್ತಿಹಳ್ಳಿ, ಬನವಾಸೆ, ಅಂಬುಗ, ಮಾದಾಪುರ ಮತ್ತು ಸುತ್ತಮುತ್ತಲಿನ ಗ್ರಾಮಗಳ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಮೊಸಳೆಹೊಸಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಜೋಡಿಗುಬ್ಬಿ, ಮುದ್ದನಹಳ್ಳಿ, ಕೆರೆಗೋಡು, ಉದ್ದೂರು ಹೊಸಹಳ್ಳಿ, ಓಡನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಬೆಳಿಗ್ಗೆ 10 ಗಂಟೆ ಯಿಂದ ಸಂಜೆ 6 ರ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸಾರ್ವಜನಿಕರು ಸಹಕರಿಸುವಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕಾರ್ಯಾಚರಣೆ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 5ನೇ ವಾರ್ಡ್‌ನಲ್ಲಿ ಗಣಪತಿ ವಿಸರ್ಜನೆ



• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಐದನೇ ವಾರ್ಡಿನ 5 ನೇ ವಾರ್ಡಿನ ಕುಂಬಾರ ಬೀದಿ ಬಾಯ್ಸ್ ವತಿಯಿಂದ ಕಳೆದ ಒಂದು ವಾರದಿಂದ ಆಂಜನೇಯ ಸ್ವಾಮಿ ದೇಗುಲದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಗಣಪತಿ ಮೂರ್ತಿಯನ್ನು ಭಕ್ತಿಭಾವದಿಂದ ಬಿಷ್ಟಮ್ಮನವರ ಕೆರೆಯಲ್ಲಿ ವಿಸರ್ಜಿಸಲಾಯಿತು.

ಗಣಪತಿ ಮೂರ್ತಿಯನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುವ ಸಂದರ್ಭದಲ್ಲಿ ವಾರ್ಡಿನ ನಿವಾಸಿಗಳು ಭಕ್ತಿಗೀತೆಗಳು ಹಾಗೂ ಗಣಪತಿ ಘೋಷಣೆಗಳೊಂದಿಗೆ ಸಂಭ್ರಮಿಸಿದರು. ವಿಶೇಷವಾಗಿ ಪುಟಾಣಿ ಮಕ್ಕಳು ಮೆರವಣಿಗೆಯಲ್ಲಿ ಕುಣಿದು ಕುಪ್ಪಳಿಸಿ ಸಂಭ್ರಮಿಸಿದ್ದು ಗಮನ ಸೆಳೆಯಿತು. ಮಹಿಳೆಯರು, ಮಕ್ಕಳು ಸೇರಿದಂತೆ ವಾರ್ಡಿನ ನಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ವಾರ್ಡಿನ ನಿವಾಸಿ ಬಿ.ಬಿ. ಶಿವರಾಜು, ಕಳೆದ ಒಂದು ವಾರದಿಂದ ಆಂಜನೇಯ ಸ್ವಾಮಿ ದೇಗುಲದಲ್ಲಿ ಗಣಪತಿಯನ್ನು ಪ್ರತಿಷ್ಠಾಪಿಸಿ, ವಾರ್ಡಿನ ನಿವಾಸಿಗಳ ಸಹಕಾರದೊಂದಿಗೆ ಭಕ್ತಿ ಮತ್ತು ಸಡಗರದಿಂದ ಪೂಜೆ ಸಲ್ಲಿಸಲಾಯಿತು. ಎಲ್ಲರ ಸಹಕಾರದಿಂದ ಗಣೇಶೋತ್ಸವ ಯಶಸ್ವಿಯಾಗಿ ನೆರವೇರಿದ್ದು, ಗಣಪತಿ ಎಲ್ಲರಿಗೂ ಸುಖ, ಶಾಂತಿ ಹಾಗೂ ಸಮೃದ್ಧಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸಿದರು.

ವಾರ್ಡಿನ ನಿವಾಸಿಗಳಾದ ಬಸವರಾಜು, ಶ್ರೀಧರ್, ಚೇತನ್, ಗಣೇಶ, ರೇಣುಕಮ್ಮ, ಶಕುಂತಲಾ, ಪುಟ್ಟಮ್ಮ, ಪುಷ್ಪ, ರೋಜಿ, ರೇಖಾ, ಸೌಮ್ಯ, ಸವಿತಾ, ಚಿನ್ನು, ಲಕ್ಷ್ಯ, ಧರ್ಮೇಂದ್ರ, ಭೀಷ್ಮ ಸ್ನೇಹಿತರ ತಂಡ ಸೇರಿದಂತೆ ಹಲವು ಮಂದಿ, ಮಹಿಳೆಯರು ಹಾಗೂ ಪುಟಾಣಿ ಮಕ್ಕಳು ಗಣಪತಿ ವಿಸರ್ಜನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಹಸಿರುಭೂಮಿ ಪ್ರತಿಷ್ಠಾನದಿಂದ ಪರಿಸರ ಶ್ರಮದಾನ

• ಪ್ರಜೋದಯ ವರದಿ

**ಹಾಸನ:** ಹಸಿರುಭೂಮಿ ಪ್ರತಿಷ್ಠಾನದ ವತಿಯಿಂದ ನಗರದ ಸಾರ್ವಜನಿಕ ಗ್ರಂಥಾಲಯದ ಹಿಂಭಾಗದ ಮಿಯಾವಾಕಿ ಪುಟ್ಟಡವಿ ಹಾಗೂ ಮಹಿಳಾ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಪರಿಸರ ಶ್ರಮದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಹಸಿರುಭೂಮಿ ಪ್ರತಿಷ್ಠಾನದ ಅಧ್ಯಕ್ಷ ಸಿ.ಬಿ.ವೆಂಕಟೇಗೌಡ ಅವರು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪರಿಸರ ಬದ್ಧತೆ ಮತ್ತು ಕಾಳಜಿ ಬೆಳೆಸುವ ಉದ್ದೇಶದಿಂದ ಪ್ರತಿಷ್ಠಾನವು ಕಾಲೇಜುಗಳ ಆವರಣದಲ್ಲಿ ಮಿಯಾವಾಕಿ ಪುಟ್ಟಡವಿ ಹಾಗೂ ಹಸಿರು ತೋಟಗಳನ್ನು ನಿರ್ಮಿಸುತ್ತಿದೆ. ಇವುಗಳನ್ನು ಕೇವಲ ನಿರ್ಮಿಸುವುದಷ್ಟೇ ಅಲ್ಲದೆ, ಸುಸ್ಥಿರವಾಗಿ ಪೋಷಿಸಿ ನಿರ್ವಹಿಸುವ ಜವಾಬ್ದಾರಿಯನ್ನು ಕಾಲೇಜು ಆಡಳಿತ ಮಂಡಳಿಗಳು ಬದ್ಧತೆಯಿಂದ ನಿಭಾಯಿಸಬೇಕು ಎಂದು ತಿಳಿಸಿದರು.

ಪ್ರತಿಷ್ಠಾನದ ಉಪಾಧ್ಯಕ್ಷ ಹಾಗೂ ಹಸಿರುಸಿರಿ ಸಂಚಾಲಕ ಪುರುಷೋತ್ತಮ್ ಮಾತನಾಡಿ, ಮರಗಿಡಗಳು ಮಾನವಕುಲಕ್ಕೆ ಜೀವರಕ್ಷಕಗಳು. ಹಸಿರಿನಿಂದ ಕೂಡಿದ ಆರೋಗ್ಯಕರ ವಾತಾವರಣವು ನೆಲದ ಮೇಲೆಯೇ ಸ್ವರ್ಗವನ್ನು ಸೃಷ್ಟಿಸುತ್ತದೆ. ಗಿಡ-ಮರಗಳ ಆವರಣವನ್ನು ನಮ್ಮ ಮನೆ ಹಾಗೂ ಮಕ್ಕಳಂತೆ ಸ್ವಚ್ಛವಾಗಿಟ್ಟುಕೊಳ್ಳಬೇಕು. ಮಕ್ಕಳಂತೆ ಪ್ರೀತಿಯಿಂದ ಬೆಳೆಸಿದರೆ, ಅವು ನಮಗಿಂತಲೂ ಹೆಚ್ಚಿನ ಪ್ರತಿಫಲವನ್ನು ಸಮಾಜಕ್ಕೆ ನೀಡುತ್ತವೆ. ನೆಟ್ಟ ಸಸಿಗಳನ್ನು ಹಾಳು ಮಾಡದೆ, ಅವುಗಳ ಸಂರಕ್ಷಣೆಗಾಗಿ ವಿದ್ಯಾರ್ಥಿಗಳ ಪಡೆಯನ್ನು ಕಟ್ಟಿ ಜಾಗೃತಿ ಮೂಡಿಸಬೇಕು, ಎಂದು ವಿನಂತಿಸಿದರು.



ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಬಾಲಕೃಷ್ಣ ಮಾತನಾಡಿ, ಕಾಲೇಜಿನ ಅಂಗಳವು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಟ್ಟಿಗೊಳಿಸುವ ತಾಣ. ಈ ಆವರಣದಲ್ಲಿರುವ ಮರಗಿಡಗಳನ್ನು ಜತನದಿಂದ ಕಾಪಾಡಲಾಗುವುದು. ಕಾಲೇಜಿನ ಇಕೋ ಕ್ಲಬ್ ಮೂಲಕ ವಿದ್ಯಾರ್ಥಿನಿಯರು ಹಾಗೂ ಉಪನ್ಯಾಸಕರಿಗೆ ಜವಾಬ್ದಾರಿ ಹಂಚಿಕೆ ಮಾಡಿ, ಅವರಲ್ಲಿ ಸಕ್ರಿಯ ಪರಿಸರ ಪ್ರಜ್ಞೆ ಬೆಳೆಸಲು ಶ್ರಮಿಸಲಾಗುವುದು, ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕಿ ರೂಪ, ಹಸಿರುಭೂಮಿ ಪ್ರತಿಷ್ಠಾನದ ಕಾರ್ಯದರ್ಶಿ ಗಿರಿಜಾಂಬಿಕ, ಪ್ರಮುಖರಾದ ಲೋಕೇಶ್, ವೇಣುಗೋಪಾಲ್, ಚೆನ್ನೇನಹಳ್ಳಿ ಸ್ವಾಮಿ, ಅಹಮದ್ ಹಗರೆ ಹಾಗೂ ಅಭಿ ಉಪಸ್ಥಿತರಿದ್ದು ಶ್ರಮದಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

## ಹೆಜ್ಜೇನು ದಾಳಿಗೆ ಮೂವರು ಅಸ್ವಸ್ಥ

ಹೆತ್ತೂರು: ಸಮೀಪದ ಬಾಚಿಹಳ್ಳಿಯಲ್ಲಿ ಹೆಜ್ಜೇನು ದಾಳಿ ಮಾಡಿ ಮೂವರು ಗಂಭೀರ ಗಾಯಗೊಂಡು ಆಸ್ಪತ್ರೆ ಸೇರಿರುವ ಘಟನೆ ಶನಿವಾರ ನಡೆದಿದೆ.

ಗ್ರಾಮದ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ನವೀನ್‌ಕುಮಾರ್ (50) ಎಂಬುವವರ ಮೇಲೆ ದಿಢೀರ್ ದಾಳಿ ನಡೆಸಿದ ಹೆಜ್ಜೇನಿನ ಹಿಂಡು ಗಾಯಗೊಳಿಸಿದೆ.

ಹೆಜ್ಜೇನು ದಾಳಿಯಿಂದ ನಿತ್ರಾಣಗೊಂಡವರನ್ನು ಅವರ ಪತ್ನಿ ಹಾಗೂ ಗ್ರಾಮಸ್ಥರು ತಕ್ಷಣ ಹೆತ್ತೂರು ಸರ್ಕಾರಿ ಪ್ರಾಥಮಿಕ ಆಸ್ಪತ್ರೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಲಾಗಿದೆ.

## ಸೆ.27 ರಂದು ಕೃಷ್ಣ ಜಯಂತಿ

ಹಾಸನ: ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸೆ.27 ರಂದು ಬೆಳಿಗ್ಗೆ 11 ಗಂಟೆಗೆ ಕೃಷ್ಣ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ ಶಿವಲಿಂಗೇಗೌಡ ಅವರು ಉದ್ಘಾಟನೆ ಮಾಡಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ.

# ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ಗೆ 6.21 ಲಕ್ಷ ರೂ. ನಿವ್ವಳ ಲಾಭ

## ಬ್ಯಾಂಕಿನ ಆರ್ಥಿಕ ಸ್ಥಿತಿ ಸುಧಾರಿಸಲು ಹಲವು ಕ್ರಮ: ಅಧ್ಯಕ್ಷ ರವಿ

• ಪ್ರಜೋದಯ ವರದಿ

**ಬೇಲೂರು:** ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕುಗಳ ತೀವ್ರ ಸ್ಪರ್ಧೆಯ ನಡುವೆಯೂ ಸದಸ್ಯರು ಹಾಗೂ ಗ್ರಾಹಕರ ವಿಶ್ವಾಸವನ್ನು ಉಳಿಸಿಕೊಂಡು ಬೇಲೂರು ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಭಿವೃದ್ಧಿಯತ್ತ ಮುನ್ನಡೆಯುತ್ತಿದೆ ಎಂದು ಬ್ಯಾಂಕ್ ಅಧ್ಯಕ್ಷ ಎಸ್. ರವಿ ಹೇಳಿದರು.

ಪಟ್ಟಣದ ಬೇಲೂರು ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಬ್ಯಾಂಕಿನ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ತಾವು ಅಧ್ಯಕ್ಷರಾಗುವ ಮುನ್ನ ಬ್ಯಾಂಕ್ ರೂ.12,14,229 ನಷ್ಟದಲ್ಲಿತ್ತು. ಬಳಿಕ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯ ಸಹಕಾರದೊಂದಿಗೆ ಬ್ಯಾಂಕನ್ನು ಲಾಭದಾಯಕವಾಗಿ ಮುನ್ನಡೆಸುವಲ್ಲಿ ಯಶಸ್ವಿಯಾಗಿದ್ದು, ಪ್ರಸಕ್ತ ಸಾಲಿನಲ್ಲಿ ರೂ.6,21,394.85 ನಿವ್ವಳ ಲಾಭ ದಾಖಲಿಸಿದೆ ಎಂದು ತಿಳಿಸಿದರು.

ಬ್ಯಾಂಕಿನ ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ 202526ನೇ ಸಾಲಿನ ಅಂತ್ಯಕ್ಕೆ ಠೇವಣಿಗಳ ಮೊತ್ತ ರೂ.16,89,41,020.89ರಷ್ಟಿದೆ. ಸಾಲ ವಸೂಲಾತಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಬ್ಯಾಂಕಿನ ಹಣಕಾಸಿನ ಶಿಸ್ತು ಹಾಗೂ ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.



ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕುಗಳು ನೀಡುತ್ತಿರುವ ಸ್ಪರ್ಧಾತ್ಮಕ ಸೇವೆಗಳ ನಡುವೆ ಸಹಕಾರಿ ಬ್ಯಾಂಕ್ ಕೂಡ ಗ್ರಾಹಕರಿಗೆ ಉತ್ತಮ ಸೇವೆ, ತ್ವರಿತ ಸ್ಪಂದನೆ ಹಾಗೂ ಪಾರದರ್ಶಕ ವ್ಯವಹಾರ ಒದಗಿಸುವ ಮೂಲಕ ತನ್ನ ಸ್ಥಾನವನ್ನು ಮತ್ತಷ್ಟು ಬಲಪಡಿಸಿಕೊಳ್ಳಲಿದೆ. ಬ್ಯಾಂಕಿನ ಮುಂದಿನ ಬೆಳವಣಿಗೆಗೆ ಠೇವಣಿದಾರರು, ಸಾಲಗಾರರು ಹಾಗೂ ಸದಸ್ಯರ ಸಹಕಾರ ಅತ್ಯಗತ್ಯ ಎಂದರು.

**ಸುಸ್ತಿ ಸಾಲ ವಸೂಲಾತಿಗೆ ಒತ್ತು ನೀಡುವಂತೆ ಒತ್ತಾಯ:** ಸಭೆಯಲ್ಲಿ ಗ್ರಾಹಕರಾದ ಅಣ್ಣೇಗೌಡ, ಪರಮೇಶ್ ಹಾಗೂ ಡಿ.ಕೆ. ವೆಂಕಟೇಶ್ ಅವರು ಬ್ಯಾಂಕಿನ ಠೇವಣಿ, ಸಾಲ ವಸೂಲಿ ಹಾಗೂ ಸುಸ್ತಿ ಸಾಲದ ಕುರಿತು ಪ್ರಶ್ನೆಗಳನ್ನು ಮುಂದಿಟ್ಟರು.

ಬ್ಯಾಂಕಿನ ಲೆಕ್ಕಪತ್ರಗಳಲ್ಲಿ ಸುಸ್ತಿ ಸಾಲಗಾರರಿಂದ ಬರಬೇಕಾದ ಬಾಕಿ ಮೊತ್ತ ರೂ.1,36,84,634 ಎಂದು ನಮೂದಿಸಿರುವ ಹಿನ್ನೆಲೆಯಲ್ಲಿ, ಈ ಪೈಕಿ ಎಷ್ಟು ಮೊತ್ತ ಅನುತ್ಪಾದಕ ಆಸ್ತಿ (ಎನ್‌ಪಿಎ)ಗೆ ಸೇರಿದೆ, ಒಟ್ಟು ಸಾಲಕ್ಕೆ ಹೋಲಿಸಿದರೆ ಸುಸ್ತಿ ಸಾಲದ ಪ್ರಮಾಣ ಎಷ್ಟಿದೆ ಹಾಗೂ ಸುಸ್ತಿ ಸಾಲದ ವಸೂಲಾತಿಗೆ ಬ್ಯಾಂಕ್ ಕೈಗೊಂಡಿರುವ ನಿಖರ ಕ್ರಮಗಳೇನು ಎಂದು ಪ್ರಶ್ನಿಸಲಾಯಿತು.

ಅದೇ ರೀತಿ, ಬ್ಯಾಂಕಿನ ಠೇವಣಿ ಸುಮಾರು ರೂ.16.89 ಕೋಟಿಯಷ್ಟಿರುವ ಸಂದರ್ಭದಲ್ಲಿ ಸುಸ್ತಿ ಸಾಲದ ಪ್ರಮಾಣ ಹೆಚ್ಚಾಗದಂತೆ ಯಾವ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಹಾಗೂ ಠೇವಣಿದಾರರ ಹಿತಾಸಕ್ತಿ ಕಾಪಾಡಲು ಆಡಳಿತ ಮಂಡಳಿ ಕೈಗೊಂಡಿರುವ ಕ್ರಮಗಳೇನು ಎಂಬುದರ ಕುರಿತು ಸ್ಪಷ್ಟನೆ ಕೋರಲಾಯಿತು.

ಸುಸ್ತಿ ಸಾಲದ ವಸೂಲಾತಿಗೆ ಇನ್ನಷ್ಟು ವೇಗ ನೀಡುವ ಮೂಲಕ ಬ್ಯಾಂಕಿನ ಹಣಕಾಸಿನ ಸ್ಥಿರತೆಯನ್ನು ಬಲಪಡಿಸಬೇಕು ಎಂದು ಗ್ರಾಹಕರು ಒತ್ತಾಯಿಸಿದರು.

ನಂತರ ಮಾತನಾಡಿದ ನಿರ್ದೇಶಕ ಬಿ.ಬಿ. ಶಿವರಾಜು, ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕುಗಳ ತೀವ್ರ ಸ್ಪರ್ಧೆಯ ನಡುವೆಯೂ ಸಹಕಾರಿ ಬ್ಯಾಂಕ್ ಧೈರ್ಯದಿಂದ ತನ್ನ ಸೇವೆಯನ್ನು ಮುಂದುವರಿಸಿಕೊಂಡು ಬರುತ್ತಿದೆ. ಬ್ಯಾಂಕಿನ ದೊಡ್ಡ ಶಕ್ತಿ ಗ್ರಾಹಕರು ಹಾಗೂ ಸದಸ್ಯರು ನಮ್ಮ ಮೇಲಿಟ್ಟಿರುವ ವಿಶ್ವಾಸ. ಆ ವಿಶ್ವಾಸವನ್ನು ಉಳಿಸಿಕೊಳ್ಳುವುದು ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯ ಜವಾಬ್ದಾರಿ. ಗ್ರಾಹಕರಿಗೆ ಉತ್ತಮ, ಪಾರದರ್ಶಕ ಹಾಗೂ ತ್ವರಿತ ಸೇವೆ ನೀಡುವ ಮೂಲಕ ರಾಷ್ಟ್ರೀಕೃತ ಬ್ಯಾಂಕುಗಳೊಂದಿಗೆ ಸ್ಪರ್ಧಿಸುವ ಸಾಮರ್ಥ್ಯವನ್ನು ನಮ್ಮ ಬ್ಯಾಂಕ್ ಹೊಂದಿದೆ ಎಂದರು.

ಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷ ಬಿ.ವಿ. ಸತೀಶ್, ನಿರ್ದೇಶಕರಾದ ಬಿ.ಎಂ. ಚಂದ್ರಶೇಖರ್, ಬಿ.ಎಂ.ಪ್ರಸನ್ನ, ಕೆ.ವಿ. ಬಲರಾಮೇಗೌಡ, ವಿಜಯಕುಮಾರ್, ಬಿ.ಬಿ. ಶಿವರಾಜು, ಬಿ.ಎಸ್. ಶೀಲಾ ಪ್ರಕಾಶ, ಬಿ.ಎಲ್. ಲಕ್ಷ್ಮಣ್, ಕೆ.ಟಿ.ರಶ್ಮಿತಾ ಧರ್ಮಪಾಲ, ಬ್ಯಾಂಕಿನ ವ್ಯವಸ್ಥಾಪಕ ಶಿವಶಂಕರ್ ಸೇರಿದಂತೆ ಸಿಬ್ಬಂದಿ ಹಾಗೂ ಗ್ರಾಹಕರು ಉಪಸ್ಥಿತರಿದ್ದರು.

## ಕೊಳದ ಆಂಜನೇಯಸ್ವಾಮಿ ದೇವಸ್ಥಾನದ ಆವರಣ ಲೋಕಾರ್ಪಣೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕೊಳದ ಅಂಜನೇಯ ಸ್ವಾಮಿಯ ಭಕ್ತಾಧಿಗಳ ಆಶಯದಂತೆ ದೇವಸ್ಥಾನ ಮತ್ತು ದೇವಸ್ಥಾನದ ಆವರಣವನ್ನು 20 ಲಕ್ಷ ರೂ. ವೆಚ್ಚದಲ್ಲಿ ನವೀಕರಣಗೊಳಿಸಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಪಟ್ಟಣದ ವಾರ್ಡ್ ನಂ.22 ರಲ್ಲಿರುವ ಪುರಾತನ ಕೊಳದ ಅಂಜನೇಯ ಸ್ವಾಮಿ ದೇವಸ್ಥಾನ ಮತ್ತು ಕಲ್ಯಾಣಿಯ ನವೀಕರಣ ಹಾಗೂ ಆವರಣದಲ್ಲಿ ಅಳವಡಿಸಲಾಗಿರುವ ಹೈಮಾಸ್ ಲ್ಯಾಂಪ್ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಕೊಳದ ಅಂಜನೇಯ ಸ್ವಾಮಿ ಸಮಿತಿಯವರು ಪ್ರತಿವರ್ಷ ಸ್ವಾಮಿಯವರ ಪೂಜಾ ಕೈಕಂರ್ಯ ನಡೆಸಿ ನೂರಾರು ಭಕ್ತಾಧಿಗಳಿಗೆ ಪ್ರಸಾದ ವಿನಿಯೋಗ ನಡೆಸುತ್ತಾ ಬಂದಿದ್ದು, ಇದರೊಂದಿಗೆ ಗಂಗಾರತಿ ಕಾರ್ಯಕ್ರಮ ನಡೆಸಿದ ವೇಳೆ ಭಕ್ತಾಧಿಗಳಿಗೆ ನೀಡಿದ ಅಶ್ವಾಸನೆಯಂತೆ ದೇವಸ್ಥಾನ ಮತ್ತು ಆವರಣವನ್ನು ನವೀಕರಣಗೊಳಿಸಲಾಗಿದೆ. ಜನ ಕೂರಲು ಕೊಳದ ಸುತ್ತ ಕಾಂಕ್ರೀಟಿಕರಣ, ದೇವಸ್ಥಾನದ ಸುತ್ತ ಕ್ರಾಂಕೀಟಿಕರಣ ಸೇರಿ ಜನ ಸಲ್ಲಿಸಿದ್ದ ಕೋರಿಕೆಯನ್ನು ಪೂರ್ಣಗೊಳಿಸಲಾಗಿದೆ ಎಂದ ಅವರು ಆಂಜನೇಯ ಸ್ವಾಮಿಯ ಕೃಪೆಯಿಂದ ಹಿಂಗಾರಿನಲ್ಲಿ ಮಳೆ ಬಿದ್ದು ತಾಲ್ಲೂಕು ಸುಭಿಕ್ಷೆಗೊಂಡ ರೈತರ ಮೊಗದಲ್ಲಿ ಸಂತಸ ಮೂಡುವಂತಾಗಲಿ ಎಂದರು.



ಈ ವೇಳೆ ಹಾಜರಿದ್ದ 40ಅಡಿ ಆಂಜನೇಯ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕರಾದ ವಿಶ್ವನಾಥ್ ದೀಕ್ಷಿತ್ ಮಾತನಾಡಿ, ಕೊಳದ ಆಂಜನೇಯ ಸ್ವಾಮಿ ದೇವಾಲಯ ಪಾಳು ಬಿದ್ದ ಸ್ಥಿತಿಯಲ್ಲಿತ್ತು, ಸ್ಥಳೀಯ ಯುವಕರು, ನಿವಾಸಿಗಳ ಅಭಿಲಾಷೆಯಂತೆ ಶಾಸಕ ಸಿ.ಎನ್.ಬಾಲಕೃಷ್ಣ ಅಭಿವೃದ್ಧಿಪಡಿಸಿದ್ದಾರೆ. ದೇವಸ್ಥಾನಕ್ಕೆ ಅತ್ಯಂತ ಸುಂದರವಾದ ರೂಪ ಸಿಕ್ಕಿದೆ. ಕೊಳದ ಸುತ್ತಲ್ಲೂ ಮೆಟ್ಟಿಲುಗಳ ನಿರ್ಮಾನ, ಸ್ವಚ್ಚತೆ, ಆವರಣಕ್ಕೆ ಕಾಂಕ್ರೀಟಿಕರಣ, ಹೈಮಾಸ್ ಲ್ಯಾಂಪ್ ಸೇರಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ ಭಕ್ತಾಧಿಗಳಿಗೆ ಅನುಕೂಲ ಮಾಡಿ ಕೊಟ್ಟಿದ್ದಾರೆ ಅವರಿಗೆ ಸ್ಥಳೀಕರ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಟಿಎಪಿಸಿಎಂಎಸ್ ನಿರ್ದೇಶಕ ಅನಿಲ್‌ಕುಮಾರ್, ಪುರಸಭಾ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಗಣೇಶ್, ಮಾಜಿ ಸದಸ್ಯ ರಘುಶಾಮಿ, ಚಂದ್ರಮೌಳೇಶ್ವರ ಸ್ವಾಮಿ ದೇವಾಲಯದ ಅರ್ಚಕ ಮಧುಸ್ವಾಮಿ, ಗುತ್ತಿಗೆದಾರ ಬಿ.ಎನ್.ಪ್ರಕಾಶ್, ಕೊಳದ ಅಂಜನೇಯ ಸ್ವಾಮಿ ಸಮಿತಿ ಅಧ್ಯಕ್ಷರು, ಪದಾಧಿಕಾರಿಗಳು ಹಾಜರಿದ್ದರು.

## ಜಿಲ್ಲೆಗಿಂದು ಮುಖ್ಯಮಂತ್ರಿ

ಹಾಸನ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೆ.20 ರಂದು ಸಕಲೇಶಪುರ ತಾಲ್ಲೂಕಿಗೆ ಆಗಮಿಸಲಿದ್ದು, ಬೆಳಿಗ್ಗೆ 11.45 ಗಂಟೆಗೆ ಸಕಲೇಶಪುರ ತಾಲ್ಲೂಕಿನ ಸುಭಾಷ್ ಚಂದ್ರ ಬೋಸ್ ಸ್ಟೇಡಿಯಂಗೆ ಹೆಲಿಕಾಪ್ಟರ್ ಮೂಲಕ ಆಗಮಿಸಿ ಎ.ಪಿ.ಎಂ.ಪಿ ಯಾರ್ಡ್ ಆವರಣದಲ್ಲಿ ಡಾ.ಕೆ ಕಸ್ತೂರಿ ರಂಗನ್ ವರದಿ ಸಂಬಂಧಪಟ್ಟಂತೆ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ನಂತರ ಮಧ್ಯಾಹ್ನ 3 ಗಂಟೆಗೆ ಸುಭಾಷ್ ಚಂದ್ರ ಬೋಸ್ ಸ್ಟೇಡಿಯಂನಿಂದ ಹೆಲಿಕಾಪ್ಟರ್ ಮೂಲಕ ಎತ್ತಿನಹೊಳೆ ಯೋಜನೆ ಕಾಮಗಾರಿ ವೈಮಾನಿಕ ಸಮೀಕ್ಷೆ ನಡೆಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರೂ ಮುಖ್ಯಮಂತ್ರಿಯವರೊಂದಿಗೆ ಹೆಲಿಕಾಪ್ಟರ್ ಮೂಲಕ ಎತ್ತಿನಹೊಳೆ ಯೋಜನೆ ಕಾಮಗಾರಿ ವೈಮಾನಿಕ ಸಮೀಕ್ಷೆ ನಡೆಸಲಿದ್ದು, ಸಂಜೆ 5 ಗಂಟೆಗೆ ಅರಸೀಕೆರೆ ಮಾಲೇಕಲ್ಲು ತಿರುಪತಿಯಲ್ಲಿ ರಾಜಗೋಪುರ ಉದ್ಘಾಟನೆಗೆ ಸಂಬಂಧಿಸಿದಂತೆ ಸಭೆ ಮಾಡಲಿರುವರು. ನಂತರ ಸಂಜೆ 6 ಗಂಟೆಗೆ ಅರಸೀಕೆರೆ ಮಾಡಾಳುನಲ್ಲಿನ ಶ್ರಿ ಸ್ವರ್ಣ ಗೌರಮ್ಮನವರ ದರ್ಶನ ಮಾಡಲಿದ್ದಾರೆ.

## ಹಾಸನ ಬಸವಕೇಂದ್ರ-ಬಸವ ಸಮಿತಿಯಿಂದ ಶ್ರಾವಣ ಮಾಸದ ಬಸವ ಚಿಂತನ ಕಾರ್ಯಕ್ರಮ

# ಮಾನವನ ಜೀವನ ಸಮಾಜದ ಒಳಿತಿಗೆ ಬಳಕೆಯಾಗಬೇಕು

• ಪ್ರಜೋದಯ ವರದಿ

**ಹಾಸನ:** ಬಸವಣ್ಣನವರು ಆಡಂಬರದ ಪೂಜೆಯ ಬದಲು ಸತ್ಯ, ಪ್ರಾಮಾಣಿಕತೆ ಮತ್ತು ಸತ್ಕಾಯಕಕ್ಕೆ ಅವರು ಮಹತ್ವ ನೀಡಿದರು. ಮನುಷ್ಯನು ಕಳ್ಳತನ, ಹಿಂಸೆ, ಸುಳ್ಳು, ದ್ವೇಷ, ಅಹಂಕಾರ ಮತ್ತು ಪರನಿಂದೆಗಳಿಂದ ದೂರವಿರಬೇಕು ಎಂದು ಬೋಧಿಸಿದ್ದಾರೆ ಎಂದು ಸೀಗೆನಾಡಿನ ಮಳೆ ಮಲ್ಲೇಶ್ವರ ಬೆಟ್ಟದ ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮೀಜಿಯವರು ಅಭಿಪ್ರಾಯಪಟ್ಟರು.

ನಗರದ ಬಸವಕೇಂದ್ರ ಮತ್ತು ಬಸವ ಸಮಿತಿ ವತಿಯಿಂದ ನಗರದ ಯುನೈಟೆಡ್ ಅಕಾಡೆಮಿಯ ಜ್ಞಾನ ಮಂಟಪದಲ್ಲಿ ಹಮ್ಮಿಕೊಂಡಿದ್ದ ಶ್ರಾವಣ ಮಾಸದ ಚಿಂತನ ಕಾರ್ಯಕ್ರಮ ಮತ್ತು ಸನ್ಮಾನ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ಬಸವಣ್ಣನವರು ಹೊರಗಿನ ಆಡಂಬರಕ್ಕಿಂತ ಒಳಗಿನ ಶುದ್ಧತೆಗೆ ಹೆಚ್ಚಿನ ಮಹತ್ವ ನೀಡಿದರು. ಮನುಷ್ಯನ ದೇಹ ಮತ್ತು ಮನಸ್ಸು ಪವಿತ್ರವಾಗಿದ್ದರೆ ಅದೇ ನಿಜವಾದ ದೇವಾಲಯ ಎಂಬುದು ಇದರ ಅರ್ಥ. ಇಂತಹ



ಅಕ್ಕಮಹಾದೇವಿ, ನೀಲಾಂಬಿಕೆ, ಗಂಗಾಂಬಿಕೆ ಮುಂತಾದ ಶರಣೆಯರ ಉಪಸ್ಥಿತಿ ಇದಕ್ಕೆ ಸಾಕ್ಷಿಯಾಗಿದೆ. ತನು ಸೇವೆಗೆ, ಮನ ಶುದ್ಧ ಭಾವನೆಗೆ, ಧನ ಸಮಾಜದ ಒಳಿತಿಗೆ ಬಳಕೆಯಾಗ ಬೇಕು. ಸ್ವಾರ್ಥಕ್ಕಾಗಿ ಬದುಕದೆ, ಕಾಯಕದ ಮೂಲಕ ಸಂಪಾದಿಸಿ, ದಾಸೋಹದ ಮೂಲಕ ಸಮಾಜಕ್ಕೆ ಅರ್ಪಿಸುವುದೇ ಸಾರ್ಥಕ ಜೀವನ ಎಂದುಕೊಂಡಿದ್ದರು.

ನಡತೆಯುಳ್ಳ ಜನರಿಂದ ಕೂಡಿದ ನೈತಿಕ ಮತ್ತು ಶಾಂತಿಯುತ ಸಮಾಜವನ್ನು ಅವರು ಬಯಸಿದರು ಎಂದು ಹೇಳಿದರು.

ಬಸವಣ್ಣನವರ ದೃಷ್ಟಿಯಲ್ಲಿ ದಾಸೋಹವು ದಾನಕ್ಕಿಂತ ವಿಶಾಲವಾದುದು; ಅದು ಸೇವೆ, ಸಮಾನತೆ, ಹಂಚಿಕೆ ಮತ್ತು ಮಾನವೀಯತೆಯ ಜೀವನ ತತ್ವವಾಗಿದೆ. ಬಸವಣ್ಣನವರು ದೇವಾ ಲಯ ಕಟ್ಟಲು ಸಾಧ್ಯವಿಲ್ಲದ ಸಾಮಾನ್ಯ ಮನುಷ್ಯನಿಗೂ ತನ್ನ ದೇಹವೇ ದೇವಾಲಯ ಎಂದು ಹೇಳುತ್ತಾರೆ. ದೇವರನ್ನು ಕಾಣಲು ಹಣ, ಸಂಪತ್ತು ಅಥವಾ ದೊಡ್ಡ ದೇವಾಲಯದ ಅವಶ್ಯಕತೆ ಇಲ್ಲ; ಶುದ್ಧ ಮನಸ್ಸು ಮತ್ತು ಸತ್ಕಾರ್ಯವೇ ಮುಖ್ಯ ಎಂಬ ಸಂದೇಶ ಸಾರಿದರು ಎಂದರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ರಾಜ್ಯಾಧ್ಯಕ್ಷ ಕೊಟ್ರೇಶ್ ಎಸ್. ಉಪ್ಪಾರ್ ಮಾತನಾಡಿ, ಬಸವಣ್ಣನವರು ಕೇವಲ ಭಕ್ತಿಯನ್ನಷ್ಟೇ ಬೋಧಿಸಿದವರಲ್ಲ; ಸಮಾನತೆ, ಕಾಯಕ, ದಾಸೋಹ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ಆಧಾರದ ಮೇಲೆ ಹೊಸ ಸಮಾಜವನ್ನು ನಿರ್ಮಿಸಲು ಪ್ರಯತ್ನಿಸಿದ ಮಹಾನ್ ಸಮಾಜ ಸುಧಾರಕರು. ಅವರ ವಚನಗಳಲ್ಲಿ ಅವರು ಬಯಸಿದ ಸಮಾಜದ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಬಸವಣ್ಣನವರು ಕಟ್ಟಬಯಸಿದ ಸಮಾಜವು ಜಾತಿ-ಭೇದವಿಲ್ಲದ, ಮೇಲು-ಕೀಳುಗಳಿಲ್ಲದ, ಸ್ತ್ರೀ-ಪುರುಷ ಸಮಾನತೆಯ, ಕಾಯಕಕ್ಕೆ ಗೌರವ ನೀಡುವ, ದಾಸೋಹವನ್ನು ಪಾಲಿಸುವ, ಸತ್ಯ ಮತ್ತು ಮಾನವೀಯತೆಯಿಂದ ಕೂಡಿದ ಸಮಾಜವಾಗಿತ್ತು ಎಂದರು.

ಬಸವ ಕೇಂದ್ರದ ಅಧ್ಯಕ್ಷ ಯು.ಎಸ್. ಬಸವರಾಜ್ ಮಾತನಾಡಿ, ತಾನು ದುಡಿದು ಗಳಿಸಿದುದರಲ್ಲಿ ಅಗತ್ಯಕ್ಕಿಂತ ಹೆಚ್ಚಿನದನ್ನು ಸಮಾಜದ ಒಳಿತಿಗಾಗಿ ಹಂಚಿಕೊಳ್ಳಬೇಕು. ಸ್ವಾರ್ಥವಿಲ್ಲದೆ ಇತರರ ಹಿತಕ್ಕಾಗಿ ಬದುಕುವುದು ಬಸವಣ್ಣನವರ ದಾಸೋಹದ ತತ್ವ. ಬಸವಣ್ಣನವರ ಸಮಾಜದಲ್ಲಿ ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ದುಡಿದು ಬದುಕಬೇಕು. ಯಾವುದೇ ಕೆಲಸ ಮೇಲು-ಕೀಳು ಎಂಬ ಭಾವನೆ ಇರಬಾರದು. ಕಾಯಕವೇ ಕೈಲಾಸ ಈ ಮಾತಿನ ಮೂಲಕ ಬಸವಣ್ಣನವರು ದುಡಿಮೆಯೇ ದೇವರ ಆರಾಧನೆ ಎಂಬ ಸಂದೇಶ ನೀಡಿದರು. ಕೆಲಸ ಮಾಡುವವನನ್ನು ಕೀಳಾಗಿ ಕಾಣದೆ, ಅವನ ಕಾಯಕಕ್ಕೆ ಗೌರವ ನೀಡಬೇಕು ಎಂಬುದು ಅವರ ಆಶಯವಾಗಿತ್ತು ಎಂದರು.

ಯುನೈಟೆಡ್ ಅಕಾಡೆಮಿಯ ಆರ್.ಇ.ಸೋಮಶೇಖರ್, ಗಾಯಕರಾದ ಶಿವನಂಜೇಗೌಡ, ರತ್ನಸೋಮ ಶೇಖರ್, ದೇವಿರಮ್ಮ, ಸವರ್ಣ ರಾಮಚಂದ್ರ, ಶಿಕ್ಷಣ ಇಲಾಖೆಯ ಪಾಲಾಕ್ಷಮ್ಮ ಮೋಹನ್‌ರಾಜ್, ದೇವಿರಮ್ಮ ಹರೀಶ್, ಬಸವರಾಜ್, ವಿಜಯ ಶಿವರುದ್ರಪ್ಪ, ಪುಟ್ಟಪ್ಪ, ಚಂದ್ರಮೌಳಿ, ಕೆ.ಎಂ.ಪ್ರಕಾಶ್, ಮಲ್ನಾಡ್ ಕಾಲೇಜಿನ ಅಧೀಕ್ಷಕ ಕಟ್ಟಾಯ ಶಿವಕುಮಾರ್, ನಿವೃತ್ತ ಪ್ರಾಂಶುಪಾಲೆ ಜಯಶೀಲ ಇನ್ನಿತರರಿದ್ದರು.

## ಸ್ನಾತಕ -ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹಾಸನ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು- 06ರ ವತಿಯಿಂದ ಹಾಸನ ಪ್ರಾದೇಶಿಕ ಕೇಂದ್ರದಲ್ಲಿ 2026-27ನೇ ಸಾಲಿನ (ಜುಲೈ ಆವೃತ್ತಿ) ಶೈಕ್ಷಣಿಕ ವರ್ಷದಲ್ಲಿ ಪ್ರಥಮ ವರ್ಷದ ಸ್ನಾತಕ ಹಾಗೂ ಸ್ನಾತಕೋತ್ತರ ಓ.ಡಿ.ಎಲ್ ಕೋರ್ಸ್‌ಗಳಾದ ಬಿ.ಎ/ಬಿ.ಕಾಂ, ಬಿ.ಎಸ್ಸಿ, ಬಿ.ಸಿ.ಎ, ಬಿ.ಬಿ.ಎ, ಬಿ.ಎಲ್.ಐ.ಸಿ, ಬಿ.ಎಸ್.ಡಬ್ಲ್ಯೂ, ಎಂ.ಎ, ಎಂ.ಕಾಂ, ಎಂ.ಎಸ್.ಡಬ್ಲ್ಯೂ, ಎಂ.ಸಿ.ಎ, ಎಂ.ಎಲ್.ಐ.ಸಿ, ಎಂ.ಎಸ್ಸಿ, ಪಿ.ಜಿ. ಡಿಪ್ಲೋಮಾ, ಯು.ಜಿ. ಡಿಪ್ಲೋಮಾ, ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪ್ರವೇಶಾತಿಯು ಪ್ರಾರಂಭವಾಗಿರುತ್ತದೆ, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳವಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಾಸನ ಪ್ರಾದೇಶಿಕ ಕೇಂದ್ರದ ಪ್ರಾದೇಶಿಕ ನಿರ್ದೇಶಕರು ತಿಳಿಸಿದ್ದಾರೆ.

ಬಿ.ಪಿ.ಎಲ್. ಪಡಿತರ ಚೀಟಿ ಹೊಂದಿರುವ ಮಹಿಳಾ ವಿದ್ಯಾರ್ಥಿನಿಯರಿಗೆ ಬೋಧನಾ ಶುಲ್ಕದಲ್ಲಿ ಶೇ10 ರಿಯಾಯಿತಿ ನೀಡಲಾಗುತ್ತದೆ, ಡಿಫೆನ್ಸ್ ಹಾಗೂ ಎಕ್ಸ್ ಸರ್ವೀಸ್‌ಮನ್ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ಶೇ10 ರಿಯಾಯಿತಿ ನೀಡಲಾಗುತ್ತದೆ, ಬ್ಯಾಡ್ಜ್ ಹೊಂದಿರುವ ಆಟೋ, ಕ್ಯಾಬ್ ಚಾಲಕರು ಮತ್ತು ಅವರ ಮಕ್ಕಳಿಗೆ ಹಾಗೂ ಸಾರಿಗೆ ಇಲಾಖೆ ನೌಕರರಿಗೆ ಶೇ10 ರಿಯಾಯಿತಿ ನೀಡಲಾಗುತ್ತದೆ. ದೃಷ್ಟಿ ಹೀನ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಾತಿ ನೀಡಲಾಗುವುದು, ಐ.ಟಿ.ಐ ಹಾಗು ಡಿಪ್ಲೋಮಾ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರಥಮ ಬಿ.ಎ., ಬಿ.ಕಾಂ. ಪ್ರವೇಶಾತಿಗೆ ಅವಕಾಶ ವಿರುತ್ತದೆ.

ಮಾಹಿತಿಗಾಗಿ ಸಿದ್ದಾರ್ಥ್ ಬಿ.ಎನ್., ಪ್ರಾದೇಶಿಕ ನಿರ್ದೇಶಕರು, ಕ.ರಾ.ಮು.ವಿ ಪ್ರಾದೇಶಿಕ ಕೇಂದ್ರ, ಅರಸೀಕೆರೆ ರಸ್ತೆ, ಕೇಂದ್ರಿಯ ವಿದ್ಯಾಲಯ ಹಾಗೂ ಬಿ.ಟಿ. ಕೊಪ್ಪಲು ಹತ್ತಿರ, ದೊಡ್ಡಪುರ ಅಂಚೆ, ಎಸ್.ಎಂ. ಕೃಷ್ಣನಗರ, ಹಾಸನ ಹಾಗೂ ದೂರವಾಣಿ ಸಂಖ್ಯೆ: 08172-262726, 8618929376, 9035378321, 9739402474, 7760546404, 8861655037, 9900787174, 7022887201 ಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

# ಭಾರತ ಸೇರಿ ಹಲವು ರಾಷ್ಟ್ರಗಳಿಗೆ ಶೇ.100 ಸುಂಕ

## ಮಸೂದೆಗೆ ಡೊನಾಲ್ಡ್ ಟ್ರಂಪ್ ಸಹಿ | ತೈಲ ಉದ್ಯಮದ ಮೇಲೆ ಹೊಡೆತ ಸಾಧ್ಯತೆ

• ಪ್ರಜೋದಯ ವರದಿ



**ವಾಷಿಂಗ್ಟನ್:** ಭಾರತ, ಚೀನಾ ಸೇರಿ ರಷ್ಯಾದಿಂದ ತೈಲ ಖರೀದಿ ಮಾಡುವ ದೇಶಗಳ ಸರಕುಗಳ ಮೇಲೆ ಶೇ.100 ರಷ್ಟು ಸುಂಕ ವಿಧಿಸಲು ಅನುವು ಮಾಡಿಕೊಡುವ ರಷ್ಯಾ ನಿರ್ಬಂಧ ಮಸೂದೆಗೆ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಹಿ ಹಾಕಿದ್ದಾರೆ.

ಅಮೇರಿಕಾ ಸಂಸತ್ತಿನ ಉಭಯ ಸದನಗಳಲ್ಲೂ (ಸೆನೆಟ್ ಮತ್ತು ಪ್ರತಿನಿಧಿಗಳ ಸಭೆ) ಮಸೂದೆ ಅಂಗೀಕಾರಗೊಂಡಿತ್ತು. ಇದೀಗ ಟ್ರಂಪ್ ಸಹಿ ಹಾಕಿರುವುದರಿಂದ ಕಾನೂನಾಗಿ ಜಾರಿಗೆ ಬಂದಿದೆ. ಈ ಮೂಲಕ ರಷ್ಯಾದಿಂದ ತೈಲ ಮತ್ತು ಅನಿಲ ಖರೀದಿಸುವ ದೇಶಗಳ ಮೇಲೆ ಭಾರೀ ಸುಂಕ ವಿಧಿಸಲು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಅನಿಯಂತ್ರಿತ ಅಧಿಕಾರ ಸಿಕ್ಕಿದೆ. ಲಿಂಡ್ಸೆ ಒ ಗ್ರಹಾಂ ಸ್ಯಾಂಕ್ಷನಿಂಗ್ ರಷ್ಯಾ ಅಂಡ್ ಇರಾನ್ ಆ್ಯಕ್ಟ್ ಆಫ್ 2026 ಎಂದು ಈ ಮಸೂದೆಯನ್ನು ಕರೆಯಲಾಗಿದೆ. ರಷ್ಯಾ ನಿರ್ಬಂಧ ಮಸೂದೆಯನ್ನು ಬಲವಾಗಿ ಪ್ರತಿಪಾದಿಸಿದ್ದ ದಿವಂಗತ ಸೆನೆಟರ್ ಲಿಂಡ್ಸೆ ಗ್ರಹಾಂ ಹೆಸರನ್ನೇ ಮಸೂದೆಗೆ ಇಡಲಾಗಿದೆ. ಈ ವರ್ಷ ಜುಲೈನಲ್ಲಿ ಉಕ್ರೇನ್‌ಗೆ ತೆರಳಿ, ಹಿಂದಿರುಗಿದ್ದ ಗ್ರಹಾಂ, ಹಠಾತ್ ಮೃತಪಟ್ಟಿದ್ದರು.

ಎಚ್.ಆರ್. 5334,, ಲಿಂಡ್ಸೆ ಒ ಗ್ರಹಾಂ ಸ್ಯಾಂಕ್ಷನಿಂಗ್ ರಷ್ಯಾ ಅಂಡ್ ಇರಾನ್ ಆ್ಯಕ್ಟ್ ಆಫ್ 2026 ಮಸೂದೆಗೆ ಸೆ. 18ರಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದು, ಈಗ ಇದು ಕಾನೂನಾಗಿ ಜಾರಿಗೆ ಬಂದಿದೆ. ಇದು ರಷ್ಯಾ ವಿರುದ್ಧ ಶಾಸನಬದ್ಧ ನಿರ್ಬಂಧ, ಸುಂಕ ಮತ್ತು ನಿಷೇಧ ಹೇರಲು ಹಾಗು ಇರಾನ್ ವಿರುದ್ಧ ಅಸ್ತಿತ್ವದಲ್ಲಿರುವ ನಿರ್ಬಂಧ ಮುಂದುವರಿಸಲು ಟ್ರಂಪ್‌ಗೆ ಅಧಿಕಾರ ನೀಡುತ್ತದೆಂದು ಶ್ವೇತಭವನದ ಪ್ರಕಟಣೆ ತಿಳಿಸಿದೆ.

ಉಕ್ರೇನ್ ವಿರುದ್ಧ ರಷ್ಯಾ ನಡೆಸುತ್ತಿರುವ ಯುದ್ಧಕ್ಕೆ ಹಣಕಾಸು ನೆರವನ್ನು ಕುಂದಿಸುವುದು ಈ ಮಸೂದೆಯ ಪ್ರಮುಖ ಉದ್ದೇಶವಾಗಿದೆ. ರಷ್ಯಾ ಉದ್ಯಮಗಳು, ತೈಲ ಹಿತಾಸಕ್ತಿ, ರಷ್ಯಾ ಮಿಲಿಟರಿಗೆ ನೆರವಾಗುವ ವಿದೇಶಿ ಸಂಸ್ಥೆಗಳು, ಬ್ಯಾಂಕ್‌ಗಳನ್ನು ಈ ಮಸೂದೆ ಗುರಿಯಾಗಿಸಿಕೊಂಡಿದೆ. ರಷ್ಯಾದಿಂದ ತೈಲ ಮತ್ತು ಅನಿಲ ಖರೀದಿ ಮಾಡುವ ದೇಶಗಳು, ಅದರ ಮೇಲಿನ ಅವಲಂಬನೆ ತಗ್ಗಿಸುವ ನಿಟ್ಟಿನಲ್ಲಿ ಒತ್ತಡ ಹೇರಲು ಶೇ.100ರಷ್ಟು ಸುಂಕ ವಿಧಿಸುವ ಅಧಿಕಾರವನ್ನು ಈ ಕಾನೂನು ಟ್ರಂಪ್‌ಗೆ ನೀಡಿದೆ. 30 ದಿನಗಳ ಬಳಿಕ ಕಾನೂನು ಜಾರಿಗೆ ಬರಲಿದೆ. ರಷ್ಯಾದಿಂದ ತೈಲ ಮತ್ತು ನೈಸರ್ಗಿಕ ಅನಿಲ ಖರೀದಿಸುವ ಭಾರತ, ಚೀನಾ, ಹಂಗೇರಿ, ಅಜರ್‌ಬೈಜಾನ್, ಸ್ಲೊವಾಕಿಯಾ ದೇಶಗಳಿಗೆ ಇದು ನುಂಗಲಾರದ ತುತ್ತಾಗಿದೆ.

**ನಕಲಿ ವರದಿ ನಂಬಿ ದಾಳಿಗೆ ಮುಂದಾಗಿದ್ದ ಅಮೇರಿಕಾ**

**ಪಶ್ಚಿಮ ಏಷ್ಯಾ** ಕರಾವಳಿಯಲ್ಲಿ ಸಾಗುತ್ತಿದ್ದ ಚೀನಾದ ಹಡಗಿನಲ್ಲಿ ಪರಮಾಣು ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದ ಸರಕುಗಳಿವೆ ಎಂಬ ನಕಲಿ ಗುಪ್ತಚರ ವರದಿ ಆಧರಿಸಿ ಅಮೇರಿಕಾ ದಾಳಿಗೆ ಮುಂದಾಗಿರುವ ಮಾಹಿತಿ ಬಹಿರಂಗವಾಗಿದೆ.

ಸಶಸ್ತ್ರ ಪಡೆ ಸಿಬ್ಬಂದಿ ಹಡಗನ್ನು ಏರಲು ಸಜ್ಜಾಗಿದ್ದರು. ಯುದ್ಧ ವಿಮಾನಗಳೂ ಆಕಾಶದಲ್ಲಿ ಕಾರ್ಯಾಚರಣೆಗೆ ಇಳಿದಿದ್ದವು. ಆದರೆ, ಕೊನೇ ಕ್ಷಣದಲ್ಲಿ ವರದಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕೃತಕ ಬುದ್ಧಿಮತ್ತೆ (ಎಐ) ಮೂಲಕ ಸಿದ್ಧಪಡಿಸಿರುವುದು ಎಂಬುದು ಗೊತ್ತಾಗಿದೆ ಎಂದು ಸಿಎನ್‌ಎನ್ ವರದಿ ಮಾಡಿದೆ.

ಪೆಸಿಫಿಕ್‌ಗೆ ಸಂಬಂಧಿಸಿದ ಅಮೇರಿಕಾದ ಸ್ಪೆಷಲ್ ಆಪರೇಷನ್ಸ್ ಕಮಾಂಡ್‌ನ ವಿಶ್ಲೇಷಕರೊಬ್ಬರು ಆ ವರದಿ ಸಿದ್ಧಪಡಿಸಿದ್ದರು. ಅವರು ಬಳಸಿದ್ದ ಎಐ ಚಾಟ್‌ಬಾಟ್, ಚೀನಾದ ಹಡಗಿನಲ್ಲಿದ್ದ ವಸ್ತುಗಳನ್ನು ತಪ್ಪಾಗಿ ಗ್ರಹಿಸಿತ್ತು. ಆ ವರದಿಯು ಸಂಪೂರ್ಣ ಸುಳ್ಳು. ಇದರಿಂದ ಯುದ್ಧವೇ ಆರಂಭವಾಗಿಬಿಡುತ್ತಿತ್ತು ಎಂದು ಮೂಲವೊಂದು ತಿಳಿಸಿರುವುದಾಗಿ ಸಿಎನ್‌ಎನ್ ಉಲ್ಲೇಖಿಸಿದೆ. ಸರ್ಕಾರಿ ವ್ಯವಸ್ಥೆಗಳಲ್ಲಿ ಲಭ್ಯವಿರುವ ವರ್ಗೀಕೃತ ಗುಪ್ತಚರ ಸಂಕೇತಗಳೊಂದಿಗೆ, ಅಂತರ್ಜಾಲದಲ್ಲಿ ಮುಕ್ತವಾಗಿರುವ ಮಾಹಿತಿ ಯನ್ನು ಸಂಯೋಜಿಸಿ ಎಐ ಚಾಟ್‌ಬಾಟ್ ವರದಿ ತಯಾರಿಸಿತ್ತು. ಅದನ್ನು ಅಧಿಕೃತ ಗುಪ್ತಚರ ವರದಿಯಂತೆ ಬದಲಿಸಲು ಮತ್ತೊಮ್ಮೆ ಎಐ ಬಳಕೆ ಮಾಡಲಾಗಿತ್ತು. ನಂತರ, ಸೇನಾಧಿಕಾರಿಗಳಿಗೆ ಹಂಚಲಾಗಿತ್ತು ಎನ್ನಲಾಗಿದೆ.

## ಕಸ್ತೂರಿ ರಂಗನ್ ವರದಿ ಜಾರಿ ಬೇಡ

### ಎಲ್ಲಾ ರಾಜಕೀಯ ಪಕ್ಷಗಳ ನಿಲುವು ಒಂದೇ: ಹೆಚ್.ಡಿ.ಕೆ.

• ಪ್ರಜೋದಯ ವರದಿ

**ಬೆಂಗಳೂರು:** ಕಸ್ತೂರಿ ರಂಗನ್ ವರದಿಯ ವಿಚಾರದಲ್ಲಿ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳ ನಿಲುವು ಒಂದೇ ಆಗಿದ್ದು, ಈ ವರದಿಯನ್ನು ಜಾರಿಗೆ ತರ ಬಾರದೆಂಬುದು ಬಹುತೇಕರ ಒತ್ತಾಯವಾಗಿದೆಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೋಮವಾರದಿಂದ ಆರಂಭವಾಗುವ ವಿಶೇಷ ಅಧಿವೇಶನದ ಬಗ್ಗೆ ಪ್ರತಿಕ್ರಿಯಿಸಿ, ಕಸ್ತೂರಿ ರಂಗನ್ ವರದಿ ಚರ್ಚೆ ಆಗಲಿ ಸಂತೋಷ. ಕಸ್ತೂರಿ ರಂಗನ್ ವರದಿ ವಿಚಾರದಲ್ಲಿ ಎಲ್ಲಾ ಪಕ್ಷಗಳ ಧ್ವನಿ ಒಂದೇ. ಶಿವಮೊಗ್ಗಾ, ಚಿಕ್ಕಮಗಳೂರು, ಕೊಡಗು ಸೇರಿ ಎಲ್ಲಾ ರೈತರು, ಜನರು ವರದಿ ಜಾರಿ ಬೇಡ ಎಂದು ಹೇಳುತ್ತಿದ್ದಾರೆ. ಅನೇಕ ವರ್ಷಗಳಿಂದ ಹೋರಾಟ ಮಾಡ್ತಾ ಇದ್ದಾರೆ ಎಂದರು.

ಮುಖ್ಯಮಂತ್ರಿ ಅವರು ಕಸ್ತೂರಿ ರಂಗನ್ ವರದಿ ಮತ್ತು ಬರಗಾಲದ ಬಗ್ಗೆ ಅಧಿವೇಶನ ಎಂದು ಹೇಳುತ್ತಾ ಪ್ರಚಾರ ಮಾಡಿದ್ದಾರೆ. ಕಸ್ತೂರಿ ರಂಗನ್ ವರದಿ ಜಾರಿ ಮಾಡಬಾರದು ಎಂಬುದು ಎಲ್ಲರ ಅಭಿಪ್ರಾಯ. ನಮ್ಮ ಪಕ್ಷದ ನಿಲುವು ಇದೆ ಆಗಿದೆ. ಒಂದು ಧ್ವನಿಯಾಗಿ ಈ ವಿಚಾರದಲ್ಲಿ ನಾವು ಹೋರಾಟ ಮಾಡಬೇಕು ಎಂದು ಕರೆ ನೀಡಿದರು.

ರಾಜ್ಯದಲ್ಲಿ ಬರ ವಿಚಾರ ಸಂಬಂಧ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿ, ಬರಗಾಲದ ಬಗ್ಗೆ ಏನ್ ಚರ್ಚೆ ಮಾಡ್ತಾರೆ. ಇವರ ಬಳಿ ಏನ್ ಇದೆ? ಬರಗಾಲ ಸಂಬಂಧ ಯಾವುದೇ ಭಾಗದ ರೈತರಿಗೆ ಪರಿಹಾರ ಕೊಟ್ಟಿಲ್ಲ. 2–3 ಬಾರಿ ಬಿತ್ತನೆ ಮಾಡಿದ್ರು, ಬೆಳೆ ಒಣಗಿ ಹೋಗಿದೆ. ಇದಕ್ಕೆ ಹಣ ಖರ್ಚುಮಾಡಿದ್ದು ಸಂಪೂರ್ಣನಾಶವಾಗಿದೆ. ಸಿಎಸ್‌ಅವರು ಬ್ಯಾಂಕ್ಸ್‌ಗೆ ಒಂದು ವರ್ಷ ಸಾಲ ವಸೂಲಿ ಮುಂದೂಡಿ ಅಂತ ಹೇಳಿದ್ದಾರೆ.

ನಾನು ಮಂಡ್ಯದಲ್ಲಿ ದಿಶಾ ಮೀಟಿಂಗ್ ನಲ್ಲಿ ಡಿಸಿಗಳಿಗೆ ನಾನು ಸೂಚನೆ ಕೊಟ್ಟಿದ್ದೆ. ಸರ್ಕಾರದಿಂದ ಏನ್ ಮಾಡ್ತೀರಾ? ಹಳ್ಳಿಗಳಲ್ಲಿ ಕುಡಿಯೋ ನೀರಿನ ಸಮಸ್ಯೆ ಇದೆ. ಕುಡಿಯೋ ನೀರಿನ ಸಮಸ್ಯೆ ಸರ್ಕಾರ ಬಗೆಹರಿಸಿಲ್ಲ. ದುಂಡು ವೆಚ್ಚ ಮಾಡಿಕೊಂಡು ಸರ್ಕಾರ ರೈತರಿಗೆ ಪರಿಹಾರ ಕೊಡ್ತಿಲ್ಲ. ಸಿಎಂ ಅವರೇ ಬೆಳೆ ಬೆಳೆಯಬೇಡಿ ಅಂತ ಹೇಳಿದ್ರು. ಈಗ ಆ ರೈತರಿಗೆ ಏನ್ ಮಾಡ್ತೀರಾ, ಸಾಲಸೋಲ ಮಾಡಿ ಬಿತ್ತನೆ ಮಾಡಿದ್ರು, ಫಲ ಸಿಕ್ಕಿಲ್ಲ ಅವರಿಗೆ ಏನ್ ಮಾಡ್ತೀರಾ, ಸದನದಲ್ಲಿ ಏನ್ ಚರ್ಚೆ ಮಾಡ್ತೀರಾ ಎಂದು ಪ್ರಶ್ನಿಸಿದರು.

## ಅಧಿಕಾರಿಗಳ ನಿರ್ಲಕ್ಷ್ಯದಿಂದ ಬಡವರ ಬದುಕು ಹೈರಾಣ

» ಮೊದಲನೇ ಪುಟದಿಂದ

ಕೆಲಸ ಮಾಡಿ. ಏನ್ರೀ ಸಮಸ್ಯೆ, ಎಲ್ಲರೂ ನಿಮ್ಮ ಮೇಲೆ ದೂರು ನೀಡುತ್ತಿದ್ದಾರೆ. ಆಯಕಟ್ಟಿನ ಜಾಗದಲ್ಲಿ ನೀವು ಚುರುಕಿನಿಂದ ಕೆಲಸ ಮಾಡಬೇಕೆಂದು ಬೇಸರ ಹೊರಹಾಕಿದರು.

**ಇಲ್ಲಿಗ್ಯಾಕ್ರಿ ಬಂದ್ರಿ**

ಕುಣಿಗಲ್ ಗ್ರಾಮದಲ್ಲಿರುವ ನಮ್ಮ ಜಮೀನನ್ನು ದುರಸ್ತಿಪಡಿಸುವಂತೆ ಅರ್ಜಿ ಸಲ್ಲಿಸಿದರೆ, ನಿಮ್ಮ ಜಮೀನಿನ ಕಡತವೇ ಇಲ್ಲ ಎಂದು ಸರ್ವೆ ಇಲಾಖೆಯಲ್ಲಿ ಹೇಳುತ್ತಾರೆಂದು ಕುಣಿಗಲ್ ಗ್ರಾಮದ ಪ್ರಸನ್ನ ದೂರಿದರು. ಅದರಿಂದ ಸಿಟ್ಟಾದ ಸಚಿವರು ಎಡಿಎಲ್‌ಆರ್ ಅವರನ್ನು ಉದ್ದೇಶಿಸಿ ಇದುವರೆಗೆ ಎಲ್ಲೀ ಕೆಲಸ ಮಾಡುತ್ತಿದ್ದಿರಿ ಎಂದು ಪ್ರಶ್ನಿಸಿದರು. ಅಧಿಕಾರಿ ಚಿಕ್ಕಬಳ್ಳಾಪುರ ಎಂದು ಹೇಳಿದ್ದಕ್ಕೆ ಅಲ್ಲಿಂದ ಇಲ್ಲಿಗ್ಯಾಕೆ ಬಂದಿದ್ದೀರಿ. ಇಲ್ಲಿ ಎಲ್ಲರೂ ರೈತರು, ದುಡ್ಡಾಗುವುದಿಲ್ಲ. ಬೆಂಗಳೂರು ಸುತ್ತಮುತ್ತ ಕೆಲಸ ಮಾಡುವುದಲ್ಲವೇ ಎಂದು ಪ್ರಶ್ನಿಸಿ 15 ದಿನಗಳ ಒಳಗಾಗಿ ದುರಸ್ತಿ ಪಡಿಸಬೇಕೆಂದರು.

**ಭ್ರಷ್ಟಾಚಾರದ ಕೂಪ**

ತಾಲ್ಲೂಕು ಸರ್ವೆ ಇಲಾಖೆ ಭ್ರಷ್ಟಾಚಾರದ ಕೂಪವಾಗಿದ್ದು, ಕಚೇರಿಯಲ್ಲಿ ಹಣವಿದ್ದವರಿಗೆ ನ್ಯಾಯ. ಇಲ್ಲಿ ಬಡವರ ಭೂಮಿಯನ್ನು ಶ್ರೀಮಂತರಿಗೆ ಹಂಚಲಾಗುತ್ತಿದೆ. ಆದ್ದರಿಂದ ಸರ್ವೆ ಕಚೇರಿಯಲ್ಲಿರುವ ಎಲ್ಲಾ ಸರ್ವೆಯರ್‌ಗಳನ್ನು ವರ್ಗಾಯಿಸಬೇಕು. ಸರ್ವೆಯರ್ ಮನು ಎಂಬಾತ ತಪ್ಪು ಮಾಡಿರುವುದು ಸಭೆಯಲ್ಲೇ ದೃಢಪಟ್ಟಿದೆ. ಆದ್ದರಿಂದ ಈಗಲೇ ಅಮಾನತು ಗೊಳಿಸಬೇಕೆಂದು ಸಾರ್ವಜನಿಕರು ಸಭೆಯಲ್ಲಿ ಆಗ್ರಹಿಸಿದರು.

**ನಾಳೆ ಭೂಮಿಪೂಜೆ ಮಾಡಿಸಿ**

ಹೊಸಕೊಪ್ಪಲು ಗ್ರಾಮದಲ್ಲಿ ಹಳೆ ಮನೆ ಬಿದ್ದಿರುವುದರಿಂದ ಗುಡಿಸಲಿನಲ್ಲಿವಾಸಿಸುತ್ತಿದ್ದೇವೆ. ಮನೆ ಮಂಜೂರು ಮಾಡುವಂತೆ ಮನವಿ ಮಾಡಿದರೂ ಅಧಿಕಾರಿಗಳಿಂದ ಪ್ರಯೋಜನವಾಗಿಲ್ಲ ಎಂದು ಗ್ರಾಮದ ಅಂಗವಿಕಲ ರೊಬ್ಬರು ದೂರಿದರು.

ಅದಕ್ಕೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಯನ್ನು ತರಾಟೆಗೆ ತೆಗೆದು ಕೊಂಡ ಸಚಿವರು, ನಾಚಿಕೆಯಾಗಬೇಕು ನಿಮಗೆ. ಮನುಷ್ಯತ್ವದಿಂದ ಕೆಲಸ ಮಾಡಿ. ಅಂಗವಿಕಲನನ್ನು ಅಲೆಸುವುದು ತಪ್ಪು. ನಾಳೆಯೇ ಮನೆ ನಿರ್ಮಾಣಕ್ಕೆ ನೀವೇ ಪೂಜೆ ಮಾಡಿ, ವರದಿ ನೀಡಬೇಕೆಂದು ಸೂಚಿಸಿದರು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಸಿಮೆಂಟ್ ಮಂಜು, ಜಿಲ್ಲಾಧಿ ಕಾರಿ ಕೆ.ಎಸ್.ಲತಾಕುಮಾರಿ, ಡಿಎಫ್‌ಒ ಸೌರಭಕುಮಾರ್, ಉಪ ವಿಭಾಗಾಧಿಕಾರಿ ಹುಲ್ಲಮನಿ ತಿಮ್ಮಣ್ಣ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು, ತಾಲ್ಲೂಕು ಅಧ್ಯಕ್ಷ ಮುರುಳಿ ಮೋಹನ್, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸಯದ್ ಮುಫೀಜ್ ಮತ್ತಿತರರಿದ್ದರು.

## ಮಾನವೀಯತೆ ಮೆರೆದ ಸಚಿವ ಕುಮಾರಸ್ವಾಮಿ

• ಪ್ರಜೋದಯ ವರದಿ



**ಹಾಸನ:** ದೆಹಲಿಯ ವಸತಿ ಗೃಹವೊಂದರಲ್ಲಿ ಆತ್ಮಹತ್ಯೆಗೆ ಶರಣಾದ ತಾಲ್ಲೂಕಿನ ಕಟ್ಟಾಯ ಹೋಬಳಿ ನಾಯಕರಹಳ್ಳಿ ಗ್ರಾಮದ ಯುವಕನ ಮೃತದೇಹವನ್ನು ಹುಟ್ಟೂರಿಗೆ ಕರೆತರುವಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ನೆರವಾಗಿ ಮಾನವೀಯತೆ ಮೆರೆದಿದ್ದಾರೆ.

ಗ್ರಾಮದ ಜಯರಾಮ್ ಅವರ ಪುತ್ರ, ಇಂಜಿನೀಯರಿಂಗ್ ಪದವೀಧರ ಜಯಂತ್‌ಗೌಡ ದೆಹಲಿಯ ವಸತಿ ಗೃಹವೊಂದರಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ ಸಚಿವರ ಗಮನಕ್ಕೆ ಬಂದ ತಕ್ಷಣ ಅವರು ಸ್ಪಂದಿಸಿದ್ದಾರೆ.

ಘಟನೆಯ ಮಾಹಿತಿ ತಿಳಿದ ಕೂಡಲೇ ಮೃತ ಯುವಕನ ಕುಟುಂಬದ ಸದಸ್ಯರನ್ನು ಸಂಪರ್ಕಿಸಿದ ಕುಮಾರಸ್ವಾಮಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ದೆಹಲಿಯಲ್ಲಿ ಅಗತ್ಯಪ್ರಕ್ರಿಯೆ ಪೂರ್ಣಗೊಳಿಸಿ, ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನುದೆಹಲಿಯಿಂದ ಅವರ ಸ್ವಗ್ರಾಮ ನಾಯಕರಹಳ್ಳಿಗೆ ಕಳುಹಿಸಿಕೊಡುವವ್ಯವಸ್ಥೆ ಮಾಡಲು ಸಹಕರಿಸಿದರು.

ತಮ್ಮ ಕುಟುಂಬದ ಸದಸ್ಯನನ್ನು ಕಳೆದುಕೊಂಡು ಆಘಾತದಲ್ಲಿದ್ದ ಕುಟುಂಬಕ್ಕೆ ಇಂತಹ ಸಂದರ್ಭದಲ್ಲಿ ನೆರವು ದೊರಕಿರುವುದು ದೊಡ್ಡ ಸಮಾಧಾನ ತಂದಿದೆ. ದೂರದ ದೆಹಲಿಯಲ್ಲಿ ನಡೆದ ಘಟನೆಯಾದರೂ ತಕ್ಷಣ ಗಮನಹರಿಸಿ ಸ್ಪಂದಿಸಿದ ಸಚಿವರ ನಡೆ ಕುಟುಂ ಬದ ಸದಸ್ಯರು ಹಾಗು ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರವಾಗಿದೆ.

ಸಚಿವರ ಮಾನವೀಯ ಕಾರ್ಯವನ್ನು ಜಿಲ್ಲೆಯ ಜನರೂ ಶ್ಲಾಘಿಸಿದ್ದಾರೆ. ಅಧಿಕಾರ, ಜವಾಬ್ದಾರಿಗಳ ನಡುವೆಯೂ ತವರು ಜಿಲ್ಲೆಯ ಜನರೊಂದಿಗೆ ನಂಟು ಉಳಿಸಿಕೊಂಡು, ಸಂಕಷ್ಟದ ಸಮಯದಲ್ಲಿ ನೆರವಿಗೆ ಧಾವಿಸುವುದು ತವರು ಪ್ರೀತಿಯ ಪ್ರತೀಕ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಸಂಕಷ್ಟದಲ್ಲಿರುವ ಕುಟುಂಬಕ್ಕೆ ನೆರವಾಗುವ ಇಂತಹ ಕಾರ್ಯಗಳು ಸಾರ್ವಜನಿಕ ಜೀವನದಲ್ಲಿ ಮಾನವೀಯ ಮೌಲ್ಯಗಳ ಮಹತ್ವವನ್ನು ಸಾರುತ್ತವೆ. ಜಯಂತ್‌ಗೌಡ ಅವರ ಕುಟುಂಬಕ್ಕೆ ನೆರವಾಗುವ ಮೂಲಕ ಹೆಚ್.ಡಿ.ಕುಮಾರಸ್ವಾಮಿ ಅವರು ಮಾನವೀಯತೆ ಹಾಗು ತವರು ಜಿಲ್ಲೆಯ ಜನರ ಮೇಲಿನ ಕಾಳಜಿಯನ್ನು ಮತ್ತೊಮ್ಮೆ ರುಜುವಾತು ಮಾಡಿದ್ದಾರೆ.



**ಹಾಸನ: ನಗರದ ಎಂ.ಜಿ.ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಭವನದಲ್ಲಿ ಶನಿವಾರ ಸಂಜೆ ನಟ, ಸಾಹಿತಿ ಟಿ.ಎನ್.ಸೀತಾರಾಂ ಸಾರಥ್ಯದ ಮುಂದಿನ ಅಧ್ಯಾಯ ವೆಬ್ ಸರಣಿಯ ಪ್ರಥಮ ಅಧ್ಯಾಯ ಲೋಕಾರ್ಪಣೆಗೊಳಿಸಲಾಯಿತು. ಸ್ಕಾಲರ್ಸ್ ಅಂತರಾಷ್ಟ್ರೀಯ ಶಾಲೆಯ ಮುಖ್ಯ ಆಡಳಿತಾಧಿಕಾರಿ ಡಾ.ಹೆಚ್.ಎನ್.ಚಂದ್ರಶೇಖರ್ ಸಮಾರಂಭ ಉದ್ಘಾಟಿಸಿದರು. ನಟ ಟಿ.ಎನ್.ಸೀತಾರಾಂ, ಚಲನ ಚಿತ್ರ ನಟರಾದ ಹನುಮಂತೇಗೌಡ, ರಾಮಚಂದ್ರ ಬೆಗೂರು, ನಟಿ ಸುಧಾ ಬೆಳವಾಡಿ, ಡಿ.ಸಿ. ಕೃಷ್ಣಮೂರ್ತಿ, ಅರ್ಜುನ್ ಸಾಮರ್ಥ್ಯ, ನಿರ್ದೇಶಕ ಚಂದನ್ ಶಂಕರ್, ಸಂಕಲನಕಾರ ರಾಜೇಶ್, ಪ್ರದೀಪ್, ಸಂತೋಷ್, ನಾಗರಾಜ್ ಹೆತ್ತೂರು, ಮಂಜು ಬನವಾಸೆ ಮತ್ತಿತರರಿದ್ದರು.**

## ಶಿಕ್ಷಕರು ದೇಶದ ಭವಿಷ್ಯ ರೂಪಿಸುವ ಶಿಲ್ಪಿಗಳು

» ಮೊದಲನೇ ಪುಟದಿಂದ

ಅತ್ಯಂತ ಮಹತ್ವದ್ದಾಗಿದ್ದು, ಶಿಕ್ಷಕರು ಕೇವಲ ಪಾಠ ಬೋಧಿಸುವವರಲ್ಲ, ಉತ್ತಮ ವ್ಯಕ್ತಿತ್ವ ಹಾಗು ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವ ಮಾರ್ಗದರ್ಶಕರಾಗಿದ್ದಾರೆ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅದಕ್ಕೆ ಸೂಕ್ತ ಪ್ರೋತ್ಸಾಹ ನೀಡುವ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದರು.

ಶಿಕ್ಷಕರ ಮಾರ್ಗದರ್ಶನ ಹಾಗು ಪರಿಶ್ರಮದಿಂದ ಅನೇಕ ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತ ಸಾಧನೆ ಮಾಡಿದ್ದಾರೆ. ಶಿಸ್ತು, ಸಂಸ್ಕಾರ, ಮಾನವೀಯ ಮೌಲ್ಯಗಳು ಹಾಗು ಸಾಮಾಜಿಕ ಜವಾಬ್ದಾರಿಯ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಶಿಕ್ಷಕರ ಕೊಡುಗೆ ಅಪಾರ ವಾಗಿದೆ. ವಿದ್ಯಾರ್ಥಿಗಳಿಗೆ ಪುಸ್ತಕ ಜ್ಞಾನದ ಜೊತೆಗೆ ಜೀವನ ಕೌಶಲ್ಯ, ದೇಶಪ್ರೇಮ ಹಾಗೂ ಪರಿಸರ ಕಾಳಜಿಯನ್ನೂ ಬೆಳೆಸುವ ಅಗತ್ಯವಿದೆ ಎಂದು ತಿಳಿಸಿದರು.

ಇಂದಿನ ತಂತ್ರಜ್ಞಾನ ಆಧಾರಿತ ಬದಲಾಗುತ್ತಿರುವ ಕಾಲಘಟ್ಟಕ್ಕೆ ಅನುಗುಣವಾಗಿ ಶಿಕ್ಷಣ ಕ್ಷೇತ್ರದಲ್ಲಿಯೂ ಹಲವು ಬದಲಾವಣೆಗಳು ನಡೆಯುತ್ತಿವೆ. ಶಿಕ್ಷಕರು ಹೊಸ ಬೋಧನಾ ವಿಧಾನಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳ ಕಲಿಕೆಗೆ ಮತ್ತಷ್ಟು ಪರಿಣಾಮಕಾರಿ ವಾತಾವರಣ ಕಲ್ಪಿಸಬೇಕು. ಗ್ರಾಮೀಣ ಭಾಗದ ಮಕ್ಕಳಿಗೂ ಗುಣ ಮಟ್ಟದ ಶಿಕ್ಷಣ ದೊರೆಯುವಂತೆ ಎಲ್ಲರೂ ಸಹಕರಿಸಬೇಕೆಂದು ಹೇಳಿದರು.

ಶಿಕ್ಷಕರು ತಮ್ಮ ವೃತ್ತಿಯನ್ನು ಸೇವಾ ಮನೋಭಾವದಿಂದ ನಿರ್ವಹಿಸುತ್ತಿರುವುದು ಶ್ಲಾಘನೀಯ. ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವುದು ಜನಪ್ರತಿನಿಧಿಗಳ ಜವಾಬ್ದಾರಿಯಾಗಿದ್ದು, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಆದ್ಯತೆ ನೀಡಲಾಗುವುದು. ಶಾಲಾ-ಕಾಲೇಜುಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಾಣವಾಗಬೇಕಾದರೆ ಶಿಕ್ಷಕರು ಹಾಗೂ ಪೋಷಕರು ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಬೇಕು. ವಿದ್ಯಾರ್ಥಿಗಳ ಸಾಧನೆಯ ಹಿಂದೆ ಶಿಕ್ಷಕರ ಪರಿಶ್ರಮ, ಮಾರ್ಗದರ್ಶನ ಹಾಗೂ ಪ್ರೋತ್ಸಾಹ ಅಡಗಿದ್ದು, ಸಮಾಜಕ್ಕೆ ಉತ್ತಮ ನಾಗರಿಕರನ್ನು ರೂಪಿಸುವ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿದೆ. ಅವರ ಸೇವೆ ಯನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು. ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಈ ವೇಳೆ ವಿವಿಧ ಶಾಲೆ ಗಳ ಶಿಕ್ಷಕರನ್ನು ಗೌರವಿಸಿ ಅಭಿನಂದಿಸಲಾ ಯಿತು.

ಶಾಲಾ ಒಕ್ಕೂಟದ ಅಧ್ಯಕ್ಷ ಶಿವರಾಮೇಗೌಡ, ಕಾರ್ಯದರ್ಶಿ ಬಿ.ಕೆ.ಗಂಗಾಧರ್ ಹಾಗು ಪದಾಧಿಕಾರಿಗಳು ಹಾಜರಿದ್ದರು.

## ಮಲೆನಾಡಿನ ಸಮಸ್ಯೆಗೆ ಕಿವಿಯಾಗುವರೇ ಮುಖ್ಯಮಂತ್ರಿ

» ಮೊದಲನೇ ಪುಟದಿಂದ

ರೈತರು ಹಾಗು ಕಾಫಿ ಬೆಳೆಗಾರರ ಜೀವನೋಪಾಯಕ್ಕೆ ಧಕ್ಕೆಯಾಗದಂತೆ ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿಯ ನಡುವೆ ಸಮತೋಲನ ಸಾಧಿಸಬೇಕೆಂಬ ಬೇಡಿಕೆ ಕೇಳಿಬರುತ್ತಿದೆ. ಹೀಗಾಗಿ ಮುಖ್ಯ ವ್ಂತ್ರಿ ಯ ವ್ರೊಂದಿಗ್ ನಡೆಯಲಿರುವ ಸಭೆಯಲ್ಲಿ ಸ್ಥಳೀಯರು ತಮ್ಮ ಸಮಸ್ಯೆ, ಆತಂಕ ಹಾಗೂ ಸಲಹೆಗಳನ್ನು ನೇರವಾಗಿ ಮಂಡಿಸಲು ಅವಕಾಶ ದೊರೆತಿದೆ.

ಕಸ್ತೂರಿ ರಂಗನ್ ವರದಿ ಕುರಿತು ರಾಜ್ಯ ಸರ್ಕಾರವು ಈಗಾಗಲೇ ಸ್ಥಳೀಯರ ಅಭಿಪ್ರಾಯವನ್ನು ಆಲಿಸುವ ಪ್ರಕ್ರಿಯೆಗೆ ಮುಂದಾಗಿದೆ. ವರದಿ ವ್ಯಾಪ್ತಿಯ ಪ್ರದೇಶಗಳ ವಾಸ್ತವ ಸ್ಥಿತಿಗತಿಯನ್ನು ಅರಿತ ಬಳಿಕವೇ ಮುಂದಿನ ನಿಲುವು ರೂಪಿಸಬೇಕೆಂಬ ಅಭಿಪ್ರಾಯವನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವ್ಯಕ್ತಪಡಿಸಿದ್ದಾರೆ. ಈ ನಿಟ್ಟಿನಲ್ಲಿ ಪ್ರವಾಸ ನಡೆಸುತ್ತಿದ್ದಾರೆ. ಅದರ ಭಾಗವಾಗಿ ಸಕಲೇಶಪುರಕ್ಕೂ ಭೇಟಿ ನೀಡುತ್ತಿದ್ದಾರೆ.

**ಎತ್ತಿನಹೊಳೆ ಕಾಮಗಾರಿಗೆ ವೇಗದ ನಿರೀಕ್ಷೆ**

ಕಸ್ತೂರಿ ರಂಗನ್ ವರದಿ ಜೊತೆಗೆ ಸಕಲೇಶಪುರದ ಭೇಟಿಯಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯೂ ಪ್ರಮುಖವಾಗಲಿದೆ. ಯೋಜನೆಯ ಹಂತ-2 ಕಾಮಗಾರಿಯನ್ನು ಪೂರ್ಣಗೊಳಿಸಿ ಬಯಲುಸೀಮೆ ಜಿಲ್ಲೆಗಳಿಗೆ ನೀರು ಹರಿಸುವುದಕ್ಕೆ ಸರ್ಕಾರ ಒತ್ತು ನೀಡುತ್ತಿದೆ.

ಸಭೆಯ ಬಳಿಕ ಮಧ್ಯಾಹ್ನ ಹೆಲಿಕಾಪ್ಟರ್ ಮೂಲಕ ಎತ್ತಿನಹೊಳೆ ಯೋಜನೆಯ ವಿವಿಧ ಕಾಮಗಾರಿಗಳ ವೈಮಾನಿಕ ಸಮೀಕ್ಷೆ ನಡೆಸಲಿರುವ ಮುಖ್ಯಮಂತ್ರಿ, ಕಾಮಗಾರಿಯ ಪ್ರಗತಿ ಹಾಗು ಬಾಕಿ ಉಳಿದಿರುವ ಕಾರ್ಯಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆಯಲಿದ್ದಾರೆ. ಯೋಜನೆಯ ಪ್ರಮುಖ ಕಾಮಗಾರಿಗಳಿಗೆ ವೇಗ ನೀಡುವುದು, ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸುವುದು ಹಾಗು ನಿಗದಿತ ಅವಧಿಯಲ್ಲಿ ನೀರು ಹರಿಸುವ ಕುರಿತು ಅಧಿಕಾರಿಗಳಿಗೆ ನಿರ್ದೇಶನ ನೀಡುವ ನಿರೀಕ್ಷೆಯಿದೆ.

## ಜಾರಕಿಹೊಳಿ ಮನೆ ಮೇಲೆ ಇಡಿ ದಾಳಿ ಖಂಡಿಸಿ ಪ್ರತಿಭಟನೆ

• ಪ್ರಜೋದಯ ವರದಿ



**ಹಾಸನ:** ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ಮನೆ, ಕಚೇರಿ ಮೇಲೆ ಇ.ಡಿ. ದಾಳಿ ನಡೆದಿರುವುದನ್ನು ಖಂಡಿಸಿ ಸಂವಿಧಾನ ಸಂರಕ್ಷಣಾ ವೇದಿಕೆ, ದಲಿತ ಹಾಗೂ ಜನಪರ ಸಂಘಟನೆಗಳಿಂದ ಶನಿವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಪ್ರತಿಭಟನೆ ನಡೆಸಲಾಯಿತು.

ಕೇಂದ್ರ, ಬಿಜೆಪಿ ಸರ್ಕಾರ ಮತ್ತು ಇ.ಡಿ. ವಿರುದ್ಧ ಘೋಷಣೆ ಕೂಗುವ ನಾಮಫಲಕ ಹಿಡಿದು ಪ್ರತಿಭಟನೆ ನಡೆಸಿ, ನಂತರ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿ ಮನವಿ ಸಲ್ಲಿಸಿದರು.

ಈ ವೇಳೆ ಜಿಲ್ಲಾ ವಾಲ್ಮೀಕಿ ಸಮಾಜದ ಅಧ್ಯಕ್ಷ ಮಧುನಾಯಕ ಅವರು ಮಾತನಾಡಿ, ಎಸ್‌ಟಿ ಸಮುದಾಯದ ನಾಯಕ ಸಚಿವ ಸತೀಶ್ ಜಾರಕಿಹೊಳಿ ಅವರ ಮನೆ ಮೇಲೆ ಇ.ಡಿ. ದಾಳಿ ಮಾಡಿರುವುದು ರಾಜಕೀಯ ಪ್ರೇರಿತ. ಅದಕ್ಕೆಲ್ಲ ಕೇಂದ್ರ, ಬಿಜೆಪಿ ಸರ್ಕಾರದ ಕುಮ್ಮಕ್ಕು ಕಾರಣ. ಬಿಜೆಪಿಯಲ್ಲೇ ಅನೇಕ ಭ್ರಷ್ಟರಿದ್ದರೂ ಅವರನ್ನು ಬಿಟ್ಟು ದಲಿತ ನಾಯಕರನ್ನೇ ದಾಳಿ ಮಾಡಲಾಗುತ್ತಿದೆಂದು ದೂರಿದರು. ಬಿಜೆಪಿಯ ರಾಜಕೀಯ ದುರುದ್ದೇಶ ಹೀಗೆಯೇ ಮುಂದುವರಿದರೆ ಮುಂದಿನ ದಿನಗಳಲ್ಲಿ ವಾಲ್ಮೀಕಿ ಸಮುದಾಯ ತಕ್ಕಪಾಠ ಕಲಿಸಲಿದೆ. ಇ.ಡಿ. ತನ್ನ ದುರುದ್ದೇಶದ ದಾಳಿ ಮುಂದುವರಿಸಿದರೆ ಇಡಿ ಕಚೇರಿಗೆ ಮುತ್ತಿಗೆ ಹಾಕುವುದಾಗಿ ಎಚ್ಚರಿಕೆ ನೀಡಿದರು.

ಸತೀಶ್ ಜಾರಕಿಹೊಳಿ ಅವರು ಮೂರು ದಶಕಗಳ ಹಿಂದೆಯೇ ಉದ್ಯಮ ಕ್ಷೇತ್ರದಲ್ಲಿ ತೊಡಗಿಸಿಕೊಂಡು, ಬಳಿಕ ರಾಜಕೀಯ ಪ್ರವೇಶಿಸಿದವರು. ಶೋಷಿತ ಸಮುದಾಯಗಳ ಜನರು ಉದ್ಯಮಿಗಳಾಗಬೇಕೆಂಬ ಆಶಯದೊಂದಿಗೆ ಸಂಘ-ಸಂಸ್ಥೆ ಕಟ್ಟಿಕೊಂಡು ಸಾಮಾಜಿಕ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಡಾ.ಬಿ.ಆರ್.ಅಂಬೇಡ್ಕರ್ ಸೇರಿ ವಿವಿಧ ದಾರ್ಶನಿಕರ ಸಮಾನತೆಯ ಆಶಯ ಹಾಗು ಸಂವಿಧಾನದ ಮೌಲ್ಯಗಳನ್ನು ಜನರಲ್ಲಿ ಬಿತ್ತುವ ನಿಟ್ಟಿನಲ್ಲಿ ಪ್ರಗತಿಪರ ಸಂಘಟನೆಗಳೊಂದಿಗೆ ಕಾರ್ಯನಿರ್ವಹಿಸಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಯಾವುದೇ ತಪ್ಪು ಮಾಡಿಲ್ಲ, ಅವರ ಕಾನೂನಾತ್ಮಕ ಹೋರಾಟಕ್ಕೆ ನಮ್ಮ ನೈತಿಕ ಬೆಂಬಲ ಇದೆ ಎಂದು ಘೋಷಿಸಿದರು.

ಕಾಂಗ್ರೆಸ್ ಮುಖಂಡ ಶೇಷೇಗೌಡ, ಎಸ್.ಮಂಜುನಾಥ್ ಶರ್ಮಾ, ಹಿಮ್ಸ್ ನಾಮ ನಿರ್ದೇಶನ ಸದಸ್ಯ ರವೀಶ್ ಬಸವಾಪುರ, ಮುಖಂಡರಾದ ಕೃಷ್ಣದಾಸ್, ಶಿವಪ್ಪನಾಯಕ, ಮಲ್ಲಿಗೆವಾಳು ದ್ಯಾವಪ್ಪ, ವಿನೋದ್ ಕುಮಾರ್, ಇಮ್ರಾನ್, ರಂಗಸ್ವಾಮಿ, ಸುರೇಶ್, ಟಿ.ಆರ್.ವಿಜಯಕುಮಾರ್, ರಾಕೇಶ್, ನಾಗರಾಜು, ಪ್ರಸನ್ನ, ಅಶೋಕ್ ಇದ್ದರು.

## ಪರಿಷತ್ ಮೂಲ ಧ್ಯೇಯೋದ್ದೇಶ ಅನುಷ್ಠಾನಕ್ಕೆ ಬೆಂಬಲಿಸಿ

• ಪ್ರಜೋದಯ ವರದಿ



**ಹಾಸನ:** ಕನ್ನಡ ಸಾಹಿತ್ಯ ಪರಿಷತ್ತನ್ನು ಕನ್ನಡಿಗರ ಸ್ವಾಭಿಮಾನದ ಗೌರವ ಸಂಸ್ಥೆಯನ್ನಾಗಿ, ಪರಿಷತ್ತಿನ ಮೂಲ ಧ್ಯೇಯೋದ್ದೇಶಗಳನ್ನು ಅನುಷ್ಠಾನಗೊಳಿಸಲು ಈ ಬಾರಿ ನನಗೆ ಮತ ನೀಡಿ ಬೆಂಬಲಿಸುವಂತೆ ಕಸಾಪ ರಾಜ್ಯಾಧ್ಯಕ್ಷ ಸ್ಥಾನದ ಆಕಾಂಕ್ಷಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ ಅವರು ಮನವಿ ಮಾಡಿದರು.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶನಿವಾರ ನಡೆದ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧಿಕಾರಿಯಾಗಿದ್ದವರು ಅರ್ಹರು, ಅನರ್ಹರು ಎಂಬ ಪ್ರಶ್ನೆ ಮುಖ್ಯ ಅಲ್ಲ. ತಮ್ಮದೇ ರೀತಿಯಲ್ಲಿ ಕನ್ನಡದ ಮನಸ್ಸುಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುವುದರ ಜೊತೆಗೆ ಕನ್ನಡದ ಅಸ್ಮಿತೆಯನ್ನು ಗಟ್ಟಿಗೊಳಿಸುವುದು ನನ್ನ ಉದ್ದೇಶ ಎಂದು ಹೇಳಿದರು.

ಕನ್ನಡದ ಪ್ರಾಧಿನಿಧಿಕ ಸಂಸ್ಥೆಗೆ ಆರ್ಥಿಕ, ಭಾವನಾತ್ಮಕವಾಗಿ ಗಟ್ಟಿ ನೆಲೆ ರೂಪಿಸುವುದು ನನ್ನ ಆಸೆಯಾಗಿದೆ. ಇಂದು ಸಾಹಿತ್ಯ ಪರಿಷತ್ತಿಗೂ ಹೊಸ ಚಿಂತನೆ, ಆವಿಷ್ಕಾರ ಬೇಕಿದೆ. ಕನ್ನಡ ನಿತ್ಯೋತ್ಸವ ಆಗಬೇಕೆಂಬುದು ನನ್ನ ಹಂಬಲ. ಕನ್ನಡ ಸಾಹಿತ್ಯದ ಪರಿಚಾರಕನಾಗಿ ಸೇವೆ ಮಾಡಲು ನನ್ನೊಂದಿಗೆ ಕೈಜೋಡಿಸುವಂತೆ ಮನವಿ ಮಾಡಿದರು.

ಐಎಎಸ್ ಅಧಿಕಾರಿಯಾಗಿ ಪದೋನ್ನತಿ ಪಡೆದು ರಾಜ್ಯದ ಅನೇಕ ಇಲಾಖೆಗಳಲ್ಲಿ ದಕ್ಷತೆ ಯಿಂದ ಕಾರ್ಯವನಿರ್ವಹಿಸಿದ ತೃಪ್ತಿ ನನ್ನಲ್ಲಿದೆ. ವಿಶೇಷವಾಗಿ ಕನ್ನಡಅಭಿವೃದ್ಧಿಪ್ರಾಧಿಕಾರದಕಾರ್ಯದರ್ಶಿಯಾಗಿ, ಕನ್ನಡ ಸಾಂಸ್ಕೃತಿಕ ಇಲಾಖೆ ನಿರ್ದೇಶಕನಾಗಿ, ತುಮಕೂರು ಜಿಲ್ಲಾಧಿ ಕಾರಿಯಾಗಿ, ಸಹಕಾರ ಇಲಾಖೆ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದೇನೆ. ನನ್ನ ಆಡಳಿತ ಅವಧಿಯಲ್ಲಿ ಕನ್ನಡ ಭಾಷೆಗೆ ಹೆಚ್ಚಿನ ಆದ್ಯತೆ ನೀಡಿದ್ದೇನೆಂದು ಹೇಳಿದರು.

ಸಭೆಯಲ್ಲಿ ಹಾಜರಿದ್ದ ಹಲವರು, ಡಾ.ಸಿ.ಸೋಮಶೇಖರ ಅವರ ವ್ಯಕ್ತಿತ್ವದ ಮೇಲೆ ಯಾವುದೇ ಕಪ್ಪು ಚುಕ್ಕೆ ಇಲ್ಲ. ಅಧಿಕಾರಿಯಾಗಿ, ಕನ್ನಡ ನಾಡು, ನುಡಿಗಾಗಿಯೇ ಕೆಲಸ ಮಾಡಿಕೊಂಡು ಬಂದಿದ್ದಾರೆ. ವಚನಗಳಲ್ಲಿ ಸಾಮಾಜಿಕ ಚಿಂತನೆ ಎಂಬ ಮಹಾ ಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ ಪಡೆದುಕೊಂಡಿದ್ದಾರೆ. ಜೊತೆಗೆ ಮೌಲಿಕ ಕೃತಿ ಗಳನ್ನು ರಚಿಸಿದ್ದಾರೆ. ಹೀಗಾಗಿ ಅವರನ್ನು ಬೆಂಬಲಿಸುವುದು ಸೂಕ್ತ. ಸಭೆಯಲ್ಲಿ ಭಾಗವಹಿಸಿರು ವವರೆಲ್ಲ ಇನ್ನಷ್ಟು ಹೆಚ್ಚಿನ ಪ್ರಚಾರ ನೀಡಿ ಬೆಂಬಲ ನೀಡುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಜಾವಗಲ್ ಪ್ರಸನ್ನ ಕುಮಾರ್, ಬಾಳ್ಳು ಜಗನ್ನಾಥ್, ಮರ್ಕುಲಿ ಗೋಪಾಲೇಗೌಡ, ಕಟ್ಟಾಯ ಶಿವಕುಮಾರ್, ವೆಂಕಟೇಶ್ ಮತ್ತಿತರರು ಹಾಜರಿದ್ದರು.

## ವೈದ್ಯರಿಗೆ ಬೆದರಿಕೆ, ಸೇವೆಗೆ ಅಡ್ಡಿ ಆತಂಕ ತರಿಸಿದೆ

• ಪ್ರಜೋದಯ ವರದಿ




**ಹಾಸನ:** ರೋಗಿಯ ಸಾವು, ಆಸ್ಪತ್ರೆ ಬಿಲ್ ಅಥವಾ ಚಿಕಿತ್ಸೆಯಲ್ಲಿ ವ್ಯತ್ಯಾಸವಾದ ಸಂದರ್ಭದಲ್ಲಿ ವೈದ್ಯರು ಹಾಗು ಸಿಬ್ಬಂದಿಗೆ ಬೆದರಿಕೆ ಹಾಕಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಸೇವೆಗೆ ಅಡ್ಡಿಪಡಿಸುವ ಘಟನೆಗಳು ಆತಂಕ ತರಿಸಿದೆ ಎಂದು ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಮ್ ಅಸೋಸಿಯೇಷನ್ ಅಧ್ಯಕ್ಷ ಡಾ.ಶ್ರೀರಂಗ ಡಾಂಗೆ ಅವರು ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂತಹ ಘಟನೆಗಳಿಂದ ವೈದ್ಯರು ಮತ್ತು ಸಿಬ್ಬಂದಿಯ ಮಾನಸಿಕ ಸ್ಥೈರ್ಯ ಕುಗ್ಗಲಿದೆ. ಇತರೆ ರೋಗಿಗಳ ಮೇಲೂ ಪರಿಣಾಮ ಬೀರಲಿದೆ. ಕಳೆದ 1 ತಿಂಗಳ ಅವಧಿಯಲ್ಲಿ 4 ಆಸ್ಪತ್ರೆಗಳಲ್ಲಿ ಇಂಥಹ ಘಟನೆ ನಡೆದಿರುವುದು ನೋವು ತರಿಸಿದೆ. ಈ ರೀತಿಯ ಅಡಚಣೆಗಳಿಂದ ಸಂಬಂಧವೇ ಇಲ್ಲದ ಮತ್ತೊಬ್ಬ ರೋಗಿಯ ಆರೋಗ್ಯ ಹದಗೆಟ್ಟರೆ ಅಥವಾ ಜೀವಹಾನಿಯಾದರೆ ಹೊಣೆ ಯಾರು ಎಂದು ಪ್ರಶ್ನಿಸಿದರು.

ಪ್ರತಿಯೊಬ್ಬ ವೈದ್ಯರೂ ರೋಗಿ ಜೀವ ಉಳಿಸುವ ಉದ್ದೇಶದಿಂದಲೇ ಚಿಕಿತ್ಸೆ ಆರಂಭಿಸುತ್ತಾರೆ. ಆಕಸ್ಮಿಕವಾಗಿ ಜೀವಹಾನಿಯಾದರೆ ನಮಗೂ ನೋವಾಗುತ್ತದೆ. ನಾವ್ಯಾರೂ ರೋಗಿಯ ಅಥವಾ ಕುಟುಂಬದ ವಿರೋಧಿಗಳಲ್ಲ.ಪ್ರತಿಯೊಂದು ಪ್ರತಿಕೂಲ ಚಿಕಿತ್ಸಾ ಫಲಿತಾಂಶವನ್ನೂ ವೈದ್ಯಕೀಯ ನಿರ್ಲಕ್ಷ್ಯ ಎಂದು ಪರಿಗಣಿಸಲು ಸಾಧ್ಯವಿಲ್ಲ. ನಿರ್ಲಕ್ಷ್ಯ ನಡೆದಿದೆಯೇ ಎಂಬು ದನ್ನು ಸಾಕ್ಷ್ಯಾಧಾರ ಮತ್ತು ಕಾನೂನುಬದ್ಧ ಪ್ರಕ್ರಿಯೆ ಮೂಲಕ ನಿರ್ಧರಿಸಬೇಕೆಂದು ಮನವಿ ಮಾಡಿದರು.

ವೈದ್ಯಕೀಯ ಸೇವಾ ಸಿಬ್ಬಂದಿ ಮೇಲಿನ ಹಿಂಸಾಚಾರ ಮತ್ತು ವೈದ್ಯಕೀಯ ಸೇವಾ ಸಂಸ್ಥೆಗಳ ಆಸ್ತಿ-ಪಾಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ 2009ರ ಕಾಯ್ದೆಗೆ 2024ರಲ್ಲಿ ತಿದ್ದುಪಡಿ ಮಾಡಲಾಗಿದೆ. ಅದರಂತೆ ಬೆದರಿಕೆ ಅಥವಾ ಕರ್ತವ್ಯಕ್ಕೆ ಅಡ್ಡಿಪಡಿಸುವಂತಿಲ್ಲ. ರೋಗಿ ಕಳೆದು ಕೊಂಡ ಕುಟುಂಬದ ದುಃಖಕ್ಕೆ ಸಹಾನುಭೂತಿ ಇದೆ. ನೈಜ ಆರೋಪಗಳಿದ್ದರೆ ಅವುಗಳ ಬಗ್ಗೆ ಕಾನೂನುಬದ್ಧ ತನಿಖೆಯಾಗಬೇಕು. ಬೆದರಿಕೆ, ಅಡ್ಡಿಪಡಿಸುವಿಕೆ ಮತ್ತು ಹಿಂಸಾಚಾರ ಸಲ್ಲದು ಎಂದರು.

ಚಿಕಿತ್ಸೆ ಬಗ್ಗೆ ಸಾರ್ವಜನಿಕರು ಪ್ರಶ್ನಿಸಬಹುದು, ವಿವರಣೆ ಮತ್ತು ದಾಖಲೆ ಕೇಳಬಹುದು. ಅಗತ್ಯವಿದ್ದಲ್ಲಿ ಕಾನೂನಿನಡಿ ಲಭ್ಯವಿರುವ ಪರಿಹಾರ ಮಾರ್ಗ ಅನುಸರಿಸಬಹುದು. ಆದರೆ ಗುಂಪು ಕರೆತಂದು ದುರ್ವರ್ತನೆ ತೋರಬಾರದು. ನಿರ್ಲಕ್ಷ್ಯ ಅಥವಾ ತಪ್ಪಾಗಿದ್ದರೆ ಕಾನೂನು ಪ್ರಕರಣ ಕ್ರಮ ಜರುಗಿಸಲಿ, ಎಲ್ಲವೂ ಕಾನೂನು ಪ್ರಕಾರವೇ ಆಗಲಿ, ಬೆದರಿಕೆ ಅಥವಾ ಗುಂಪು ನ್ಯಾಯದ ಮೂಲಕವಲ್ಲ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ||ಅಬ್ದುಲ್ ಬಶೀರ್, ಡಾ||ರಂಗಲಕ್ಷ್ಮಿ, ಡಾ||ಜಿ.ಎನ್. ಬಸವರಾಜ್, ಡಾ||ಅನೂಪ್, ಡಾ||ಸೌಮ್ಯ ದಿನೇಶ್, ಡಾ||ಪಾಲಾಕ್ಷ, ಡಾ||ಯತೀಶ್ ಇತರರು ಇದ್ದರು.

## ಟ್ರ್ಯಾಕ್ಟರ್ ಡಿಕ್ಕಿ: ವ್ಯಕ್ತಿ ಸಾವು




• ಪ್ರಜೋದಯ ವರದಿ

**ಅರಕಲಗೂಡು:** ರಸ್ತೆಬದಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಗೆ ಟ್ರ್ಯಾಕ್ಟರ್ ಡಿಕ್ಕಿಯಾಗಿ ಸ್ಥಳದಲ್ಲೇ ಮೃತ ಪಟ್ಟಿರುವ ಘಟನೆ ತಾಲ್ಲೂಕಿನ ಹೊಂಡರವಳ್ಳಿಯಲ್ಲಿ ನಡೆದಿದೆ.

ಮಲ್ಲಿಪಟ್ಟಣ ಹೋಬಳಿ ಹೊಳಗೋಡು ಗ್ರಾಮದ ವಿನಯ್ ಮೃತರು. ಹಸುಗಳ ಮೇವಿಗೆ ಜೋಳ ನೋಡಿ ಬರಲು ಹೊಂಡರವಳ್ಳಿಗೆ ಹೋಗಿದ್ದ ಅವರು ವಾಪಾಸ್ ಬರುತ್ತಿದ್ದಾಗ ಹಿಂದಿ ನಿಂದ ಬಂದ ಟ್ರ್ಯಾಕ್ಟರ್ ಡಿಕ್ಕಿಯಾಗಿದೆ. ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### 18 ಎಸೆತ 38 ರನ್: ಜೂನಿಯರ್ ದ್ರಾವಿಡ್ ಅಬ್ಬರ

# ಆಸಿಸ್ ವಿರುದ್ಧ ಭಾರತಕ್ಕೆ 7 ರನ್ ಜಯ

**ಪ್ರಜೋದಯ ವರದಿ**



**ರಾಜ್‌ಕೋಟ್:** ಭಾರತ ತಂಡದ ಮಾಜಿ ನಾಯಕ ರಾಹುಲ್ ದ್ರಾವಿಡ್ ಪುತ್ರ ಅನ್ವಯ್ ದ್ರಾವಿಡ್ ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ಅಂಡರ್ -19 ಭಾರತ ತಂಡದ ಗೆಲುವಿನಲ್ಲಿ ಮಹತ್ತರ ಪಾತ್ರವಹಿಸಿದರು.

ರಾಜ್‌ಕೋಟ್‌ನ ನಿರಂಜನ್ ಶಾ ಕ್ರೀಡಾಂಗಣದಲ್ಲಿ ನಡೆದ ಆಸ್ಟ್ರೇಲಿಯಾ ಮತ್ತು ಭಾರತ ನಡುವಿನ ಅಂಡರ್-19 ಯೂತ್ ಏಕದಿನ ಟೂರ್ನಿಯ ಮೊದಲ ಪಂದ್ಯದಲ್ಲಿ ಭಾರತ ತಂಡ ಪ್ರಬಲ ಆಸ್ಟ್ರೇಲಿಯಾ ವಿರುದ್ಧ 7 ರನ್‌ಗಳ ರೋಚಕ ಗೆಲುವು ಸಾಧಿಸಿತು.

ಮಳೆಯಿಂದಾಗಿ ಪಂದ್ಯವನ್ನು ತಲಾ20 ಓವರ್‌ಗಳಿಗೆ ಸೀಮಿತಗೊಳಿಸಲಾಗಿತ್ತು. ಭಾರತ ಮೊದಲು ಬ್ಯಾಟಿಂಗ್ ಮಾಡಿ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 182 ರನ್ ಗಳಿಸಿತು.

**ಸೆಹ್ವಾಗ್ ಹಾಜರಿ:** ಇನ್ನು ಈ ಪಂದ್ಯದಲ್ಲಿ ಮಾಜಿ ಸ್ಫೋಟಕ ಬ್ಯಾಟರ್ ವೀರೇಂದ್ರ ಸೆಹ್ವಾಗ್ ಪುತ್ರ ಆರ್ಯವೀರ್ ಸೆಹ್ವಾಗ್ ಭಾರತ-19 ಪರ ಚೊಚ್ಚಲ ಪಂದ್ಯವನ್ನಾಡಿದ್ದು ವಿಶೇಷವಾಗಿತ್ತು. ತಮ್ಮ ಮಗನ ಪದಾರ್ಪಣೆಯ ಪಂದ್ಯವನ್ನು ವೀಕ್ಷಿಸಲು ಸೆಹ್ವಾಗ್ ಕೂಡ ಕ್ರೀಡಾಂಗಣದಲ್ಲಿ ಹಾಜರಿದ್ದರು.

ಆರಂಭಿಕ ಆಟಗಾರನಾಗಿ ಕಣಕ್ಕಿಳಿದ ಆರ್ಯವೀರ್ 26 ಎಸೆತಗಳಲ್ಲಿ 28 ರನ್ ಗಳಿಸಿದರು. ಅವರ ಬ್ಯಾಟ್‌ನಿಂದ 5 ಬೌಂಡರಿಗಳು ಬಂದವು. ನಾಯಕ ಲಕ್ಷ್ಯ ರೈಚಂದಾನಿ ಜೊತೆಗೂಡಿ ಮೊದಲ ವಿಕೆಟ್‌ಗೆ 45 ರನ್‌ಗಳ ಜೊತೆಯಾಟ ನೀಡುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು.

**ಭಾರತಕ್ಕೆ ಅನ್ವಯ್ ದ್ರಾವಿಡ್ ಆಸರೆ**

ಭಾರತದ ಇನಿಂಗ್ಸ್ 12ನೇ ಓವರ್‌ನಲ್ಲಿ 88 ರನ್‌ಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ಹಂತದಲ್ಲಿ 6ನೇ ಕ್ರಮಾಂಕದಲ್ಲಿ ಬಂದ ಅನ್ವಯ್ ದ್ರಾವಿಡ್ ಸ್ಫೋಟಕ ಬ್ಯಾಟಿಂಗ್ ಮೂಲಕ ಪಂದ್ಯದ ಚಿತ್ರಣವನ್ನೇ ಬದಲಿಸಿದರು.

ಅನ್ವಯ್ ಕೇವಲ 18 ಎಸೆತಗಳಲ್ಲಿ 38 ರನ್ ಸಿಡಿಸಿದರು. 2 ಬೌಂಡರಿ ಹಾಗೂ 3 ಸಿಕ್ಸರ್‌ಗಳನ್ನು ಬಾರಿಸಿದ ಅವರ ಸ್ಟ್ರೈಕ್‌ರೇಟ್ 211.11 ಆಗಿತ್ತು. ಅಂತಿಮ ಹಂತದಲ್ಲಿ ಭಾರತಕ್ಕೆ ಅಗತ್ಯವಿದ್ದ ವೇಗವನ್ನು ಅನ್ವಯ್ ಅವರ ಬ್ಯಾಟಿಂಗ್ ಒದಗಿಸಿತು.

ಇನ್ನೊಂದೆಡೆ ಯಶವರ್ಧನ್ ಚೌಹಾಣ್ 34 ಎಸೆತಗಳಲ್ಲಿ 54 ರನ್ ಗಳಿಸಿ ಮಿಂಚಿದರು. ಅವರ ಇನಿಂಗ್ಸ್‌ನಲ್ಲಿ 5 ಬೌಂಡರಿ ಹಾಗೂ 2 ಸಿಕ್ಸರ್ ಗಳಿದ್ದವು. ನಾಲ್ಕನೇ ವಿಕೆಟ್ ಪತನದ ಬಳಿಕ ಕ್ರೀಸ್‌ಗೆ ಬಂದ ಅನ್ವಯ್ ಜೊತೆಗೂಡಿ ಚೌಹಾಣ್ 69 ರನ್‌ಗಳ ಮಹತ್ವದ ಜೊತೆ ಯಾಟ ನಡೆಸಿದರು. ಭಾರತ ಅಂತಿಮ 10 ಓವರ್‌ಗಳಲ್ಲಿ ಬರೋಬ್ಬರಿ 108 ರನ್ ಕಲೆಹಾಕಿತು.

**ಆಸಿಸ್ ಹೋರಾಟ ವ್ಯರ್ಥ**

182 ರನ್‌ಗಳ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ-19 ತಂಡ ಒಂದು ಹಂತದಲ್ಲಿ ಗೆಲುವಿನತ್ತ ಸಾಗುವಂತೆ ಕಂಡುಬಂದಿತ್ತು. ಆರಂಭಿಕರಾದ ನೀಲ್ ಪಟೇಲ್ 31 ಎಸೆತಗಳಲ್ಲಿ 45 ಹಾಗೂ ಹೇಡನ್ ಬಾರ್ಬುಲೋವಿಕ್ 24 ಎಸೆತಗಳಲ್ಲಿ 40 ರನ್ ಗಳಿಸಿ ಉತ್ತಮ ಆರಂಭ ನೀಡಿದರು.

ನಂತರ ನಾಯಕ ಜ್ಯಾಕ್ ಕ್ಲೋಸ್ನೆಕ್ ಅಬ್ಬರಿಸಿದರು. ಅವರು ಕೇವಲ 27 ಎಸೆತಗಳಲ್ಲಿ 55 ರನ್ ಸಿಡಿಸಿ ಆಸ್ಟ್ರೇಲಿಯಾ ಗೆಲುವಿನ ಆಸೆ ಹೆಚ್ಚಿಸಿದರು. ಆದರೆ 19ನೇ ಓವರ್‌ನಲ್ಲಿ ಕ್ಲೋಸ್ನೆಕ್ ವಿಕೆಟ್ ಕಳೆದುಕೊಳ್ಳುತ್ತಿದ್ದಂತೆ ಆಸ್ಟ್ರೇಲಿಯಾದ ಗೆಲುವಿನ ಅವಕಾಶವೂ ಕ್ಷೀಣಿಸುತ್ತಾ ಸಾಗಿತು. ಅಂತಿಮವಾಗಿ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 175 ರನ್ ಗಳಿಸಿ 7 ರನ್‌ಗಳಿಂದ ಸೋಲನುಭವಿಸಿತು.

ಭಾರತದ ಪರ ಯಶವರ್ಧನ್ ಚೌಹಾಣ್ ಬ್ಯಾಟಿಂಗ್‌ನಲ್ಲಿ ಅರ್ಧಶತಕ ಸಿಡಿಸಿದ ಬಳಿಕ ಬೌಲಿಂಗ್‌ನಲ್ಲೂ ಮಿಂಚಿದರು. 4 ಓವರ್‌ಗಳಲ್ಲಿ 28 ರನ್ ನೀಡಿ 2 ವಿಕೆಟ್ ಪಡೆದು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಈ ಗೆಲುವಿನೊಂದಿಗೆ ಭಾರತ-19 ತಂಡ ಸರಣಿಯಲ್ಲಿ ಶುಭಾರಂಭ ಮಾಡಿದೆ.

## ಊಪಿನಹಳ್ಳಿಯಲ್ಲಿ ಕೃಷಿ ಜ್ಞಾನಧಾರೆ ಮಾಹಿತಿ ಕೇಂದ್ರ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಾಸನದ ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ತಾಲ್ಲೂಕಿನ ಊಪಿನಹಳ್ಳಿಯಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ಕೃಷಿ ಜ್ಞಾನ ಧಾರೆ ಮಾಹಿತಿ ಕೇಂದ್ರ ಆರಂಭಿಸಿದ್ದಾರೆ.

ವಿದ್ಯಾರ್ಥಿಗಳು ಸಿದ್ಧಪಡಿಸಿದ್ದ ವಿವಿಧ ವಿಭಾಗಗಳ ಚಾರ್ಟ್, ಮಾದರಿ ಮತ್ತು ಪ್ರಾತ್ಯಕ್ಷಿಕೆ ಗಳನ್ನು ಗಣ್ಯರು ಹಾಗು ರೈತರಿಗೆ ಪರಿಚಯಿಸಲಾಯಿತು. ಕೀಟಶಾಸ್ತ್ರ ವಿಭಾಗದಲ್ಲಿ ವಿವಿಧ ಬೆಳೆಗಳ ಕೀಟ ಅವುಗಳಿಂದ ಉಂಟಾಗುವ ಹಾನಿ ಮತ್ತು ಸಮಗ್ರ ಕೀಟ ನಿರ್ವಹಣೆ ಕುರಿತು ವಿವರಿಸಲಾಯಿತು. ರೇಷ್ಮೆ ಕೃಷಿ ಮತ್ತು ಜೇನು ಸಾಕಾಣಿಕೆ ವಿಭಾಗಗಳಲ್ಲಿಯೂ ರೈತರಿಗೆ ಅಗತ್ಯ ಮಾಹಿತಿ ಪಡೆದುಕೊಂಡರು.

ಜಂಟಿ ಕೃಷಿ ನಿರ್ದೇಶಕ ಡಾ.ಪಿ. ರಮೇಶ್ ಕುಮಾರ್, ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ ಸಂಶೋಧನಾ ನಿರ್ದೇಶಕ ಡಾ. ಜಿ. ಎಂ.ದೇವಗಿರಿ, ಕೃಷಿ ಮಹಾವಿದ್ಯಾಲಯ ಡೀನ್ ಬಿ.ಎಸ್.ಬಸವರಾಜು, ಕಾರ್ಯಾಗಾರ ಸಂಯೋಜಕ ಡಾ.ಶಶಿಕಲಾ, ಸಹ ಸಂಯೋಜಕ ಡಾ.ಸ್ಮಿತಾ, ಗಣೇಶ್ ಪ್ರಸಾದ್, ಸಹನಾ, ಚಂದನಾ, ಸಂಧ್ಯಾ, ಗುರುಮೂರ್ತಿ ಮತ್ತಿತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019